# ಜನಶಕ್ತಿ

ಮಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 5 ಸಂಚಿಕೆ 17

ಏಪ್ರಿಲ್ 24, 2011

ರೂ. 5/-

ಪುಟ 16



Blog :janashakthi.wordpress.com
e-mail : js_weekly@yahoo.com






## ಹಜಾರೆ : ಸಂಸದೀಯ ಪ್ರಜಾಪ್ರಭುತ್ವಕ್ಕೆ ಸಲ್ಲದ ತಿರಸ್ಕಾರ



## ಚುನಾವಣೆಗಳು : ಕೇರಳದಲ್ಲಿ ಇಲ್ಲದ ಆಡಳಿತ ವಿರೋಧಿ ಅಲೆ ತಮಿಳುನಾಡಿನಲ್ಲಿ




## ಉಪ ಚುನಾವಣೆಗಳು : ಬಿಜೆಪಿ ಅನೈತಿಕ ರಾಜಕಾರಣ




## ವಿಶ್ವಕಾರ್ಮಿಕ ಸಂಘಗಳ ಮಹಾಧಿವೇಶನ: ಚಳುವಳಿಯಲ್ಲಿ ಮಹಾನ್ ಹೆಜ್ಜೆ

## ಅಂತರಿಕ್ಷದಲ್ಲಿ ಮೊದಲ ದಾಖಲೆ ಬರೆದ ಯೂರಿ ಗಗಾರಿನ್

## ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟ(WFTU) ಅಧಿವೇಶನ

# ವರ್ಗ ದೃಷ್ಟಿಕೋನದ ಕಾರ್ಮಿಕ ಚಳುವಳಿಯಲ್ಲಿ ಒಂದು ಮಹಾನ್ ಹೆಜ್ಜೆ

**ವಿಶ್ವದ ಕಾರ್ಮಿಕ ಚಳುವಳಿಗೆ ಒಂದು ಮಹತ್ವದ ಮುನ್ನಡೆಯನ್ನು ಹಾಗೂ ಹೋರಾಟಕ್ಕೆ ಒಂದು ಮೊನಚನ್ನು ತಂದು ಕೊಡಬಲ್ಲಂತಹ ರೀತಿಯ ವರ್ಗ ದೃಷ್ಟಿಕೋನ ಮೈಗೂಡಿಸಿಕೊಂಡಂತಹ ವಿಶ್ವ ಕಾರ್ಮಿಕ ಸಂಘಟನೆಗಳ ಒಕ್ಕೂಟ (WFTU) ನ ಮಹಾಧಿವೇಶನದ ವರದಿ. ಅದರಲ್ಲಿ ಪಾಲ್ಗೊಂಡು ಸಿಐಟಿಯುನ ಹಿರಿಯ ಮುಖಂಡರಿಂದ**

**ಬಿ.ಮಾಧವ**
ರಾಜ್ಯ ಸಿಐಟಿಯು ಉಪಾಧ್ಯಕ್ಷರು

ವರ್ಗ ದೃಷ್ಟಿಕೋನ, ಅಂತರಾಷ್ಟ್ರೀಯತೆ, ಪ್ರಜಾಸತ್ತಾತ್ಮಕ, ಐಕ್ಯತೆ. ವಿಶ್ವ ಕಾರ್ಮಿಕ ಚಳುವಳಿಯಲ್ಲಿ ಮಗದೊಮ್ಮೆ ಈ ಘೋಷಣೆಗಳು ಮೊಳಗಿದಾಗ ಗ್ರೀಸ್ ದೇಶದ ಅಥೆನ್ಸ್ ನಗರದಲ್ಲಿ ಸೇರಿದ್ದ ವಿಶ್ವ ಕಾರ್ಮಿಕ ವರ್ಗದ ಪ್ರತಿನಿಧಿಗಳು ಮತ್ತು ವೀಕ್ಷಕರು ರೋಮಾಂಚನಗೊಂಡರು. ವಿಶ್ವ ಕಾರ್ಮಿಕ ಚಳುವಳಿಯನ್ನು ವರ್ಗ ದೃಷ್ಟಿಕೋನದಲ್ಲಿ ಬೆಳೆಸಬೇಕೆಂಬ ಚಾರಿತ್ರಿಕ ತೀರ್ಮಾನವನ್ನು ಕ್ಯೂಬಾದ ಹವಾನಾದಲ್ಲಿ ಜರುಗಿದ 15ನೇ ಅಧಿವೇಶನದಲ್ಲಿ ಕೈಗೊಂಡ ನಂತರ ಮೊತ್ತ ಮೊದಲ ಬಾರಿಗೆ ಅಥೆನ್ಸ್‌ನಲ್ಲಿ ಜರುಗಿದ 16ನೇ ಅಧಿವೇಶದ ಉದ್ದಕ್ಕೂ ಹೊಸ ದೃಷ್ಟಿ ಕೋನದ ಸ್ಫೂರ್ತಿ ಚಿಮ್ಮುತ್ತಿತ್ತು. ಉದ್ಘಾಟನಾ ಭಾಷಣದಲ್ಲಿ ವಿಶ್ವ ಕಾರ್ಮಿಕ ಸಂಘಟನೆಗಳ ಒಕ್ಕೂಟ ಡಬ್ಲ್ಯೂಎಫ್‌ಟಿಯು ಪ್ರಧಾನ ಕಾರ್ಯದರ್ಶಿ ಜಾರ್ಜ್ ಮಾವ್ರಿಕೋಸ್ ಅವರು ಹೇಳಿದಂತೆ 'ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟಿನ ತೀವ್ರ ಪರಿಣಾಮಗಳು ಹಾಗೂ ಕಾರ್ಮಿಕ ವರ್ಗ ಮತ್ತು ಜನತೆಯ ಮೇಲೆ ಬಂಡವಾಳಶಾಹಿಗಳು ನಡೆಸುತ್ತಿರುವ ಕ್ರೂರ ದಾಳಿಗಳ ಪರಿಣಾಮವಾಗಿ ನಾವು ಸಖ್ಯತೆ ಮತ್ತು ಸಮರಶೀಲ ಸಂಘರ್ಷದ ದಾರಿಯನ್ನು ತುಳಿಯುವ ಬಲವಂತಕ್ಕೆ ಒಳಗಾಗಿದ್ದೇವೆ.

**ಸಾಮಾನ್ಯವಲ್ಲ**

ಏಪ್ರಿಲ್ 6 ರಂದು ಅಥೆನ್ಸ್ ನಗರದ ಬೃಹತ್ ಕ್ರೀಡಾಂಗಣ ಫೆಲಿರೋ ಪೆವಿಲಿಯನ್‌ನಲ್ಲಿ ಪ್ರೇಕ್ಷಕರ ಗ್ಯಾಲರಿಗಳಲ್ಲಿ ಕಿಕ್ಕಿರಿದು ತುಂಬಿದ ಗ್ರೀಕ್ ಕಾರ್ಮಿಕರ ಹರ್ಷೋದ್ಗಾರಗಳ ನಡುವೆ ಕ್ರೀಡಾಂಗಣದಲ್ಲಿ ನೆರೆದಿದ್ದ 120 ದೇಶಗಳ ಪ್ರತಿನಿಧಿಗಳು ನೋಡಿ ಅನುಭವಿಸಿದ್ದು ಒಂದು ಸಾಮಾನ್ಯ ಬಹಿರಂಗ ಸಭೆಯ ದೃಶ್ಯವಾಗಿರಲಿಲ್ಲ. ಅಧಿವೇಶನದ ಅತಿಥೇಯ ಸಂಘಟನೆಯಾದ ಆಲ್ ವರ್ಕರ್ಸ್ ಮಿಲಿಟೆಂಟ್ ಫ್ರಂಟ್ (ಪಾಮೆ)ಯ ನೂರುಗಟ್ಟಲೆ ಧ್ವಜಗಳನ್ನು ಬೀಸುತ್ತಾ ಅಂತಾರಾಷ್ಟ್ರೀಯ ಕಾರ್ಮಿಕ ನಾಯಕರ ಭಾಷಣಗಳ ಮಧ್ಯದಲ್ಲಿ ಆಗಿಂದಾಗ್ಗೆ ಹರ್ಷೋದ್ಗಾರಗಳನ್ನು ವ್ಯಕ್ತಪಡಿಸುತ್ತಾ ಬಹಿರಂಗ ಅಧಿವೇಶನದ ಪ್ರತಿಯೊಂದು ಕ್ಷಣವನ್ನೂ ಅನುಭವಿಸುತ್ತಿದ್ದ ಗ್ರೀಕ್ ಕಾರ್ಮಿಕರು ಬರೇ ಪ್ರೇಕ್ಷಕರಾಗಿರಲಿಲ್ಲ. ಸುಮಾರು ಐದು ತಾಸುಗಳ ಕಾಲ ನಡೆದ ಬಹಿರಂಗ ಅಧಿವೇಶನದಲ್ಲಿ ಒಬ್ಬರೂ ತಮ್ಮ ಆಸನ ಬಿಟ್ಟು ಕದಲದೆ ತನ್ಮಯತೆಯಿಂದ, ಕ್ರಿಯಾಶೀಲವಾಗಿ ಭಾಗವಹಿಸಿದ್ದು, ಇತರ ದೇಶಗಳ ಕಾರ್ಮಿಕರು ಅನುಕರಿಸಬೇಕಾದ ಆದರ್ಶವೆನ್ನಬಹುದು.

ಉದ್ಘಾಟನಾ ಭಾಷಣವನ್ನು ಸಮಾರೋಪ ಗೊಳಿಸುತ್ತಾ, ಡಬ್ಲ್ಯೂಎಫ್‌ಟಿಯು ಪ್ರಧಾನ ಕಾರ್ಯದರ್ಶಿ ಜಾರ್ಜ್ ಮಾವ್ರಿಕೋಸ್ ಹೇಳಿದ ಮಾತುಗಳು ಮುಂದಿನ ನಾಲ್ಕು ದಿನಗಳ ಅಧಿವೇಶನಕ್ಕೆ ದಿಕ್ಸೂಚಿಗಳಾಗಿದ್ದವು. ಜಾಗತಿಕ ಕಾರ್ಮಿಕ ವರ್ಗಕ್ಕೆ ಇಂದು ಯಾವ ರೀತಿಯ ಅಂತಾರಾಷ್ಟ್ರೀಯ ಚಳುವಳಿ ಅಗತ್ಯವಿದೆ?

**ದಿಕ್ಸೂಚಿ**

1. ಬಂಡವಾಳಶಾಹಿ ವ್ಯವಸ್ಥೆಯೊಂದಿಗೆ ಸೇರಿಕೊಂಡು ಅದನ್ನು ಆಧುನೀಕರಣಗೊಳಿಸುವ ಚಳುವಳಿಯೇ? ಅಥವಾ ಕಾರ್ಮಿಕ ವರ್ಗ ಮತ್ತು ಅದರ ಸಹಯೋಗಿಗಳು ಜೊತೆ ಸೇರಿ ಬಂಡವಾಳಶಾಹಿಗಳೊಂದಿಗೆ ನಿರಂತರ ಸಂಘರ್ಷ ನಡೆಸಿ ಆ ಮೂಲಕ ಬಂಡವಾಳಶಾಹಿ ವ್ಯವಸ್ಥೆಯನ್ನೇ ಕಿತ್ತೊಗೆಯುವ ಚಳುವಳಿಯೇ?

2. ಇರಾಕ್, ಅಫಘಾನಿಸ್ಥಾನ, ಲಿಬಿಯಾ, ಯುಗೋಸ್ಲಾವಿಯಾಗಳಲ್ಲಿ ಸಾಮ್ರಾಜ್ಯಶಾಹಿಗಳ ಯುದ್ಧಕ್ಕೆ ಬೆಂಬಲ ನೀಡುವ ಚಳುವಳಿಯೇ? ಅಥವಾ ಸಾಮ್ರಾಜ್ಯಶಾಹಿಯನ್ನೂ ಅನ್ಯಾಯದ ಯುದ್ಧಗಳನ್ನೂ



ವಿರೋಧಿಸುತ್ತಾ ಎಲ್ಲಾ ದೇಶಗಳ ಜನತೆಯ ನಡುವೆ ಶಾಂತಿ ಮತ್ತು ಮೈತ್ರಿಗಾಗಿ ಹೋರಾಡುವ ಚಳುವಳಿಯೇ?

3. ಕಾರ್ಮಿಕ ವರ್ಗವನ್ನು ಸಂಘಟಿಸಿ ವರ್ಗ ಸಹಕಾರದ ಪಥದಲ್ಲಿ ಗುತ್ತೇದಾರಿಗಳೊಂದಿಗೆ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಹಕರಿಸುವ ಚಳುವಳಿಯೇ? ಅಥವಾ ವರ್ಗ ಹೋರಾಟದ ಪಥದಲ್ಲಿ ಸಾಗಿ ಕಾರ್ಮಿಕ ವರ್ಗದ ವರ್ಗ ಹಿತಾಸಕ್ತಿಗಳ ಆಧಾರದಲ್ಲಿ ಇಡೀ ಕಾರ್ಮಿಕ ವರ್ಗವನ್ನು ಐಕ್ಯಗೊಳಿಸುವ ಚಳುವಳಿಯೇ?

4. ಕ್ಯೂಬಾವನ್ನು ಅವಹೇಳನ ಮಾಡುವ, ವೆನಿಜುವೆಲವನ್ನು ಅಪಮಾನಗೊಳಿಸುವ, ಇಕ್ವೆಡೋರ್, ಬೊಲಿವಿಯಾ, ಇರಾಕ್ ಮತ್ತು




ಉತ್ತರ ಕೊರಿಯಾವನ್ನು ನಿಂದಿಸುವ ಇಸ್ರೇಲ್‌ನ ನೀತಿಗೆ ಬೆಂಬಲ ಕೊಡುವ ಚಳುವಳಿಯೇ? ಅಥವಾ ಪ್ಯಾಲೇಸ್ತೀನಿಯನ್ ಜನತೆ ತಮ್ಮದೇ ಮಾತೃ ಭೂಮಿಯನ್ನು ಪಡೆಯುವ, ಕ್ಯೂಬಾದ ಕ್ರಾಂತಿಗೆ ಬೆಂಬಲ ನೀಡುವ ಮತ್ತು ತಮ್ಮ ವರ್ತಮಾನ ಮತ್ತು ಭವಿಷ್ಯದ ಕುರಿತು ನಿರ್ಧರಿಸಲು ಪ್ರತಿಯೊಂದು ಜನತೆಯೂ ಅಧಿಕಾರ ಹೊಂದಿರುವ ಕಾರ್ಮಿಕ ವರ್ಗದ ಅಂತಾರಾಷ್ಟ್ರೀಯ ಚಳುವಳಿಯೇ?

5. ಅಧಿಕಾರಶಾಹಿಗಳು, ವಿಲಾಸೀ ಕಛೇರಿಗಳು, ಭ್ರಷ್ಟಾಚಾರ ಮತ್ತು ಅವ್ಯವಹಾರಗಳಿಂದ ತುಂಬಿದ ಭಾರೀ ವೇತನಗಳು ಇರುವ ಚಳುವಳಿಯೇ? ಅಥವಾ ಕಾರ್ಮಿಕ ವರ್ಗದ ಜನತೆಗೆ, ಬಡರೈತರ ಜೊತೆಗೆ, ಯುವಜನ, ಮಹಿಳೆಯರು, ಭೂ ರಹಿತರು, ವಲಸೆಗಾರರು ಮತ್ತು ಸ್ಥಳಿಯರ ಜೊತೆಗೆ ಗುರುತಿಸಿಕೊಂಡಿರುವ ಸ್ಥಳೀಯ, ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಮಟ್ಟದ ನಾಯಕರನ್ನು ಹೊಂದಿದ ಚಳುವಳಿಯೇ? ಈ ಪ್ರಶ್ನೆಗಳಲ್ಲಿ ನಮ್ಮ ಉತ್ತರ ಸ್ಪಷ್ಟವಾಗಿದೆ. ಸಾಮ್ರಾಜ್ಯಶಾಹಿಯ ವಿರುದ್ಧವಾಗಿ ಮತ್ತು ಬಂಡವಾಳಶಾಹಿಯ ವಿರುದ್ಧವಾಗಿ ವರ್ಗ ಹೋರಾಟದ ದಾರಿಯಲ್ಲಿ ನಾವು ಮುಂದುವರಿಯುತ್ತೇವೆ. ಮಾನವನಿಂದ ಮಾನವನ ಶೋಷಣೆಯಿಲ್ಲದ ಒಂದು ಜಗತ್ತಿಗಾಗಿ ಹೋರಾಡುತ್ತೇವೆ."

ಡಬ್ಲ್ಯೂಎಫ್‌ಟಿಯು ಅಧ್ಯಕ್ಷರಾದ ಮಹಮ್ಮದ್ ಷಾಬಾನ್ ಅಜೌಜ್ ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷ ಮಂಡಳಿಯಲ್ಲಿ ಭಾರತದ ಪ್ರತಿನಿಧಿಗ ಪರವಾಗಿ ಸಿಐಟಿಯು ಕಾರ್ಯದರ್ಶಿಗಳಲ್ಲೊಬ್ಬರಾ[illegible] ಕೆ.ಹೇಮಲತಾ ಅವರಿದ್ದರು.

**ವಿಶಾಲ ಪ್ರಾತಿನಿಧ್ಯ**


120 ದೇಶಗಳಿಂದ ಬಂದ 636 ಮಂ[illegible] ಪ್ರತಿನಿಧಿಗಳು ಮತ್ತು 151 ವೀಕ್ಷಕರು ಭಾಗವಹಿಸಿ[illegible] ಪ್ರತಿನಿಧಿ ಅಧಿವೇಶನವು ಅಥೆನ್ಸ್ ನಗರದ ಸ್ಟೇಡಿಯ[illegible] ಆಫ್ ಪೀಸ್ ಅಂಡ್ ಫ್ರೆಂಡ್‌ಶಿಪ್‌ನಲ್ಲಿ ಏಪ್ರಿ[illegible] 7 ರಿಂದ 9ರವರೆಗೆ ನಡೆಯಿತು. ಡಬ್ಲ್ಯೂಎಫ್‌ಟಿಯ[illegible] ಅಧ್ಯಕ್ಷರಾದ ಮಹಮ್ಮದ್ ಷಾಬಾನ್ ಅಜೌ[illegible] ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ[illegible] ಜಾರ್ಜ್ ಮಾವ್ರಿಕೋಸ್ ಅವರು ಅಥೆನ್[illegible] ಒಡಂಬಡಿಕೆ (Athens Pact) ಎಂಬ ವರದಿಯ[illegible] ಮಂಡಿಸಿ ಮಾತನಾಡಿದರು. ವರದಿಯ ಮೇಲೆ ಎ[illegible] ದೇಶಗಳ ಪ್ರತಿನಿಧಿಗಳು ಅತ್ಯಂತ ಉತ್ಸಾಹದಿಂ[illegible] ಭಾಗವಹಿಸಿ ಮಾತನಾಡಿದರು. ವರ್ಗ ದೃಷ್ಟಿಕೋನ[illegible] ಚಳುವಳಿಯನ್ನು ಜಗತ್ತಿನಾದ್ಯಂತ ಕಟ್ಟಬೇಕು ಹಾಗು[illegible] ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಗಾ[illegible] ದುಡಿಯಬೇಕು ಎಂಬ ಅಂಶಗಳಲ್ಲಿ ಎ[illegible] ಪ್ರತಿನಿಧಿಗಳು ಸ್ಫೂರ್ತಿಯಿಂದ ಸಹಮ[illegible] ವ್ಯಕ್ತಪಡಿಸಿದರು. ಸಿಐಟಿಯು ಪರವಾಗಿ ರಾಷ್ಟ್ರೀಯ[illegible] ಅಧ್ಯಕ್ಷರಾದ ಎ.ಕೆ.ಪದ್ಮನಾಭನ್ ಮಾತನಾಡಿದರು[illegible]

**ಸರ್ವಾನುಮತವೆಂದರೂ ಮತ ಪರೀಕ್ಷೆ**

ಅಧಿವೇಶನದ ಅತ್ಯಂತ ಸ್ಫೂರ್ತಿಯುತ ಮ[illegible] ರೋಮಾಂಚಕ ಕ್ಷಣಗಳು ಕಂಡು ಬಂದದ್ದು, ಪ್ರಧಾ[illegible] ಕಾರ್ಯದರ್ಶಿಯ ಆಯ್ಕೆಯ ಸಮಯದಲ್ಲಿ, ಈ ತ[illegible] ಜನರಲ್ ಸೆಕ್ರೆಟರಿ ಎಂದು ಕರೆಯುತ್ತಿದ್ದ ಹುದ್ದೆ ಇ[illegible] ಮುಂದೆ ಸೆಕ್ರೆಟರಿ ಜನರಲ್ ಎಂದು ಕರೆಯಲ್ಪಡುತ್ತ[illegible] ಈ ಹುದ್ದೆಗೆ ನಾಮಪತ್ರ ಸಲ್ಲಿಸಿದ್ದವರು 'ಪಾಮೆ'[illegible] ನಾಯಕರಾದ ಜಾರ್ಜ್ ಮಾವ್ರಿಕೋಸ್ ಒಬ್ಬರ[illegible] ಆಗಿದ್ದರು. ಆದರೂ ಉನ್ನತ ಪ್ರಜಾಸತ್ತಾತ[illegible] ಸಂಪ್ರದಾಯವನ್ನು ಪಾಲಿಸುವ ಉದ್ದೇಶದಿಂ[illegible] ಮತದಾನ ಮಾಡಲೇಬೇಕೆಂದು ಕಾಂ. ಜಾರ್ಜ್[illegible] ಒತ್ತಾಯಿಸಿದ್ದರು. ಮತದಾನದ ವಿವಿಧ ವಿಧಾನಗಳ[illegible] ಅಧ್ಯಕ್ಷ ಮಂಡಳಿಯಲ್ಲಿ ಚರ್ಚಿಸಿದ ನಂತ[illegible] ಪ್ರತಿನಿಧಿಗಳು ತಮ್ಮ ಕೆಂಪು ಪ್ರತಿನಿಧಿ ಬ್ಯಾಜ್‌ಗಳ[illegible] ಎತ್ತಿ ಹಿಡಿದು ಮತದಾನ ಮಾಡಬೇಕೆಂ[illegible] ನಿರ್ಧರಿಸಲಾಯಿತು. ಎಲ್ಲಾ ಪ್ರತಿನಿಧಿಗಳು ಎ[illegible] ನಿಂತು ಜಾರ್ಜ್ ಮಾವ್ರಿಕೋಸ್ ಪರವಾ[illegible] ಬ್ಯಾಜ್‌ಗಳನ್ನು ಎತ್ತಿ ಹಿಡಿದು ಮತದಾನ ಮಾಡಿ[illegible] ಕ್ಷಣ ರೋಮಾಂಚಕವಾಗಿತ್ತು. ಅನಂತರ ವೀಕ್ಷಕರ[illegible] ತಮ್ಮ ನೀಲಿ ಬ್ಯಾಜ್‌ಗಳನ್ನು ಎತ್ತಿ ಹಿಡಿದು ಜಾರ್ಜ್ ಮಾವ್ರಿಕೋಸ್‌ರ ಆಯ್ಕೆಗೆ ಸಹಮತ ವ್ಯಕ್ತಪಡಿಸಿದರು[illegible] ಪ್ರಚಂಡ ಕರತಾಡನ ಮತ್ತು ಘೋಷಣೆಗಳ ನಡು[illegible]

ಪುಟ 4

ಕನ್ನಡ ವಾರಪತ್ರಿಕೆ




# ಛಲ ಬೇಕು, ಬಲ ಬೇಕು

ಅಬ್ಬರ ವೀಗ ಇಳಿದಿದೆ. ಬೇಡಿಕೆಗೆ ಕೇಂದ್ರ ಸರ್ಕಾರ ಒಪ್ಪಿದೆ. ಅಂದ ಮಾತ್ರಕ್ಕೆ ಮುಂದೆ ಏನು? ಹೇಗೆ? ಎಂಬ ಪ್ರಶ್ನೆ ಇಲ್ಲವಾಗಿಲ್ಲ. ನಿಜಕ್ಕೂ ದೇಶದಲ್ಲಿ ಭ್ರಷ್ಟಾಚಾರವನ್ನು ಮಟ್ಟಹಾಕುವಲ್ಲಿ ಕೇಂದ್ರ ಸರ್ಕಾರ ಪ್ರಾಮಾಣೀಕವಾಗಿ ಪ್ರಯತ್ನಿಸುವುದೇ? ಇದಕ್ಕೂ ಮೊದಲು ಹಲ್ಲು, ಉಗುರುಗಳಿರುವ ಅಗತ್ಯವೆನಿಸಿದಾಗ ಕಚ್ಚಿಬಿಡುವ ಲೋಕ್‌ಪಾಲ್ ಮಸೂದೆಯನ್ನು ರೂಪಿಸಿ, ಜಾರಿಗೊಳಿಸಲಿದೆಯೇ?

**ಹುತ್ತನೊಳಗಿನ ಹಾವು**

ಇಂಥಹ ಹಲವು ಹನ್ನೊಂದು ಪ್ರಶ್ನೆಗಳು ಜನರ ತಲೆಯಲ್ಲಿ ಸಂಶಯಿಸಲು ಸಕಾರಣಗಳಿವೆ. 1966 ರಿಂದಲೂ ಭ್ರಷ್ಟಾಚಾರವನ್ನು ಮಟ್ಟಹಾಕುವ ಮಸೂದೆಯ ಅವತಾರ, ಪುನರ್‌ಅವತಾರ ತಾಳಿ ಎಂಟು ಬಾರಿ ಸಂಸತ್ತಿನಲ್ಲಿ ಮಂಡಿಸಲ್ಪಟ್ಟರೂ ಅದನ್ನು ಅಂಗೀಕರಿಸಲಾಗಿಲ್ಲ. ಪ್ರಬಲ ಲೋಕಪಾಲ್ ಮಸೂದೆಯನ್ನು ಅಂಗೀಕರಿಸಿರೆಂದು ಎಡಪಕ್ಷಗಳು, ಹಲವು ಪ್ರಗತಿಪರರು ದಶಕಗಳ ಹಿಂದಿನಿಂದಲೂ ಆಗ್ರಹಿಸುತ್ತಾ ಬಂದಿದ್ದರೂ, ಅದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಆದರೆ ಭ್ರಷ್ಟಾಚಾರದ ವಿರುದ್ಧ ಹೋರಾಡುವ 'ಛಲ'ವನ್ನು ಹೇಳುವುದನ್ನು ಮರೆಯಲಿಲ್ಲ. ಹೀಗೆ ಪುನರ್ರಪಿ ಶೃಂಗಾರಗೊಂಡ ಮಸೂದೆ ಹುತ್ತಿನೊಳಗಿನಿಂದ ಆಗಾಗ ತಲೆ ಹೊರಚಾಚಿ ಎರಡೆಳೆ ನಾಲಿಗೆಯಾಡಿಸಿ ಹುತ್ತಿನೊಳಗೆ ಸೇರಿಕೊಳ್ಳುತ್ತಿತ್ತೇ ಹೊರತು ಹೊರಬಂದು ಯಾರನ್ನೂ ಕಚ್ಚಲಿಲ್ಲ.

**ಬೆಳೆದ ಭ್ರಷ್ಟಾಚಾರ**

ಈಗಂತೂ ಜಾಗತೀಕರಣದ ಜಾರಿಯ 1980, ವಿಶೇಷವಾಗಿ 1990ರ ದಶಕಗಳ ನಂತರದ ಈ ವರುಷಗಳಲ್ಲಿ ಭ್ರಷ್ಟಾಚಾರ ಹತ್ತಾರುಪಟ್ಟು ಹೆಚ್ಚಿತು ಮಾತ್ರವಲ್ಲ, ಅದರ ಗಾತ್ರಮ ಪರಿಣಾಮಗಳೋ ಘೋರ, ಭೀಕರ. ದೇಶವೊಂದು ಒಪ್ಪಿಕೊಂಡ ನೀತಿ ನಿಲುವುಗಳನ್ನೇ ಬುಡಮೇಲು ಮಾಡುವಲ್ಲಿ ಭ್ರಷ್ಟ ಹಣ ಕೋಟಿ ಕೋಟಿಗಳಾಗಿ ಹರಿದಿದೆ. ಸ್ವಿಸ್ ಬ್ಯಾಂಕ್, ಮುಂತಾದೆಡೆ ಕಪ್ಪು ಹಣ ಜಮಾವಣೆಗೊಂಡಿದೆ. ಅಂದು ರಾಜೀವ್‌ಗಾಂಧಿ ಸರ್ಕಾರದ ಭೋಫೋರ್ಸ್ ಹಗರಣದ ಮೊತ್ತ 64 ಕೋಟಿ. ಆದರೆ ಇಂದು ಒಂದೇ 2 ಜಿ ಸ್ಪೆಕ್ಟ್ರಂ ಹಗರಣ 1ಲಕ್ಷ 76 ಸಾವಿರ ಕೋಟಿ! ಓಹ್! ಎಲ್ಲಿಂದ ಎಲ್ಲಿಯವರೆಗೆ? ಆಹಾ! ಭಾರತ ಬೆಳೆದಿದೆ! ವಿಶ್ವ ನಕಾಶೆಯಲ್ಲಿ, ಆಳುವವರ ನಾಲಿಗೆಯಲ್ಲಿ ಬೆಳಗಿದೆ!

**ಪಿಡುಗಾಗಿ**

ಉದಾರೀಕರಣ, ಜಾಗತಿಕರಣದ ನೀತಿಗಳೇ ಹಾಗೆ. ದೇಶದ ಪರಂಪರೆ, ಸಾಮಾಜಿಕ ರಾಜಕೀಯ ಪರಿಭಾಷೆಯನ್ನೇ ಆರಂಭದಲ್ಲಿ ಹವಾಲಾ ಹಗರಣ ಹೊರಬಂದಾಗ ಅಂದು ಎಡಪಂಥೀಯರು ಜಾಗತಿಕ ಅನುಭವದಿಂದ ಹೇಳಿದ್ದು 'ಇದು ಇನ್ನೂ ಆರಂಭ, ಇದರ ನೂರಾರು ಪಟ್ಟು ಹೊಸ ಹಗರಣಗಳು ಮುಂದೆ ಬರಲಿವೆ,' ಎಂದು. ಈ ಆರೆಂಟು ವರ್ಷಗಳಲ್ಲಿಯೇ ಎನ್.ಡಿ.ಎ, ಯುಪಿಎ2 ನಡೆಸಿರುವ ಹಗರಣಗಳು ಭಾರತದ ಇತಿಹಾಸದಲ್ಲೇ ಕಂಡು ಕೇಳರಿಯದಂತಹವು. ಇದು ಮೇಲ್ ಹಂತದ್ದಾದರೆ ಕೆಳಗಿನ ಆಡಳಿತದ ಎಲ್ಲಾ ಹಂತಗಳಲ್ಲಿ ಭ್ರಷ್ಟಾಚಾರ, ಲಂಚ ದೋಚುವ ಅಧಿಕಾರಶಾಹಿ, ಆಳುವ ಪಕ್ಷ, ಆಳುವ ವರ್ಗಗಳ ಸುಲಿಗೆಯಿಂದ ಬಾಧಿತರಾಗದ




ಜನವೇ ಇಲ್ಲವೇನೋ ಎಂಬಂತೆ! ಮಹಾ ಅರ್ಬುದದಂತೆ, ಏಡ್ಸ್‌ನಂತೆ ಪೀಡಕವಾಗಿ ಹರಡಿದೆ.

ಇಂತಹ ಸ್ಥಿತಿಯೆದುರು ಜನತೆ ಕುದಿದಿದ್ದರೆ, ಅಸಹಾಯಕರಾಗಿದ್ದಾರೆ. ಕೆಲವರು ಅಂಗೀಕರಿಸಿ, ಅನ್ಯ ಮಾರ್ಗವಿಲ್ಲದೆ ಹೊಂದಿಕೊಂಡು ಬಿಟ್ಟಿದ್ದಾರೆ. ಹಲವಾರು ಫಲಾನುಭವಿಗಳಾಗಲು ಹಾತೊರೆದಿದ್ದಾರೆ.

**ಪಾಪಾತ್ಮರು ಪವಿತ್ರರು!**

ಆದ್ದರಿಂದಲೇ ಕಳೆದ ವಾರ ದೆಹಲಿಯ 'ಜಂತರ್‌ಮಂತರ್' ಎದುರಿನಲ್ಲಿ ಆರಂಭಗೊಂಡ ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ, ಕೇಜ್ರಿವಾಲ್, ಶಾಂತಿಭೂಷಣ್ ರಂಥಹವರ ಹೋರಾಟ, ಉಪವಾಸ ಸತ್ಯಾಗ್ರಹ ದೇಶದ ಜನರ ಗಮನ ಸೆಳೆಯಿತು. ರಾಜ್ಯದಲ್ಲಿ ಬೆಂಗಳೂರಿನಲ್ಲಿ ವಿಶೇಷವಾಗಿ ನಗರಗಳ ಮಧ್ಯಮ ವರ್ಗವನ್ನು ಪ್ರಭಾವಿಸಿತು. ಇದಕ್ಕೆ ಮುಖ್ಯಕಾರಣ ಹಿಂದೆಲ್ಲಾ ಸುಮ್ಮನಿದ್ದ ಟಿ.ವಿ, ಪತ್ರಿಕೆ ಮಾಧ್ಯಮಗಳು ಹಗಲು ರಾತ್ರಿ ಪ್ರಚಾರ ನೀಡಿ ಭ್ರಷ್ಟಾಚಾರದ ವಿರುದ್ಧದ ಹೋರಾಟಕ್ಕೆ 'ಕೈ' ಜೋಡಿಸಿದವು. ಈ ಸತ್ಯಾಗ್ರಹಕ್ಕೆ ಹಲವಾರು ಜನ ಸಹಜವಾಗಿ ಸೆಳೆಯಲ್ಪಟ್ಟರು. ಇನ್ನೂ ಕೆಲವರು 'ಪಾಪಾತ್ಮರು' ಸತ್ಯಾಗ್ರಹ ಟೆಂಟ್‌ಗಳತ್ತ ಒಂದು ಪವಿತ್ರರಾದರು! ಸರ್ಕಾರಕ್ಕೆ ತೆರಿಗೆ ಕಟ್ಟದ ಇನ್ಫೋಸಿಸ್, ಸಂಸದ ದುಡ್ಡುಮಾಡುವ ದಂಧೆಯಲ್ಲಿರುವ ಬಿ.ಪಿ.ಎಲ್ ಕಂಪನಿಯ ರಾಜೀವ ಚಂದ್ರಶೇಖರ್, ಲಿಕ್ಕರ್ ಲಾಭಿ ಮಲ್ಯಾ... ಓಹ್. ಭ್ರಷ್ಟಾಚಾರದ ಬಗ್ಗೆ ಎಷ್ಟೊಂದು ಪ್ರತಿಷ್ಠಿತ ಜನ, 'ಎರಡನೆಯ ಸ್ವಾತಂತ್ರ್ಯ ಸಂಗ್ರಾಮ' ದಲ್ಲಿ ಹಿಂದೆ ಬೀಳುವುದುಂಟೆ?

ಇದರೊಟ್ಟಿಗೆ ಭೂಗತದೊರೆ ಮುತ್ತಪ್ಪ ರೈಯವರ ಜಯಕರ್ನಾಟಕ ನಾರಾಯಣಗೌಡರ ಕರ್ನಾಟಕ ರಕ್ಷಣಾ ವೇದಿಕೆಯಂಥವರೂ ತಮ್ಮ ಸಾಥ್ ನೀಡಿದ್ದು, ಈ ಸಂಗತಿಗಳನ್ನು ಪ್ರಸ್ತಾಪಿಸಲು ಕಾರಣ ಅಲ್ಲಿನ ಹೋರಾಟದ ಸ್ವರೂಪ. ಭ್ರಷ್ಟಾಚಾರದ ನಿಜ ವಿರೋಧಿಗಳು ಸಹ ಅಲ್ಲಿದ್ದರು. ಒಂದಿಲ್ಲ ಒಂದು ರೀತಿಯ ಭ್ರಷ್ಟಾಚಾರ ಬದುಕಾಗಿಸಿಕೊಂಡ ಉದ್ಯಮಿಗಳು ತಮ್ಮದೇ ವಿಶಿಷ್ಟ ಶೈಲಿ ಮುಸುಕುಧಾರಿಗಳಾದ ಸ್ವದೇಶಿ, ವಿದೇಶಿ ನೆರವಿನ ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ)ಗಳು . ಕೆಲ ವ್ಯಕ್ತಿಗಳು ಅಣ್ಣಾ ಹಜಾರೆಯವರಿಗೆ ಬೆಂಬಲಾರ್ಥವಾಗಿ ಅಣಿನೆರೆದಿದ್ದರು. ಮಾಧ್ಯಮಗಳ ವಿಪರೀತ ಒರಾತದ ಜನಪ್ರಿಯತೆಯ ಪಾಲು ಪಡೆಯುವ ತವಕವೂ ಮೇಲುಗೈ ಪಡೆದಿದ್ದು, ಇಲ್ಲಿ ಬಂದವರಲ್ಲಿ ವಿಶಾಲವಾಗಿ ಭ್ರಷ್ಟಾಚಾರದ ವಿರೋಧಿಗಳು ಬಹುಸಂಖ್ಯೆಯಲ್ಲಿದ್ದರು. ಅಥವಾ ನಯವಾಗಿ ಮೌನವಾಗಿ ಬೆಂಬಲಿಸುವವರು ಕೂಡ.

ಹೋರಾಟದ ಬೆಂಬಲಕ್ಕೆ ಅಥವಾ ಭ್ರಷ್ಟಾಚಾರ ವಿರೋಧಕ್ಕೆ ಒಂದು ಖಚಿತ, ಆಳ ತಿಳುವಳಿಕೆ ಹೋರಾಟದಲ್ಲಿ ತೊಡಗಿದವರಿಗೆ ಇತ್ತು ಎಂದಲ್ಲ. ಮುಖ್ಯವಾಗಿ ಲೋಕಪಾಲ್ ಮಸೂದೆ ಅಥವಾ ಜನ ಲೋಕಪಾಲ್‌ನ ಅದಕ್ಕಾಗಿ ಒತ್ತಾಯಿಸುವ

ಪುಟ 10 ಕ್ಕೆ

## ಹೀಗೊಂದಿಷ್ಟು ತುಂಡು ಸುದ್ದಿಗಳು

ಬೆಂಗಳೂರಿನ ಸ್ವಾತಂತ್ರ್ಯ ಪಾರ್ಕ್ ಹಳೇ ಸೆಂಟ್ರಲ್ ಜೈಲ್) ಮುಂಭಾಗ ನಡೆದ ಬೆಂಬಲಾರ್ಥ ಚಳುವಳಿ ಜನರ ಗಮನ ಸೆಳೆಯಿತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ.ಯು.ಆರ್. ಅನಂತಮೂರ್ತಿ, ಚಿಂತಕರಾದ ಪ್ರೊ.ಜಿ.ಕೆ.ಗೋವಿಂದರಾವ್, ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಹೆಚ್.ಎಸ್.ದೊರೆಸ್ವಾಮಿ ಮುಂತಾದವರು ಭಾಗವಹಿಸಿದ್ದರು. ವಿಶೇಷವಾಗಿ ದೊರೆಸ್ವಾಮಿಯವರು ಕಾಂಗ್ರೆಸ್, ಬಿಜೆಪಿ ಹಗರಣಗಳನ್ನು ನಿರ್ದಿಷ್ಟವಾಗಿ ಪ್ರಸ್ತಾಪಿಸಿದರು. ಅಲ್ಲಿ ಕೆಲವರಿಗೆ ಕಸಿವಿಸಿಯಾಯಿತಂತೆ.

• • •

ದಿನಗಳೆರಡಾದಾಗ ಸತ್ಯಾಗ್ರಹಕ್ಕೆ ತಾರಾರಂಗು ಬಂದುಬಿಟ್ಟಿತು. ಉಪ್ಪಿ, ಪೂಜಾಗಾಂಧಿ ಹಾಗೂ ಟಿ.ವಿ. ದಾರವಾಹಿ ಸಿನಿಮಾ ನಿರ್ದೇಶಕರು ನಿರ್ಮಾಪಕರು ಅಲ್ಲಿ ನೆರೆದಿದ್ದರು. ಸಿನಿಮಾ ರಂಗ ನಡೆಯೋದೇ ಕಪ್ಪು ಹಣದಲ್ಲಿ ಎಂಬ ಸತ್ಯಮರೆತದ್ದದು ಆಕಸ್ಮಿಕವೇನಲ್ಲ. ಆದಾಯ ತೆರಿಗೆ ಕಟ್ಟಲಾಗದ ಕೋಟ್ಯಾಧೀಶರು ಕೂಡ ಭ್ರಷ್ಟಾಚಾರದ ವಿರುದ್ಧ ಹೋರಾಡಬಾರದೆಂದು ಎಲ್ಲಿದೆ ಹೇಳಿ!

• • •

ಉಪವಾಸ ಸತ್ಯಾಗ್ರಹದ ಟೆಂಟ್‌ಮುಂದೆ ನೇರ ಪ್ರಸಾರ ಮಾಡಲೆಂದೇ ಸುವರ್ಣ ಟಿ.ವಿ., ಈ. ಟಿ.ವಿ., ಉದಯ ಟಿ.ವಿ, ಟಿ.ವಿ.9, ಎನ್.ಡಿ.ಟಿ.ವಿ ಇತ್ಯಾದಿಗಳು ಬುಟ್ಟಿಯನ್ನು (ಒ.ಬಿ.) ತೆರೆದೇ ನಿಂತಿದ್ದರು. ಬಂದ ಬಂದವರ ಬೈಟ್ ತೆಗೆದುಕೊಳ್ಳಲಾಗುತ್ತಿತ್ತು. ರೋಮಾಂಚನಗೊಂಡು ಉಸಿರು ಹಿಡಿದು ವರದಿ ಮಾಡಲಾಗುತ್ತಿತ್ತು. ಹೇಳಿ ಹೇಳಿ ಬೇಸರವಾದಾಗ ನಡುನಡುವೆ ಹಾಡು ಹೇಳಿಸಲಾಗುತ್ತಿತ್ತು. ಜನಪ್ರಿಯ ಗಾಯಕರು ಮುಗಿದ ಮೇಲೆ ಕ್ರಾಂತಿಗೀತೆಗಳಿಗೂ ಈ.ಟಿ.ವಿ. ಒಂದು ಛಾನ್ಸ್ ಕೊಟ್ಟಿತು.

• • •

ಮಾಧ್ಯಮಗಳ ಈ ಉತ್ಸಾಹ ಹೇಗಿತ್ತೆಂದರೆ ಅಂತಹ ವರದಿ ಮಾಡಲು ಭಾರೀ ಸ್ಪರ್ಧೆಯೇ ನಡೆದಿತ್ತು. ಬಿ.ಪಿ.ಎಲ್. ಕಂಪನಿಯ ಸಂಸದ ರಾಜೀವ್ ಚಂದ್ರಶೇಖರ್ ಭ್ರಷ್ಟಾಚಾರದ ವಿರುದ್ಧ ಪ್ರಧಾನಿಗೆ ಪತ್ರ ಬರೆದೇ ಬಿಟ್ಟರು. ಮಾತ್ರವಲ್ಲ. ಸುವರ್ಣ ಟಿ.ವಿ.ಯಿಂದ ಭ್ರಷ್ಟಾಚಾರ ವಿರೋಧಿಸಿ ಸುವರ್ಣ ರಥವೇ ಹೊರಟಿತು. ಆಹಾ! ಚಳಿ ಕಾಯಿಸಿಕೊಳ್ಳಲು ಎಷ್ಟೊಂದು ಐಡಿಯಾಗಳು!

• • •

ಇದೀಗ ಬಂದ ಸುದ್ದಿ. ಈ ಹೋರಾಟದ ಪ್ರಚಾರಕ್ಕೆ ಸ್ವಯಂಸೇವಾ ಸಂಸ್ಥೆಗಳು ಹಲವು ತಿಂಗಳಿಂದ ಖರ್ಚು ಮಾಡಬೇಕಾಯಿತಂತೆ! ಮಾಡಿದ ವೆಚ್ಚ ಎಷ್ಟು ಗೊತ್ತೇ? ಬರೋಬ್ಬರಿ 32.69 ಲಕ್ಷ ! ಇದಕ್ಕೆಂದು ಸಂಗ್ರಹಿಸಿದ್ದು 83. ಲಕ್ಷ ರೂಪಾಯಿಗಳು. ಹಣಕೊಟ್ಟವರು ಯಾರು ಅಂದ್ರಾ? ಜಿಂದಾಲ್ ಅಲ್ಯುಮಿನಿಯಂ, ಐಷರ್ ಕಂಪನಿಗಳು ಅಲ್ಲದೆ ಸುರೇಂದ್ರಪಾಲ್, ರಾಮ್ಕೆ, ದುಗ್ಗಾಲ್ ಮುಂತಾದವರ ಕಾಣಿಗೆ ಇದರಲ್ಲಿದೆ. ಲಾಭ ಇಲ್ಲದೇ ಕಾಸು ಬಿಚ್ತಾರಾ? ಜನ ಚಳುವಳಿಗಳಿಗೆ ಪ್ರಚಾರ ಯಾಕಿಲ್ಲ ಅಂತೀರಲ್ಲಾ? ಅವರೇನು ಕಾಸು ಬಿಚ್ಚುತ್ತಾರೆಯೇ? ಕಾಸಿಗಾಗಿ ಸುದ್ದಿ, ಸುದ್ದಿಗೆ ಕಾಸು. ಇದು ಮಾರುಕಟ್ಟೆ ಮ್ಯಾಥ್ಸ್.

• • •

ಈಗಲೂ ಬಿಜೆಪಿ ನಾಯಕ ಅದ್ವಾನಿ, ನಿತೀನ್ ಗಡ್ಕರಿ, ಯಡಿಯೂರಪ್ಪ, ಮೋದಿ ಭ್ರಷ್ಟಾಚಾರದ ವಿರುದ್ಧದ ಈ ಆಂದೋಲನವನ್ನು, ಹಜಾರೆಯವರನ್ನು ಹಾಡಿ ಹೊಗಳುತ್ತಿರುವುದು 'ಅರ್ಥ'ಪೂರ್ಣವೇ? ಇವರೆಲ್ಲಾ ಭಾರಿ ಹಗರಣಗಳಲ್ಲಿ ಸಿಕ್ಕಿಬಿದ್ದವರೇ ಅಲ್ಲವೇ? ಪ್ರತಿಫಲವಾಗಿ ದೇಶದಲ್ಲಿ ಆದರ್ಶ ಮುಖ್ಯಮಂತ್ರಿಗಳು ಅಂತಿದ್ದರೆ ಅದು ಗುಜರಾತ್‌ನ ನರೇಂದ್ರ ಮೋದಿ, ಬಿಹಾರದ ನಿತೀಶ್‌ಕುಮಾರ್‌ರವರೇ ಅಂತಾ ಹಜಾರೆ ತಾತ ಹೇಳಿದರಲ್ಲ. ಅರೆ ಗಾಂಧಿವಾದಕ್ಕೂ ಮೋದಿವಾದಕ್ಕೂ ಎತ್ತಣದ ಸಂಬಂಧವೆನ್ನಿರು ಏನೇನಯ್ಯಾ? ಜಾಗತೀಕರಣ, ಉದಾರೀಕರಣ, ಗಾಂಧೀಕರಣ, ಮೋದೀಕರಣ ಕಮಲೀಕರಣ...

# ಕಂಜಾರ ಬಾಟ ಕಾಲನಿಯ ಬೇಡಿಕೆ ಈಡೇರಿಕೆಗಾಗಿ ಜಿಲ್ಲಾಧಿಕಾರಿಗಳಿಂದ ಭರವಸೆ

ಏಪ್ರಿಲ್ 11, 2011 ರಂದು ಎಂ.ಪಿ.ಎಂ.ಸಿ. ವಿಜಾಪುರದ ಕಂಜಾರ ಬಾಟ ಕಾಲನಿಯ ಸುಮಾರು 200 ನಾಗರೀಕರು ತಮ್ಮ ಬೇಡಿಕೆಗಳನ್ನು ಡಿವೈಎಫ್ಐ ನೇತೃತ್ವದಲ್ಲಿ ಸರಿಸುಮಾರು 11.00 ಗಂಟೆಗೆ ಎಂ.ಪಿ.ಎಂ.ಸಿ. ಯಿಂದ ಹೊರಟು ಸಿದ್ದೇಶ್ವರ ಗುಡಿ ರಸ್ತೆಯಿಂದ ಗಾಂಧಿ ಸರ್ಕಲ್‌ಗೆ ಹೋಗಿನಗರ ಸಭೆಯ ಆಯುಕ್ತರಿಗೆ ತಮ್ಮ ಬೇಡಿಕೆಗಳ ಮನವಿ ಪತ್ರ ಸಲ್ಲಿಸಿದರು. ಆಯುಕ್ತರ ಪರವಾಗಿ ನಗರಸಭೆ ಮ್ಯಾನೇಜರ್ ಮನವಿಯನ್ನು ಸ್ವೀಕರಿಸಿದರು. ತದನಂತರ ಪ್ರತಿಭಟನಾಕಾರರು ಬಸವೇಶ್ವರ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಧರಣಿ ಕುಳಿತರು. ತದ ನಂತರ ಜಿಲ್ಲಾಧಿಕಾರಿಗಳು ಮನವಿಯನ್ನು ಸ್ವೀಕರಿಸಿದರು. ಸೋಮಪ್ಪ ಆಯಟ್ಟಿಯವರು ಹಾಗೂ ಮನ್ನಸಾಬ ಕಲಾದಗಿ, ರಾಕೇಶ ಬಾಗಡೆ, ಭರತ ಬಾಟುಂಗೆ, ಜಾನೇ ಗಣೇಶ ಬಾಟುಂಗೆ, ಶರಣಗೌಡ ಬ. ಬಿರಾದಾರ, ಮೈಬೂಬ ನದಾಫ, ಹೋರಾಟದ ಮುಖಂಡತ್ವ ವಹಿಸಿದ್ದರು.



ಮೆರವಣಿಗೆ



ಮನವಿ ಪತ್ರ ಸಲ್ಲಿಕೆ

ವಿಜಾಪೂರ ನಗರದ ದರ್ಗಾ ರೋಡ್, ಜೈಲ್ ಹತ್ತಿರ ಉತ್ತರಕ್ಕೆ ಇರುವ ಬಾಟ ಕಾಲನಿಯ ಜನರು ನಗರಕ್ಕೆ ಹೊಂದಿಕೊಂಡಿದ್ದು, ನಾಗರೀಕ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಸುಮಾರು 25 ವರ್ಷಗಳಿಂದ ಇಲ್ಲಿ ವಾಸವಿರುವ ಕಂಜರಬಾಟ ಕಾಲನಿಯ ಜನರು ಹಾಗೂ ಇತರೆ ಜನ ಸಮುದಾಯದವರು ವಾಸವಾಗಿರುವ ಈ ಜನರು ಶಿಕ್ಷಣ, ಆರೋಗ್ಯ, ವಿದ್ಯುತ್, ಕುಡಿಯುವ ನೀರು, ಶೌಚಾಲಯ ರಸ್ತೆ, ಒಳಚರಂಡಿ ಮುಂತಾದ ಮೂಲಭೂತ ಸೌಲಭ್ಯಗಳನ್ನು ಹೊಂದಿರುವುದಿಲ್ಲ. ಈ ಕುರಿತು ನಗರಸಭೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಅನೇಕ ಬಾರಿ ಮನವಿ ಮಾಡಿಕೊಂಡಿದ್ದರೂ ಯಾವುದೇ ಪ್ರಯೋಜನ ಆಗಿರುವುದಿಲ್ಲ. ಈ ಕುರಿತು ತಮ್ಮ ಗಮನಕ್ಕೂ ತಂದರೂ ತಾವು ಯಾವುದೇ ಸೂಕ್ತ ಕ್ರಮ ಕೈಗೊಂಡಿರುವುದಿಲ್ಲ. ಸದರಿ ಕಾಲನಿಯಲ್ಲಿ ವಾಸಿಸುವ ಜನರು ಅತ್ಯಂತ ಕಡುಬಡವರು ಇದ್ದು, ಕೂಲಿ ಮತ್ತು ಸೈಕಲ್ ರಿಕ್ಷಾ ಆಟೋರಿಕ್ಷಾ ನಡೆಸಿ ಉಪಜೀವನ ಮಾಡುತ್ತಿದ್ದಾರೆ. ಈ ಜನರು ಬಡತನ ರೇಖೆಗಿಂತ ಕೆಳಮಟ್ಟದವರಿದ್ದು ಪಡಿತರ ಚೀಟಿ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಅಲ್ಲದೇ ಕೇವಲ 22 ಜನರಿಗೆ ನಿವೇಶನ ಹಕ್ಕುಪತ್ರವನ್ನು ವಿತರಿಸಬೇಕು. ಹಾಗೂ ಮೇಲ್ಕಂಡ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕೆಂದು ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ಮತ್ತು ಆಯುಕ್ತರು ನಗರಸಭೆ ವಿಜಾಪೂರ ಇವರಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಈವರೆಗೂ ಸಮಸ್ಯೆಗೆ ಸ್ಪಂದಿಸಿರಲಿಲ್ಲ.

ಆದ ಕಾರಣ 15 ದಿನಗಳೊಳಗಾಗಿ ಮೂಲಭೂತ ಸೌಲಭ್ಯಗಳನ್ನು ಹಾಗೂ ನಿವೇಶನ ಹಕ್ಕು ಪತ್ರವನ್ನು ವಿತರಿಸದಿದ್ದರೆ ಈ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದೆ ಡಿವೈಎಫ್ಐ ಸಂಘಟನೆ ಉಗ್ರ ಹೋರಾಟ ಮಾಡುವುದಾಗಿ ಹೋರಾಟಗಾರರು ಎಚ್ಚರಿಸಿದ್ದಾರೆ.

**ಬೇಡಿಕೆಗಳು**

1. ಸರ್ವೆ ಮಾಡಿ ಎಲ್ಲಿ ಬಡಕುಟುಂಬಗಳಿಗೆ ನಿವೇಶನ ಹಕ್ಕು ಪತ್ರ ನೀಡಬೇಕು.
2. ಬಿ.ಪಿ.ಎಲ್. ಪಡಿತರ ಒದಗಿಸುವುದು
3. ಕುಡಿಯುವ ನೀರಿನ ಪೂರೈಕೆಯಾಗಬೇಕು.
4. ಮಹಿಳೆಯರಿಗೆ ಶೌಚಾಲಯ ಸೌಲಭ್ಯ ಕಲ್ಪಿಸಬೇಕು.
5. ವಿದ್ಯುತ್ ಕಂಬಗಳನ್ನು ಜೋಡಿಸಿದ್ದು, ಕಂಬಗಳಿಗೆ ವಿದ್ಯುತ್ ಪೂರೈಕೆ ಬೀದಿ ದೀಪಗಳನ್ನು ಅಳವಡಿಸಬೇಕು.
6. ತಕ್ಷಣವೇ ಅಂಗನವಾಡಿ ಕೇಂದ್ರವನ್ನು ಸ್ಥಾಪಿಸಬೇಕು.
7. 1 ರಿಂದ 4 ನೇ ತರಗತಿಯವರೆಗೆ ಸರಕಾರಿ ಕನ್ನಡ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಬೇಕು.
8. ನಿರುದ್ಯೋಗಿ ಯುವಜನರಿಗೆ ವ್ಯಾಪಾರ ಉದ್ಯೋಗ ಮಾಡಲು ಕಡಿಮೆ ಬಡ್ಡಿಯಲ್ಲಿ ಸಾಲಸೌಲಭ್ಯ ಕಲ್ಪಿಸಬೇಕು.

○

# ಶಿರಡಿ ಸಾಯಿ, ಸತ್ಯ ಸಾಯಿ, ಪ್ರೇಮ ಸಾಯಿ

ಈ. ಬಸವರಾಜು
ಮಲ್ಲೇನಹಳ್ಳಿ

ಶಿರಡಿ ಸಾಯಿ, ಸತ್ಯ ಸಾಯಿ, ಪ್ರೇಮ ಸಾಯಿ, ಸಾಯಿ ಸಾಯಿ..

ಏನಣ್ಣ ಇದು, ಜಗತ್ತೆಲ್ಲ ಸಾಯಿಬಾಬ ಸಾಯ್ಬ್ಯಾಡ ಅಂತ ಬಜ್ನೆ ಮಾಡ್ತಾ ಅದೆ, ನೀನ್ ನೋಡಿದ್ರೆ ಸಾಯಿ ಸಾಯಿ ಅಂತ ಇದ್ದೀಯಲ್ಲ?

ನಾನೇಳಿದ್ದು ಸಾಯಿ ಅಂತ ಅಲ್ಲ. ಸಾಯಿಬಾಬ ಇಂದೆ ಶಿರಡಿ ಸಾಯಿಬಾಬ ಆಗಿದ್ನಂತೆ. ಅವ್ನು ಸತ್ ಮ್ಯಾಲೆ ಅವ್ನೆ ಸತ್ಯಸಾಯಿಬಾಬ ಆದ್ನಂತೆ. ಈಗ ಅವ್ನು ಸತ್ ಮ್ಯಾಲೆ ಪ್ರೇಮಸಾಯಿಬಾಬ ಆಗಿ ಉಟ್ತನಂತೆ. ಅದ್ಕೆ ಅಂಗಂದೆ.

ಅಲ್ಲ ನಾನೇನ್ ಕಿವಿ ಮ್ಯಾಲೆ ಊವ್ ಇಟ್ಕಂಡಿದಿನಿ ಅನ್ಕಂಡ್ಯ? ಶಿರಡಿಸಾಯಿಬಾಬ ಎಲ್ಲಿ, ಈ ಪುಟ್‌ಪರ್ತಿ ಸಾಯಿ ಬಾಬ ಎಲ್ಲಿ? ಅವ್ನು ಇವ್ನಾಗಿ ಉಟ್ಟಕೆ ಯಂಗ್ ಸಾದ್ಯ? ಎಲ್ಲಾರ ಉಂಟೆ?

ಪುಟ್‌ಪರ್ತಿ ಸಾಯಿಬಾಬ್ನೆ ಏಳಿದ್ನಂತೆ. ಅದ ಅವ್ರ ಬಕ್ತರ್ಯೆಲ್ಲ ಏಳ್ಕಂಡು ತಿರುಗ್ತಾ ಅವ್ರೆ. ಅದ್ನೆ ನಾನೂ ಏಳ್ದೆ.

ಈಗ ಯಾರೋ ನಾನು ಇಂತವ್ರ ಅವ್‌ತಾರ ಅಂತ ಏಳಿದ್ರೆ ನಂಬದ್ಯಂಗೆ ಅಂತಿನಿ. ಇಂದೆ ಏನಾಗಿದ್ನೋ, ಅದೇ ತರ ಉಟ್ಟಿದ್ರೆ ನಂಬಬೌದಪ್ಪ. ಅದ ಬುಟ್ಟು ಸುಮ್ ಸುಮ್ನೆ ನಾನೆ ಅವ್ನು ಅಂತ ಏಳಿದ್ರೆ ಯಂಗ್ ನಂಬದು? ಆವ್ನ ಕೇಳನ ಅಂದ್ರೆ ಅವ್ನುಇರದಿಲ್ಲ. ಸಾಕ್ಷಿ ಏನೂ ಇಲ್ದೆ ನಂಬದ್ಯಂಗೆ?

ಅವ್ರೇಳ್ತರೆ, ನಂಬಿಕೇನ ಪ್ರಸ್ನೆ ಮಾಡ್ಬಾರ್ದು, ಅದು ಜನಗಳಿಗೆ ಬುಟ್ಟದ್ದು, ಅದ್ನ ಟೆಸ್ಟ್ ಮಾಡಂಗಿಲ್ಲ ಅಂತರಪ್ಪ.

ಸಾಕ್ಷಿ ಇಲ್ದೆ, ಪರೀಕ್ಷೆ ಮಾಡಿ ನೋಡ್ದೆ ಏನ್ನೂ ನಂಬಕಾಗದಿಲ್ಲ ಬುಡು. ಇದ ಯಾರೂ ಒಪ್ಪದಿಲ್ಲ. ಇವತ್ತಿಲ್ಲ ನಾಳೆ ನಿಜ ಏನು ಅಂತ ಗೊತ್ತಾಯ್ತದೆ.

ಮುಂದೆ ನಾನೇ ಪ್ರೇಮಸಾಯಿ ಆಗಿ ಉಟ್ತನಿ ಅಂತಲೂ ಏಳ್ಯವ್ನೆ?

ಇಂಗೆ ಯಾರಾರ ಇದ ಕೇಳಿಸ್ಕಂಡರು ನಾನೇ ಪ್ರೇಮ ಸಾಯಿ ಅನ್ಬೇಕು ಅಷ್ಟೆಯ. ಜ್ವತಿಗೆ ಇವ್ನ ಯಾವಾಗ ಸಾಯ್ತಿನಿ ಅಂತ ಏಳಿದ್ನೋ, ಅದ್ಕಿಂತ ಮದ್ಲೆ ಓಗಂಗೆ ಕಾಣ್ತನೆ, ಅಂಗಾಗಿ ಇವ್ನೇಳದ ಯಂಗ್ ನಂಬದು?

ಒಟ್ನಲಿ ಅವ್ನ ಆಸ್ತಿ ವಡ್ಯಕೆ ನಾನೇ ಪ್ರೇಮ ಸಾಯಿ ಅಂತ ಸುಮಾರ್ ಜನ ಜುಟ್ ಬುಟ್ಕಂಡು ಜಗಳಾಡ್‌ಬೌದು ಅನುಸ್ತಾ ಅದೆ.

ಆಗ ಜಗಳಾಡದು ಸುಲ್ಬ, ಜುಟ್ ಇಡ್ಕಬೌದು.

ಅದೋಗ್ಲಿ, ಇನ್ ವಸಿ ದಿನ ಕಾಯುನ ಏನಾದತೋ? ಆದ್ರೆ ಪುನರ್ ಜಲ್ಮ ಎತ್ತಿ ಉಟ್ಟಿದ್ದಿನಿ ಅಂತ ಕೆಲುವ್ರು ಏಳ್ತಲೇ ಇರ್ತರಲ, ಅದ್ಕೇನೇಳದು.

ಏನೂ ಏಳಂಗಿಲ್ಲ, ಅವ್ರುನ್ನ ಉಚ್ಚಾಸ್ಪತ್ರಿಗೆ ಸೇರುಸ್ಬೇಕಾಯ್ತದೆ ಅಷ್ಟೆಯ. ಜನ ದಿನುಕ್ ದಿನ ಎಚ್ಚಾಯ್ತಲೇ ಅವ್ರಪ್ಪ. ಅವ್ರೆಲ್ಲಿದ್ರು ಅಂದ್ರೇನೇಳ್ತನೆ? ಜ್ವತಿಗೆ ನಿಜ್ವಾಗಿ ಉಟ್ಟಿ ಬರಂಗಿದ್ರೆ ಸಾಯದ್ಯಾಕ್ ಬೇಕಾಗಿತ್ತು? ಓಗ್ಲಿ ನಾನು ಓದ್ ಜಲುಮ್ದಲ್ಲಿ ಮೈಸೂರ್ ಮಾರಾಜಾಗಿದ್ದೆ ಅಂತವ ಅರಮನಿಗೋಗಿ ಕೂತ್ಕಂಡ್ರೆ ಏನ್ ಮಾಡ್ತರೇಳು?

ಏನೂ ಇಲ್ಲ, ಮಾರಾಜುನ್ ಮಗ ಪುಟ್ ಬಾಲ ವದಿಯಂಗೆ ವದ್ದು ಕಳುಸ್ತನೆ ಅಷ್ಟೆಯ.

ಮತ್ಯಾಕಿಂಗಾಡ್ಯರು?

ಏನೂ ಇಲ್ಲ, ಮನುಸುಂಗೆ ಸಾಯಕೆ ಇಷ್ಟ ಇರದಿಲ್ಲ, ಅದ್ಕೆ ಏನೇನೋ ಯೋಚ್ನೆ ಮಾಡ್ತಾ ಇರ್ತನೆ, ಅದ್ರಲಿ ಈ ಪುನರ್ ಜಲ್ಮನೂ ಒಂದು ಅಂತ ಅನುಸ್ತದಪ್ಪ.

ಪುನರ್ ಜಲ್ಮ ಅನ್ನದು ಇಲ್ಲ ಅನ್ನದ್ಕೆ ನಾವೇ ಸಾಕ್ಷಿ. ನಮಿಗೆ ಗೊತ್ತಿರೊ ಮಾತ್ಮರು ಯಾರೂ ಉಟ್ಟಿ ಬಂದಿಲ್ಲ.

ನಮಿಗೆ ಮಾತು, ಬರಹ ಬತ್ತದೆ. ಏಳ್ತಿವಿ, ಬರಿತಿವಿ, ಆದ್ರೆ ಪ್ರಾಣಿಗಳು ಏನ್ ಮಾಡ್ಯವು. ಅವ್ರೂ ಉಟ್ಟಿ ಬರ್ಬೇಕಲ?

ಒಟ್ನಲಿ ಯಲ್ಲಾ ಸಾಯಿಗಳೂ ಸುಳ್ಳು ಅನುಸ್ತದೆ. ಒಂದೇ ನಿಜ ಅನುಸ್ತಾ ಅದೆ.

ಏನದು?

ಮನಸ ಉಟ್ಟಿದ್ ಮ್ಯಾಲೆ ಸಾಯದು ಗ್ಯಾರಂಟಿ. ಇರತಕ ವಳ್ಳೆ ಕ್ಯಲ್ಸ ಮಾಡಿ ಕಂತೆ ಬಿಸಾಕಿ ಓಗದು.

○

# ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟದ ಅಧಿವೇಶನ

ಪುಟ 2 ರಿಂದ

ಕಾಂ.ಜಾರ್ಜ್ ಅವರ ಸರ್ವಾನುಮತದ ಆಯ್ಕೆಯನ್ನು ಘೋಷಿಸಲಾಯಿತು. ಅಧ್ಯಕ್ಷರ ಆಯ್ಕೆಯ ಸಮಯದಲ್ಲಿ ಇದೇ ಸ್ಫೂರ್ತಿ ಮುಂದುವರೆಯಿತು. ಅಧ್ಯಕ್ಷ ಸ್ಥಾನಕ್ಕೆ ಏಕಮಾತ್ರ ಅಭ್ಯರ್ಥಿಯಾಗಿದ್ದ ಮಹಮ್ಮದ್ ಷಾಬಾನ್ ಅಜೌಜ್ ಪರವಾಗಿ ಬ್ಯಾಜ್‌ಗಳನ್ನು ಎತ್ತಿ ಹಿಡಿಯುವ ಮೂಲಕ ಎಲ್ಲರೂ ಮತದಾನ ಮಾಡಿ ಸರ್ವಾನುಮತದಿಂದ ಆಯ್ಕೆ ನಡೆಯಿತು.

**ಸಮರಶೀಲತೆಯ ಭವಿಷ್ಯ**

ಮುಂದಿನ ದಿನಗಳಲ್ಲಿ ಡಬ್ಲ್ಯೂಎಫ್‌ಟಿಯು ಜಗತ್ತಿನ ಕಾರ್ಮಿಕ ವರ್ಗದ ಸಮರಶೀಲ ಚಳುವಳಿಗೆ ಸಮರ್ಥ ನಾಯಕತ್ವ ನೀಡಲಿದೆ ಎಂಬ ಭರವಸೆ ಇಡೀ ಅಧಿವೇಶನದಲ್ಲಿ ಸ್ಪಷ್ಟವಾಗಿತ್ತು. ಗ್ರೀಸ್‌ನ ಬಲಿಷ್ಠ ಕಾರ್ಮಿಕ ಸಂಘಟನೆ ಪಾಮೆಯ ನೂರಾರು ಕಾರ್ಯಕರ್ತರು ಗ್ರೀಸ್ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ವಿದ್ಯಾರ್ಥಿ ಸಂಘಟನೆಯ ಅಸಂಖ್ಯ ಯುವಕ, ಯುವತಿಯರು ಹಗಲಿರುಳು ದುಡಿದು ಅಧಿವೇಶನವನ್ನು ಅತ್ಯಂತ ಯಶಸ್ವಿಗೊಳಿಸಿದರು.

ಈ ಮಧ್ಯೆ ಗ್ರೀಸ್ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯಾಲಯದಲ್ಲಿ ಪ್ರತಿನಿಧಿಗಳಿಗಾಗಿ ಒಂದು ಭೋಜನ ಕೂಟವನ್ನು ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ಪ್ರತಿನಿಧಿಗಳನ್ನು ಉದ್ದೇಶಿಸಿ ಗ್ರೀಕ್ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ.(ಶ್ರೀಮತಿ) ಅಲೆಖ ಪಾಪರಿಗ ಅವರು ಮಾತನಾಡಿದರು. ವರ್ಗ ಹೋರಾಟದ ಸಿದ್ಧಾಂತದ ಆಧಾರದಲ್ಲಿ ಡಬ್ಲ್ಯೂಎಫ್‌ಟಿಯು ಮುನ್ನಡೆಯುತ್ತಿರುವ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ ಅವರು ಜಗತ್ತಿನಾದ್ಯಂತ ಬೆಳೆದು ಬರುತ್ತಿರುವ ಕಾರ್ಮಿಕ ವರ್ಗದ ಚಳುವಳಿಗೆ ಕ್ರಾಂತಿಕಾರಿ ಶುಭಾಶಯಗಳನ್ನು ಅರ್ಪಿಸಿದರು.

ಸಿಐಟಿಯು ನಿಯೋಗದಲ್ಲಿ ಕರ್ನಾಟಕದಿಂದ ಸಂಗಾತಿಗಳಾದ ಬಿ.ಮಾಧವ, ಕೆ.ಶಂಕರ್ ಮತ್ತು ಅಮಾನುಲ್ಲಾಖಾನ್ ಒಳಗೊಂಡಿದ್ದರು.

ಡಬ್ಲ್ಯು.ಎಫ್.ಟಿ.ಯು. ನ 40 ಮಂದಿಯ ಅಧ್ಯಕ್ಷೀಯ ಮಂಡಳಿಗೆ ನಡೆದ ಆಯ್ಕೆಯಲ್ಲಿ ಸಿಐಟಿಯು ಸಂಗಾತಿಗಳಾದ ಎ.ಕೆ. ಪದ್ಮನಾಭನ್ ಮತ್ತು ಸ್ವದೇಶಿ ದೇವರಾಯ್ ಆಯ್ಕೆಯಾಗಿದ್ದಾರೆ.

# ಕೇರಳ-ಬಂಗಾಳ

# ಎಡರಂಗದ ಭರ್ಜರಿ ಪ್ರಚಾರ ಎದುರುತ್ತರ

ಸಿದ್ಧಿಸಿ

ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಪ್ರಮುಖ ಘಟ್ಟ ಮುಗಿದಿದೆ. ಪಶ್ಚಿಮ ಬಂಗಾಳವನ್ನು ಹೊರತುಪಡಿಸಿ ನಾಲ್ಕು ರಾಜ್ಯಗಳ ಮತದಾರರು ಈಗಾಗಲೇ ತಮ್ಮ ಹಕ್ಕನ್ನು ಚಲಾಯಿಸಿದ್ದು, ಫಲಿತಾಂಶ ಮತಯಂತ್ರದಲ್ಲಿ ಭದ್ರವಾಗಿದೆ. ಇನ್ನು ಮತ ಎಣಿಕೆಯ ದಿನದತ್ತ ಎಲ್ಲರ ಕುತೂಹಲದ ದೃಷ್ಟಿ ನೆಟ್ಟಿದೆ.

ಹಲವು ಹಂತಗಳಲ್ಲಿ ನಡೆಯುವ ಪಶ್ಚಿಮ ಬಂಗಾಳದ ಚುನಾವಣೆಯ ಮೊದಲ ಹಂತದ ಮತದಾನದ ಭರ್ಜರಿ ಪ್ರಚಾರ ನಡೆದಿದೆ. ಎಡರಂಗದ ಬಗ್ಗೆ ಹೆಚ್ಚುತ್ತಿರುವ ಒಲವು ಮಮತಾ ಪಡೆಯನ್ನು ಕಂಗೆಡಿಸಿದೆ. ಆಕೆ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದಾಗಲೇ ಅದು ಸ್ಪಷ್ಟಗೊಂಡಿತ್ತು. ಎಡರಂಗವನ್ನು ಅಸ್ಥಿರಗೊಳಿಸುವ ತನ್ನ 34 ವರ್ಷಗಳ ಸತತ ಪ್ರಯತ್ನದ ಹಿಂದೆ ವಿದೇಶಿ ಶಕ್ತಿಗಳ ಹಣದ ಬೆಂಬಲ, ಸಾಮ್ರಾಜ್ಯಶಾಹಿಗಳ ಕುಮ್ಮಕ್ಕು ಇದೆ ಎಂಬುದು ಇದೀಗ ಜಗಜ್ಜಾಹೀರಾಗಿದೆ. ಮಮತಾ ಮೈತ್ರಿಕೂಟಕ್ಕೆ 'ಈಗ ಇಲ್ಲದಿದ್ದರೆ ಮತ್ತೆಂದು ಇಲ್ಲ' ಎಂಬ ಪರಿಸ್ಥಿತಿ ಇದೆ.

ಈ ಬಾರಿ ಗೆಲ್ಲದಿದ್ದರೆ ರಾಜಕೀಯವನ್ನೇ ತ್ಯಜಿಸುತ್ತೇನೆ ಎಂಬ ಸೆಂಟಿಮೆಂಟಲ್ ಅಸ್ತ್ರವನ್ನು ಮಮತಾ ಮತದಾರರಿಗೆ ಪ್ರಯೋಗಿಸಿದ್ದಾರೆ. ಪ್ರಚಾರದ ಜೊತೆ ತನ್ನ ಸೌಂದರ್ಯದತ್ತಲೂ ಅತಿಯಾಗಿ ಗಮನ ನೀಡುತ್ತಿರುವ ಮಮತಾ, ಮೇಕಪ್‌ಜೊತೆ ಹೊಸ ಗೆಟಪ್‌ನಲ್ಲಿ ಮತದಾರರ ಮನಗೆಲ್ಲಲು ಹೊರಟಿದ್ದಾರೆ. ಪ್ರಧಾನಿ ಮನಮೋಹನ್ ಸಿಂಗ್, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಕೂಡ ಪ್ರಚಾರದಲ್ಲಿ ತೊಡಗಿದ್ದಾರೆ. ರಾಹುಲ್, ಪ್ರಣಬ್ ಮುಖರ್ಜಿ ಅವರಂತೂ ಎಡಪಕ್ಷಗಳ ವಿರುದ್ಧ ಕೆಳಮಟ್ಟದ ಆರೋಪ ಮಾಡಿದ್ದಾರೆ. ಎಡರಂಗದ ಆರ್ಥಿಕ ನೀತಿಗಳು ಹಿಂದಿನ ಕಾಲದ್ದು (ಔಟ್‌ಡೇಟೆಡ್) ಎಂದು ಹೇಳಿದ್ದಾರೆ. ಐಎಂಎಫ್, ವಿಶ್ವಬ್ಯಾಂಕ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಮನಮೋಹನ ಸಿಂಗ್ ಅಲ್ಲಿನ ತಮ್ಮ ಗುಂಗಿನಿಂದ ಹೊರ ಬಂದಂತಿಲ್ಲ. ಅವರ 'ನೂತನ' ಆರ್ಥಿಕ ನೀತಿಗಳು ದೇಶದ ಜನರಿಗೆ ಸಂಕಷ್ಟದ ಮೇಲೆ ಸಂಕಷ್ಟ ತಂದೊಡ್ಡಿವೆ ಎಂಬುದನ್ನು ಜನ ಮರೆತಿಲ್ಲ. ಬೆಲೆ ಏರಿಕೆ, ಹಣದುಬ್ಬರ ನಿಯಂತ್ರಿಸಲು ಸಾಧ್ಯವಿಲ್ಲದ ಕೇಂದ್ರ ಸರ್ಕಾರ ಮೊದಲೇ ಹಗರಣದ ಮೇಲೆ ಹಗರಣ ನಡೆಸಿದ ಅಪಖ್ಯಾತಿಗೆ ಒಳಗಾಗಿದೆ. ಸಾಮ್ರಾಜ್ಯಶಾಹಿ ಹಾಗೂ ದೊಡ್ಡಣ್ಣನ ತಾಳಕ್ಕೆ ತಕ್ಕಂತೆ ಕುಣಿಯುವ ಈ ನವ ಉದಾರ ಆರ್ಥಿಕ ನೀತಿಗಳ ಬಗ್ಗೆ ಚುನಾವಣೆಯಲ್ಲಿ ಭಾರೀ ಚರ್ಚೆಗೊಳಗಾಗಿದೆ.

ಎದುರಾಳಿಗಳ ಎಲ್ಲ ಪ್ರಚಾರವನ್ನು ಎಡರಂಗ ಹಿಂದಿಕ್ಕಿದೆ. ದಶಕಗಳಿಂದ ನಡೆಸಿದ ಜನಪರ ಹೋರಾಟಗಳ ಫಲವಾಗಿ ಬಂದ ಎಡಸರ್ಕಾರವನ್ನು ಉಳಿಸಲು ಕಾರ್ಯಕರ್ತರು ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದಾರೆ. ಎಡರಂಗ ಪ್ರಚಾರದ ನೇತೃತ್ವ ವಹಿಸಿರುವ ಬುದ್ಧದೇವ್ ಭಟ್ಟಾಚಾರ್ಯ, ಬಿಮನ್ ಬಸು ಅವರಿಗೆ ವ್ಯಾಪಕ ಜನಬೆಂಬಲ ವ್ಯಕ್ತವಾಗಿದೆ. ಯುವ ಉತ್ಸಾಹಿ ಅಭ್ಯರ್ಥಿಗಳ ಜೊತೆ ಅನುಭವಿ ಹುರಿಯಾಳುಗಳೂ ಕಣದಲ್ಲಿ ಇದ್ದು ಜನಮೆಚ್ಚುಗೆ ಗಳಿಸುತ್ತಿದ್ದಾರೆ.

ಕಳೆದ ಸರ್ಕಾರದಲ್ಲಿ ಕೆಲವೊಂದು ತಪ್ಪುಗಳಾಗಿವೆ ಎಂಬುದನ್ನು ಎಡರಂಗ ಒಪ್ಪಿಕೊಂಡಿದೆ. ಅದನ್ನು ತಿದ್ದಿಕೊಂಡಿದ್ದೇವೆ. ಜನರ ಜೊತೆ ಬೆರೆತಿದ್ದೇವೆ, ಅವರಿಗೆ ಎಡರಂಗದ ಬದ್ಧತೆ ಹಾಗೂ ಜನಪರ ನೀತಿಗಳ ಬಗ್ಗೆ ಈಗ ಯಾವುದೇ ಸಂದೇಹ ಇಲ್ಲ. ಜನ ನಮ್ಮನ್ನು ಬೆಂಬಲಿಸುತ್ತಿದ್ದಾರೆ ಎಂದು ಎಡ ಪಕ್ಷಗಳ ಕಾರ್ಯಕರ್ತರು ಹೇಳುತ್ತಾರೆ. ರಾಜ್ಯಾದ್ಯಂತ ನಡೆದ ಪ್ರಚಾರದುದ್ದಕ್ಕೂ ಇದೇ ಅನುಭವ ಎಲ್ಲ ಕಾರ್ಯಕರ್ತರಿಗೆ ಎದುರಾಗಿದೆ. ಹಾಗಾಗಿ ಏಳನೇ ಬಾರಿಯೂ ಎಡರಂಗ ಸರ್ಕಾರ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೇರಲಿದೆ ಎಂಬ ವಿಶ್ವಾಸ ಸಿಪಿಎಂ ಹಾಗೂ ಅದರ ಮೈತ್ರಿಕೂಟದಲ್ಲಿ ಮನೆಮಾಡಿದೆ.

### ಕೇರಳದಲ್ಲಿ...

ಕೇರಳದಲ್ಲಿ ಎಡರಂಗ ಒಗ್ಗಟ್ಟಿನ ಮೂಲಕ ಅತ್ಯುತ್ತಮ ಪ್ರಚಾರ ಸಭೆಗಳನ್ನು ಸಂಘಟಿಸಿತು. ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್ ಅಂತೂ ಸೂಜಿಗಲ್ಲಿನಂತೆ ಜನರನ್ನು ಆಕರ್ಷಿಸಿದರು. ಎಡರಂಗದ ಎಲ್ಲ ಬಹಿರಂಗ ಸಭೆಗಳಲ್ಲಿ, ರೋಡ್ ಷೋಗಳಲ್ಲಿ ಜನಸಾಗರವೇ ಹರಿದುಬಂತು. ಇದು



ಎಲ್‌ಡಿಎಫ್‌ನ ಜನಬೆಂಬಲಕ್ಕೆ ಸಾಕ್ಷಿಯಾಯಿತು.

ವಿ.ಎಸ್. ಅಚ್ಯುತಾನಂದನ್‌ಗೆ ಟಿಕೆಟ್ ನಿರಾಕರಿಸಲಾಗಿದೆ ಎಂಬ ಸುದ್ದಿ ಹಬ್ಬಿಸಿದ್ದ ಮಾಧ್ಯಮಗಳು, ಸಿಪಿಎಂನಲ್ಲಿ ಭಿನ್ನಮತ ಇದೆ ಎಂಬುದನ್ನು ಬಿಂಬಿಸಿ ಸಿಪಿಎಂ ವಿರೋಧಿ ಸುದ್ದಿಗಳಿಗೆ ಹೆಚ್ಚು ಆದ್ಯತೆ ನೀಡಿದೆ. ಈ ಹಿನ್ನೆಲೆಯಲ್ಲಿ ನಡೆಸಿದ ಚುನಾವಣಾ ಸಮೀಕ್ಷೆಗಳಲ್ಲಿ ಐಕ್ಯರಂಗ ಸ್ಪಷ್ಟ ಮುನ್ನಡೆ ಕಾಯ್ದುಕೊಳ್ಳಲಿದೆ ಎಂಬುದನ್ನು ಬಿಂಬಿಸಿತು.

ರೈತರ ಆತ್ಮಹತ್ಯೆಗಳನ್ನು ತಡೆದದ್ದೇ ಕೇಂದ್ರದ ಯುಪಿಎ ಸರ್ಕಾರ ಎಂಬ ಪ್ರಣಬ್ ಹೇಳಿಕೆಗಳು, ಕಣದಲ್ಲಿದ್ದ ಹಿರಿಯ ಹುರಿಯಾಳು ಅಚ್ಯುತಾನಂದನ್ ಅವರನ್ನು ಕೆಣಕಿದ ರಾಹುಲ್ ಹೇಳಿಕೆಗಳು ಸುದ್ದಿ ಮಾಡಿದವು. ಅದಕ್ಕೆ ಪ್ರತಿಯಾಗಿ ರಾಹುಲ್‌ಗೆ 'ಅಮೂಲ್ ಬೇಬಿ' ಎಂದು ವಿ.ಎಸ್. ತಿರುಗೇಟು ನೀಡಿದ್ದು, ಕೇರಳದಲ್ಲಿ ಆತ್ಮಹತ್ಯೆಯನ್ನು ತಡೆದ ಕೇಂದ್ರ ಸರ್ಕಾರಕ್ಕೆ ಮಹಾರಾಷ್ಟ್ರ, ಆಂಧ್ರದಲ್ಲಿ ರೈತರ ಆತ್ಮಹತ್ಯೆಗಳನ್ನು ತಡೆಯಲಿಕ್ಕೆ ಏಕೆ ಆಗಲಿಲ್ಲ ಎಂಬ ಪ್ರತ್ಯುತ್ತರಗಳು ಜನರನ್ನು ಚಿಂತನೆಗೆ ಹಚ್ಚಿದವು.

ಕೇರಳದಲ್ಲೂ ಬೆಲೆ ಏರಿಕೆ ಮತ್ತು ಕೇಂದ್ರ ಸರ್ಕಾರದ ಹಗರಣಗಳು ಎಡರಂಗಕ್ಕೆ ಪ್ರಮುಖ ಚುನಾವಣಾ ವಿಷಯಗಳಾಗಿತ್ತು. ಸಿಎಂ ಅಚ್ಯುತಾನಂದನ್ ನೇತೃತ್ವದ ಸರ್ಕಾರ ಎಲ್ಲ ಭ್ರಷ್ಟಾಚಾರದ ಆರೋಪಗಳಿಗೆ ತಕ್ಕ ಉತ್ತರ ನೀಡಿ ಭ್ರಷ್ಟಾಚಾರ ವಿರುದ್ಧದ ಹೋರಾಟದಲ್ಲಿ ಮುಂಚೂಣಿ ವಹಿಸಿತು. ಸಾರ್ವಜನಿಕ ವಿತರಣ ವ್ಯವಸ್ಥೆಯನ್ನು ಗಟ್ಟಿಗೊಳಿಸಿದ್ದು, ಐಟಿ- ಪ್ರವಾಸೋದ್ಯಮ ಸೇರಿದಂತೆ ರಾಜ್ಯವನ್ನು ಸರ್ವಾಂಗೀಣ ಪ್ರಗತಿಯೆಡೆಗೆ ಸಾಗಿಸಿದ್ದು ಪ್ರತಿಪಕ್ಷಗಳ ಬಾಯಿಯನ್ನು ಮುಚ್ಚಿಸಿದೆ. ಜನಸಾಮಾನ್ಯರ ಹಿತ ಕಾಯುವ ಜೊತೆಗೆ ರಾಜ್ಯದ ಸರ್ವಾಂಗೀಣ ಪ್ರಗತಿಗೆ ಬದ್ಧ ಎಂಬ ಎಡ ರಂಗದ ಭರವಸೆ ಜನರನ್ನು ಒಪ್ಪುವಂತೆ ಮಾಡಿತು. ಆಡಳಿತ ವಿರೋಧಿ ಭಾವನೆ ಇಲ್ಲದಿರುವುದು ಹಾಗೂ ಸರ್ಕಾರದ ಅಭಿವೃದ್ಧಿ ಬಗ್ಗೆ ಜನ ತೃಪ್ತಿ ವ್ಯಕ್ತಪಡಿಸಿರುವುದು ಎಲ್‌ಡಿಎಫ್‌ಗೆ ಮತ್ತೊಂದು ಪ್ಲಸ್ ಪಾಯಿಂಟ್.

### ಹಣದ ಹೊಳೆ ಹರಿಸಿದ ಬಿಜೆಪಿ ಪರದಾಟ-ಪೇಚಾಟ

ಕೇರಳ ಚುನಾವಣೆಯನ್ನು ಎಲ್‌ಡಿಎಫ್, ಯುಡಿಎಫ್‌ನಂತೆ ಬಿಜೆಪಿಯೂ ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ತೆಗೆದುಕೊಂಡಿದೆ. ಪ್ರತಿಬಾರಿಯಂತೆ ಈ ಬಾರಿಯೂ ಸಾಕಷ್ಟು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರೂ ಅದರ ರಾಷ್ಟ್ರೀಯ ನಾಯಕ ಓ. ರಾಜಗೋಪಾಲ್ ಸ್ಪರ್ಧಿಸಿರುವ ತಿರುವನಂತಪುರ ಹಾಗೂ ಮತಗಳಿಕೆಯಲ್ಲಿ ಗಮನ ಸೆಳೆಯುತ್ತಾ ಬಂದ ಮಂಜೇಶ್ವರ ವಿಧಾನಸಭಾ ಕ್ಷೇತ್ರದತ್ತ ಗಮನ ಕೇಂದ್ರೀಕರಿಸಿದೆ. ಏನೇ ಆಗಲಿ, ಈ ಬಾರಿ ಕೇರಳ ವಿಧಾನಸಭೆಯೊಳಗೆ ಒಂದೇ ಒಂದು ಬಿಜೆಪಿ ಶಾಸಕರನ್ನು ನೋಡಲೇಬೇಕೆಂಬ ಹಠದಿಂದ ಗರಿಷ್ಠ ಪ್ರಮಾಣದ ಪ್ರಚಾರ, ತಂತ್ರ-ಕುತಂತ್ರಗಳನ್ನು ಅನುಸರಿಸಿತು.

ಮಂಗಳೂರಿನ ಬಿಜೆಪಿ ಕಾರ್ಯಾಲಯದಲ್ಲಿ ಚುನಾವಣಾ ತಯಾರಿ, ಕಾರ್ಯತಂತ್ರಗಳ ಬಗ್ಗೆ ಎಲ್ಲ ಚರ್ಚೆಗಳು ನಡೆಯಿತು. ಬಿಜೆಪಿ ರಾಜ್ಯ ಘಟಕಕ್ಕೆ ಈ ಕ್ಷೇತ್ರದ ಪ್ರಚಾರದ ಹೊಣೆ ನೀಡಲಾಗಿತ್ತು. ಈ ಕಾರಣಕ್ಕೆ ಕರಾವಳಿಯ ಸಂಸದರಾದ ಡಿ.ವಿ. ಸದಾನಂದ ಗೌಡ, ನಳಿನ್ ಟೆಂಟ್ ಹಾಕಿ ಪ್ರಚಾರದ ನೇತೃತ್ವ ವಹಿಸಿದರು.

ರಾಷ್ಟ್ರೀಯ ನಾಯಕರ ದಂಡೇ ಮಂಜೇಶ್ವರಕ್ಕೆ ತೆರಳಿ ಪ್ರಚಾರ ನಡೆಸಿತು. ಪಕ್ಷದ ಅಧ್ಯಕ್ಷ ನಿತಿನ್ ಗಡ್ಕರಿ, ರಾಜ್‌ನಾಥ್ ಸಿಂಗ್, ಸುಷ್ಮಾ ಸ್ವರಾಜ್, ಅಶೋಕ್ ಸಿಂಘಾಲ್, ಕರ್ನಾಟಕದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಪುತ್ರ ಬಿ.ವೈ. ರಾಘವೇಂದ್ರ ಮುಂತಾದ ನಾಯಕರು ಮಂಜೇಶ್ವರದಲ್ಲಿ ಪ್ರಚಾರ ನಡೆಸಿದ್ದೇ ನಡೆಸಿದ್ದು.

ಯಡಿಯೂರಪ್ಪ, ರಾಘವೇಂದ್ರ, ಶೋಭಾ ಮತ್ತವರ ಬಿಜೆಪಿ ಪಡೆ ತಮ್ಮ ಭ್ರಷ್ಟತನದಿಂದ ಗಳಿಸಿದ ಹಡಬಿಟ್ಟಿ ದುಡ್ಡನ್ನು ಇನ್ನಿಲ್ಲದಂತೆ ಸುರಿದರು. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸದಸ್ಯರು, ಪುಂಡು ರಾಜಕಾರಣಿಗಳಿಗೆ ತಲಾ 10 ಲಕ್ಷ ರೂ.ನಂತೆ ಹಂಚಲಾಯಿತು. ಪ್ರತಿ ಬೂತ್ ಮಟ್ಟದಲ್ಲಿ ಲಕ್ಷಗಟ್ಟಲೆ ಹಣ ಸುರಿಯಲಾಯಿತು. ಬಿಜೆಪಿ ನಾಯಕರ ಪ್ರಕಾರ 50 ಕೋಟಿ ರೂಪಾಯಿಯನ್ನು ಈ ಒಂದು ಕ್ಷೇತ್ರಕ್ಕೆ ವ್ಯಯಿಸಲಾಯಿತು. ಮತದಾನ ಹತ್ತಿರ ಬರುತ್ತಿದ್ದಂತೆ ತನಗೆ ಇನ್ನಷ್ಟು ಹಣ ಬೇಕು ಎಂದು ಚಾಕಲೇಟ್ ಬೇಡುವ ಚಿಕ್ಕಮಕ್ಕಳಂತೆ ಕಾರ್ಯಕರ್ತರು ರಚ್ಚೆ ಹಿಡಿದ ದೃಶ್ಯ ಪಕ್ಷದ ಕಚೇರಿಯ ಸಭೆಗಳಲ್ಲಿ ಸಾಮಾನ್ಯವಾಗಿತ್ತು.

ಅಭ್ಯರ್ಥಿ ಹಾಗೂ ಆತನ ಆತ್ಮೀಯ ಬಳಗವಂತೂ ಏರ್‌ಕಂಡೀಷನ್ ಕಾರುಗಳಲ್ಲಿ ತಿರುಗಾಡಿ ಐಷಾರಾಮಿ ಜೀವನದ ಸುಖ ಪಡೆದರು. ಹಾಗಂತ ಬಿಜೆಪಿ ಮಟ್ಟಿಗೆ ಎಲ್ಲವೂ ಸುಸೂತ್ರವಾಗಿರಲಿಲ್ಲ. ಎಷ್ಟು ಹಣ ಸುರಿದರೂ ಪಕ್ಷದ ಕಾರ್ಯಕರ್ತರಿಲ್ಲದೆ ಬಡವಾಯಿತು. ರಾಷ್ಟ್ರೀಯ ನಾಯಕರ ಬಹಿರಂಗ ಸಭೆಗಳಲ್ಲಿ ಜನ ಇಲ್ಲದೆ, ಕೊನೆಗೆ ಮಾನ ಕಾಪಾಡಲು ದಕ್ಷಿಣ ಕನ್ನಡದ ಕಾರ್ಯಕರ್ತರು ಭಾಗವಹಿಸಿ ನಗೆಪಾಟಲಿಗೀಡಾದರು.

### ಹಣದ ಹೊಳೆಯಲ್ಲಿ ತಮಿಳುನಾಡು

ತಮಿಳುನಾಡಿನ ಚುನಾವಣೆಯಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ಚರ್ಚೆಗೆ ಗ್ರಾಸವಾಯಿತು. 2 ಜಿ ಸ್ಪೆಕ್ಟ್ರಂ ಹಗರಣದಲ್ಲಿ ಡಿಎಂಕೆಯ ಸಚಿವರು ನೇರವಾಗಿ ಭಾಗಿಯಾಗಿದ್ದು ಡಿಎಂಕೆ ವಿರುದ್ಧ ಜನರ ಆಕ್ರೋಶವನ್ನು ಹೆಚ್ಚಿಸಿತು. ಸಹಜವಾಗಿಯೇ ಡಿಎಂಕೆ ಹಾಗೂ ಅದರ ಮೈತ್ರಿಕೂಟದ ವಿರುದ್ಧ ಸ್ಪಷ್ಟ ಜನಾಕ್ರೋಶ ವ್ಯಕ್ತವಾಗಿರುವುದು ಗೋಚರಿಸುತ್ತಿದೆ.

ತಮಿಳುನಾಡಿನಾದ್ಯಂತ ವ್ಯಾಪಕ ಪ್ರಚಾರ ನಡೆಸಿದ ಬಳಿಕ ಸಿಪಿಎಂ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಈ ಮಾತನ್ನು ಪುನರುಚ್ಚರಿಸಿದ್ದಾರೆ. ಬೆಲೆ ಏರಿಕೆ ಮತ್ತು ಭ್ರಷ್ಟಾಚಾರ ಈ ಬಾರಿಯ ಪ್ರಮುಖ ಚುನಾವಣಾ ವಿಷಯ ಎಂದಿರುವ ಕಾರಟ್, ಹಲವು ಹಗರಣಗಳಿಂದ ಕಳಂಕಿತ ಡಿಎಂಕೆ ಅಧಿಕಾರದಿಂದ ಕೆಳಗಿಳಿಯಲಿದೆ ಎಂದು ಹೇಳಿದ್ದಾರೆ.

ಇದೇ ಭೀತಿಯಲ್ಲಿ ಡಿಎಂಕೆ ಚುನಾವಣೆಯಲ್ಲಿ ವ್ಯಾಪಕ ಅಕ್ರಮಕ್ಕೆ ಮುಂದಾಗಿದೆ. ಮತದಾನದ ದಿನ ಮತ್ತು ಅದರ ಹಿಂದಿನ ಕೆಲವು ದಿನಗಳಲ್ಲಿ ತಮಿಳುನಾಡಿನಾದ್ಯಂತ ವ್ಯಾಪಕ ಹಣದ ಹರಿವು ಹರಿದಿದೆ. ಮಾಜಿ ಕೇಂದ್ರ ಸಚಿವ ರಾಜಾ ಸಂಬಂಧಿಕರು ಮತ್ತು ಬೆಂಬಲಿಗರ ಕೈಯಲ್ಲಿ ಕೋಟಿಗಟ್ಟಲೆ ರೂಪಾಯಿ ಹಣವನ್ನು ಚುನಾವಣಾ ಅಧಿಕಾರಿಗಳು ವಶಪಡಿಸಿಕೊಂಡರು. ಎಪ್ರಿಲ್ 12ರ ವರೆಗೆ ರಾಜ್ಯದಲ್ಲಿ ಯಾವುದೇ ದಾಖಲೆ ಇಲ್ಲದ 34 ಕೋಟಿ ರೂಪಾಯಿ ಹಣವನ್ನು ಆಯೋಗದ ಅಧಿಕಾರಿಗಳು ಡಿಎಂಕೆ ಬೆಂಬಲಿಗರಿಂದ ವಶಪಡಿಸಿದರು. ಇಷ್ಟಾದರೂ ಚುನಾವಣೆಯಲ್ಲಿ ವ್ಯಾಪಕ ಅಕ್ರಮ ನಡೆಯುವುದನ್ನು ತಡೆಯುವಲ್ಲಿ ಚುನಾವಣಾ ಆಯೋಗ ವಿಫಲವಾಯಿತು.

## ಭೂಮಿ ಹೋರಾಟದ ಸಿದ್ಧತೆ



ಬೀಡಿ ಕಾರ್ಮಿಕರು, ಪಿಂಚಣಿದಾರರ ಪ್ರತಿಭಟನೆ - ಭವಿಷ್ಯ ನಿಧಿ ಕಛೇರಿ ಮುಂದೆ

# ಭವಿಷ್ಯನಿಧಿ ಪಿಂಚಣಿದಾರರಿಂದ ಪ್ರತಿಭಟನಾ ಪ್ರದರ್ಶನ

# ಬಿ.ಸಿ.ರೋಡ್‌ನಲ್ಲಿ ಭಗತ್‌ಸಿಂಗ್ ಹುತಾತ್ಮ ದಿನಾಚರಣೆ

ಬಂಟ್ವಾಳ ತಾಲ್ಲೂಕು ಎಸ್.ಎಫ್.ಐ. ವತಿಯಿಂದ ಮಾರ್ಚ್ 23 ರಂದು ಭಗತ್‌ಸಿಂಗ್ ಹುತಾತ್ಮ ದಿನಾಚರಣೆಯನ್ನು ಆಚರಿಸಲಾಯಿತು. ಎಸ್‌ಎಫ್‌ಐನಲ್ಲಿ ಈ ಹಿಂದೆ ರಾಜ್ಯ ಮುಖಂಡರಾಗಿದ್ದ ಸುನಿಲ್‌ಕುಮಾರ್ ಬಜಾಲ್ ಅವರು ಭಗತ್‌ಸಿಂಗ್ ಅವರ ಜೀವನ, ಹೋರಾಟ ಹಾಗೂ ಅವರ ವಿಚಾರಗಳ ಪ್ರಸ್ತುತತೆಯ ಬಗ್ಗೆ ಮಾತನಾಡಿದರು.

ಕಾರ್ಯಕ್ರಮವನ್ನು ಶಿಕ್ಷಕ ಅಬ್ದುಲ್ ರಜಾಕ್ ಉದ್ಘಾಟಿಸಿದರು. ಎಸ್‌ಎಫ್‌ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಅಧ್ಯಕ್ಷ ಸುಜಿತ್ ಬೆಳ್ತಂಗಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಎಸ್‌ಎಫ್‌ಐ ಬಂಟ್ವಾಳ ತಾಲ್ಲೂಕು ಸಮಿತಿ ಕಾರ್ಯದರ್ಶಿ ತುಳಸೀದಾಸ್ ಸ್ವಾಗತಿಸಿದರು. ಅಧ್ಯಕ್ಷ ಮೋಜೇಶ್ ವಂದಿಸಿದರು. ಕೆ.ಪಿ.ನವಾರುಖ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಮಿಕ ಮುಖಂಡರೂ ಈ ಸಭೆಯಲ್ಲಿ ಭಾಗವಹಿಸಿದ್ದರು.




ವಾ. ಉ.

★

### ಆಶಾ ಕಾರ್ಯಕರ್ತೆಯರ ದಕ್ಷಿಣಕನ್ನಡ ಜಿಲ್ಲಾ ಸಮಾವೇಶ

ದಕ್ಷಿಣ ಕನ್ನಡ ಜಿಲ್ಲಾ ಆಶಾ ಕಾರ್ಯಕರ್ತೆಯರ ಜಿಲ್ಲಾ ಸಮಾವೇಶವು ಮಾರ್ಚ್ 26 ರಂದು ಬಿ.ಸಿ.ರೋಡ್‌ನಲ್ಲಿ ಜಿಲ್ಲಾ ಸಂಘದ ಅಧ್ಯಕ್ಷೆ ಅನಿತಾ ಅವರ ಅಧ್ಯಕ್ಷೆಯಲ್ಲಿ ಜರುಗಿತು. ಆಶಾ ಕಾರ್ಯಕರ್ತೆಯರ ರಾಜ್ಯಸಂಘದ ಅಧ್ಯಕ್ಷರಾದ ಎಸ್.ವರಲಕ್ಷ್ಮಿಯವರು ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಸಿಐಟಿಯು ದಕ್ಷಿಣಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಸಿಐಟಿಯು ಆಶಾ ಕಾರ್ಯಕರ್ತೆಯರ ರಾಜ್ಯ ಸಂಘದ ಸಹ ಕಾರ್ಯದರ್ಶಿ ಬಿ.ಎಂ.ಭಟ್ ಮೊದಲಾದವರು ಉಪಸ್ಥಿತರಿದ್ದು, ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.

ಸಮಾವೇಶದಲ್ಲಿ ನೂತನ ಜಿಲ್ಲಾ ಸಮಿತಿ ರಚಿಸಲಾಗಿದ್ದು ಅಧ್ಯಕ್ಷರಾಗಿ ಅನಿತಾ, ಉಪಾಧ್ಯಕ್ಷರಾಗಿ ವಸಂತ ಕುಪ್ಪಪದವು, ಫ್ಲೋಸ್ಸಿ ವಿಟ್ಲ, ಹೇಮಲತಾ ಬೆಳ್ತಂಗಡಿ ಕಾರ್ಯದರ್ಶಿಯಾಗಿ ದೇವಕಿ ಕಳೆಂಜ ಹಾಗೂ 27 ಮಂದಿಯನ್ನೊಳಗೊಂಡ ಸಮಿತಿ ರಚಿಸಲಾಗಿದೆ. ಸಂಘದ ಜಿಲ್ಲಾ ಕಾರ್ಯದರ್ಶಿ ದೇವಕಿ ಸ್ವಾಗತಿಸಿ ವಂದಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ ಪ್ರಥಮ ಬಾರಿಗೆ ಇಷ್ಟೊಂದು ಸಂಖ್ಯೆಯಲ್ಲಿ ಆಶಾ ಕಾರ್ಯಕರ್ತೆಯರು ಸಮಾವೇಶಗೊಂಡುದು ವಿಶೇಷವಾಗಿದೆ.

★

### ಬೇಡಿಕೆ ಒತ್ತಾಯಿಸಿ ಬೀಡಿ ಕಾರ್ಮಿಕರು ಹಾಗೂ ಪಿಂಚಣಿದಾರರಿಂದ ಧರಣಿ :

ಭವಿಷ್ಯನಿಧಿಪಿಂಚಣಿ ಯೋಜನೆಯ ಸುಧಾರಣೆ, ಇಪಿಎಫ್ 1995 ತಿದ್ದುಪಡಿ ಮಾಡಲು ಒತ್ತಾಯಿಸಿ ಕರ್ನಾಟಕ ರಾಜ್ಯ ಭವಿಷ್ಯನಿಧಿ ಪಿಂಚಣಿದಾರರ ದಕ್ಷಿಣಕನ್ನಡ ಜಿಲ್ಲಾ ಸಂಘದ ನೇತೃತ್ವದಲ್ಲಿ ನೂರಾರು ಸಂಖ್ಯೆಯ ಬೀಡಿ ಕಾರ್ಮಿಕರು ಸೇರಿದಂತೆ ಭವಿಷ್ಯನಿಧಿ ಪಿಂಚಣಿದಾರರು ಮಾರ್ಚ್ 29 ರಂದು ಮಂಗಳೂರು ಪ್ರಾದೇಶಿಕ ಭವಿಷ್ಯನಿಧಿ ಕಚೇರಿ ಎದುರು ಪ್ರತಿಭಟನಾ ಧರಣಿ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಂಘದ ಜಿಲ್ಲಾಧ್ಯಕ್ಷ ವಸಂತ ಆಚಾರಿ, ಕಾರ್ಯದರ್ಶಿ ಸುಕುಮಾರ್, ಕೋಶಾಧಿಕಾರಿ ಜೆ.ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಸಿಐಟಿಯು ಸಂಯೋಜಿತ ವಿವಿಧ ಸಂಘಟನೆಗಳ ಮುಖಂಡರಾದ ಸುನಿಲ್‌ಕುಮಾರ್ ಬಜಾಲ್, ಯು.ಬಿ.ಲೋಕಯ್ಯ ರಮಣಿ, ಪದ್ಮಾವತಿ ಶೆಟ್ಟಿ, ಬಾಬು ದೇವಾಡಿಗ ಮೊದಲಾದವರು ವಹಿಸಿದ್ದರು.

ಭವಿಷ್ಯನಿಧಿ ಪಿಂಚಣಿದಾರರಿಗೆ ಕನಿಷ್ಟ ಮಾಸಿಕ 1500 ರೂ. ಪಿಂಚಣಿ ನೀಡಬೇಕು. ಕಮ್ಯುಟೇಶನ್ ಪದ್ಧತಿಯನ್ನು ಮರಳಿ ಸ್ಥಾಪಿಸಬೇಕು. ಪಿಂಚಣಿಯನ್ನು ಗ್ರಾಹಕರ ಬೆಲೆ ಸೂಚ್ಯಾಂಕಕ್ಕೆ ಜೋಡಿಸಿ ತುಟ್ಟಿಭತ್ಯೆ ನೀಡಬೇಕು. ಪಿಂಚಣಿ ನಿಧಿಗೆ ಕೇಂದ್ರದ ಕೊಡುಗೆಯನ್ನು ಶೇ.1.16 ರಿಂದ ಶೇ.6 ಕ್ಕೆ ಏರಿಸಬೇಕು. ಪಿಂಚಣಿಯನ್ನು ಉಪಧನ ಮತ್ತು ಭವಿಷ್ಯನಿಧಿಯ ಜೊತೆಗೆ ಮೂರನೇ ಸವಲತ್ತಿನ ರೂಪದಲ್ಲಿ ನೀಡಬೇಕು. ಕಮ್ಯುಟೇಶನ್ ಪಡೆದವರಿಗೆ ನೂರು ತಿಂಗಳ ಅನಂತರ ಪೂರ್ಣ ಪಿಂಚಣಿ ನೀಡಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟು ಇಂದು ಪ್ರತಿಭಟನೆ ನಡೆಯಿತು.

ಇದಕ್ಕೂ ಮೊದಲು ಪ್ರತಿಭಟನಾಕಾರರು ಕಂಕನಾಡಿ ಮೈದಾನದಿಂದ ಭವಿಷ್ಯನಿಧಿ ಕಚೇರಿವರೆಗೆ ಮೆರವಣಿಗೆ ನಡೆಸಿದರು.

★

### ಭೂಮಿ ಹೋರಾಟಕ್ಕೆ ಡಿವೈಎಫ್‌ಐ ಭರದ ಸಿದ್ಧತೆ

ನಿವೇಶನರಹಿತರಿಗೆ ಭೂಮಿ ನೀಡಬೇಕೆಂದು, ವಾಸವಾಗಿರುವ ಭೂಮಿಗೆ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಡಿವೈಎಫ್ ಐ ದ.ಕ.ಜಿಲ್ಲಾ ಸಮಿತಿಗಳು ಏಪ್ರಿಲ್ 26ರಂದು ಮಂಗಳೂರು ಜಿಲ್ಲಾಧಿಕಾರಿಗಳ ಕಛೇರಿ ಎದುರು ಹಮ್ಮಿಕೊಂಡಿರುವ ಬೃಹತ್ ಭೂಮಿ ಹೋರಾಟಕ್ಕಾಗಿ ಡಿವೈಎಫ್‌ಐಯ ಮಂಗಳೂರು ನಗರ ಮತ್ತು ಉಳ್ಳಾಲ ವಲಯ ಸಮಿತಿಗೆ ಸಂಯೋಜಿತಗೊಂಡಿರುವ ಘಟಕಗಳು ಎರಡು ವಾರಗಳಿಗೂ ವಿಸ್ತರಿಸಿ ಅಲ್ಲಲ್ಲಿ ನಿವೇಶನರಹಿತರ ಸಮಾವೇಶಗಳನ್ನು ಇಲ್ಲವೇ ಪ್ರತಿಭಟನಾ ಪ್ರದರ್ಶನಗಳನ್ನು ಏರ್ಪಡಿಸಿದವು. ಇದೇ ಸಂದರ್ಭದಲ್ಲಿ ನಿವೇಶನರಹಿತರಿಂದ ನಿವೇಶನ ಕೋರಿ ಅರ್ಜಿಗಳನ್ನು ಸಂಗ್ರಹಿಸಿ ಸಂಬಂಧಪಟ್ಟ ಆಡಳಿತಕ್ಕೆ ಸಲ್ಲಿಸಲು ಸಿದ್ಧತೆ ನಡೆಸಿವೆ.

ಮಂಗಳೂರು ನಗರದ ಶಕ್ತಿನಗರದ ದೀಪಾ ಫ್ರೆಂಡ್ಸ್ ಕ್ಲಬ್ ಮೈದಾನದಲ್ಲಿ ಏಪ್ರಿಲ್ 3 ರಂದು 500 ರಷ್ಟು ಮಂದಿ ಸಮಾವೇಶಗೊಂಡಿದ್ದರು. ಡಿವೈಎಫ್‌ಐ ಶಕ್ತಿನಗರ ಘಟಕ ಏರ್ಪಡಿಸಿದ್ದ ಈ ಸಮಾವೇಶವನ್ನುದ್ದೇಶಿಸಿ ಡಿವೈಎಫ್‌ಐ ಜಿಲ್ಲಾಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ. ಇಮ್ತಿಯಾಜ್ ಕಾರ್ಯದರ್ಶಿ ಸಂತೋಷ್‌ಕುಮಾರ್ ಬಜಾಲ್, ಪ್ರಾಂತ ರೈತ ಸಂಘ ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ ಮಾತನಾಡಿದರು. ಡಿವೈಎಫ್‌ಐ ಘಟಕದ ಉಮೇಶ್ ಬೊಲ್ಯ ಉಮೇಶ್ ಶಕ್ತಿನಗರ, ವಿಶ್ವನಾಥ ಮಂಜಡ್ಕ, ತುಕಾರಾಂ ಶಕ್ತಿನಗರ, ಯುವತಿಯರ ನಗರ ಸಮಿತಿ ಅಧ್ಯಕೆ ಪ್ರಮೀಳಾ ಶಕ್ತಿನಗರ, ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘಟನೆಯ ಶಶಿಧರ ಶಕ್ತಿನಗರ, ಮೊದಲಾದವರು ಸಮಾವೇಶ ಸಂಘಟನೆಯ ನೇತೃತ್ವ ವಹಿಸಿದ್ದರು.

ಸೋಮೇಶ್ವರ ಗ್ರಾಮ ಪಂಚಾಯಿತಿ ಎದುರು ಏಪ್ರಿಲ್ 5 ರಂದು ನಡೆದ ಪ್ರತಿಭಟನಾ

ಪುಟ 15 ಕ್ಕೆ

# ಭ್ರಷ್ಟಾಚಾರದ ವಿರುದ್ಧ ಸಿಪಿಐ(ಎಂ) ಪ್ರಚಾರಾಂದೋಲನ ಜಾಥಾ ಆರಂಭ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಭ್ರಷ್ಟಾಚಾರ, ಅಸಮರ್ಪಕ ಆಡಳಿತ ವಿರುದ್ಧ ಏಪ್ರಿಲ್ 19ರಂದು ರಾಜ್ಯಾದ್ಯಂತ ನಡೆಯಲಿರುವ ಪ್ರತಿಭಟನಾ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ದಕ್ಷಿಣ ಕನ್ನಡ ಜಿಲ್ಲೆಯ ಪಕ್ಷದ ವಲಯ ಸಮಿತಿಗಳು ವ್ಯಾಪಕವಾದ ಪ್ರಚಾರಾಂದೋಲನವನ್ನು ಕೈಗೊಂಡಿದೆ. ವಾಹನ ಪ್ರಚಾರ ಜಾಥಾಗಳನ್ನು ಅಲ್ಲಲ್ಲಿ ಕೈಗೊಳ್ಳಲಾಗಿದೆ.



ಸಿಪಿಎಂ ಮಂಗಳೂರು ನಗರ ಸಮಿತಿ ಹಮ್ಮಿಕೊಂಡಿದ್ದ ಎರಡು ದಿನಗಳ ಪ್ರಚಾರಾಂದೋಲನ ಜಾಥಾವನ್ನು ಮಂಗಳೂರು ಸೆಂಟ್ರಲ್ ಮಾರ್ಕೆಟ್ ಬಳಿ ಏಪ್ರಿಲ್ 9 ರಂದು ಬೆಳಿಗ್ಗೆ ಸಿಪಿಎಂ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ಉದ್ಘಾಟಿಸಿದರು.

ಮುಖ್ಯಮಂತ್ರಿ ಬಿ.ಎಸ್.ಯಡಿ ಯೂರಪ್ಪ ನೇತೃತ್ವದ ರಾಜ್ಯ ಸರ್ಕಾರ ಸಂಪೂರ್ಣವಾಗಿ ದಿವಾಳಿಯಾಗಿದೆ. ರಾಜ್ಯ ಸರ್ಕಾರದಲ್ಲಿ ಮುಖ್ಯಮಂತ್ರಿಯಿಂದ ಹಿಡಿದು ಬಹುತೇಕ ಸಚಿವರು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಜೊತೆಗೆ ರಾಜ್ಯವನ್ನು ಸಾಲದ ಕೂಪಕ್ಕೆ ಸಿಲುಕಿಸಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ಮಠಗಳಿಗೆ ಸುರಿಯುತ್ತಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ 3 ಸಾವಿರಕ್ಕೂ ಅಧಿಕ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವಸಂತ ಆಚಾರಿ ಟೀಕಿಸಿದರು.

ಸಿಪಿಎಂ ನಗರ ಸಮಿತಿ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್, ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಾಲಕೃಷ್ಣಶೆಟ್ಟಿ, ಅಲ್ಲದೆ ಸುಕುಮಾರ್, ಜಯಂತಿಶೆಟ್ಟಿ, ಭಾರತಿ ಬೋಳಾರ, ಬಾಬು ದೇವಾಡಿಗ, ಎಚ್.ಟಿ.ಸುವರ್ಣ, ಲಿಂಗಪ್ಪ ನಂತೂರು ಮತ್ತಿತರರು ಉಪಸ್ಥಿತರಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

# ಬಡವರ ಪ್ರಗತಿಯ ಹೆದ್ದಾರಿ ತೋರಿದ ಪ.ಬಂಗಾಲ ಎಡರಂಗ ಸರ್ಕಾರ

**ಪಶ್ಚಿಮ ಬಂಗಾಳದ ವಿಧಾನಸಭೆ ಚುನಾವಣೆಯ ಹೊತ್ತಿನಲ್ಲಿ ಹೆಚ್ಚಿನ ಮಾಧ್ಯಮ ಸಂಸ್ಥೆ ಎಡರಂಗದ ಕೊಡುಗೆಯನ್ನು ಮರೆಮಾಚಿ ಅಪಪ್ರಚಾರಕ್ಕೆ ನಿಂತಿರುವ ಹೊತ್ತಲ್ಲಿ ಓದಿ - ಎಡರಂಗ ಸರ್ಕಾರ ಭೂಸುಧಾರಣಾ ನೀತಿ ಹಾಗೂ ಅದರ ಮಹತ್ವದ ಸಕಾರಾತ್ಮಕ ಪರಿಣಾಮಗಳ ಕುರಿತು...**

■ **ಮದನ್‌ಘೋಷ್** ಅನು : ಜಿ.ಎಸ್.ಮಣಿ

ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ 34 ವರ್ಷಗಳ ಕಾಲ ಸತತವಾಗಿ ಆಡಳಿತ ನಡೆಸಿದೆ. ಇಂತಹ ಸತತವಾಗಿ ಜನರಿಂದ ಮನ; ಮನ: ಆಯ್ಕೆಯಾಗಿ ಆಡಳಿತ ನಡೆಸುತ್ತಿರುವುದು ಜಾಗತಿಕ ದಾಖಲೆ. ಇದಕ್ಕೆ ಕಾರಣಗಳೇನು ಎಂಬ ಕುತೂಹಲ ಸಹಜವಾದದ್ದು. ಹಲವು ಕಾರಣಗಳು ಇದಕ್ಕಿವೆ. ಆದರೆ ಎಲ್ಲಕ್ಕಿಂತ ಅಲ್ಲಿ ಎಡರಂಗ ಜಾರಿಗೆ ತಂದ ಭೂಸುಧಾರಣೆ ಮುಖ್ಯವಾದದ್ದು ಎಂಬುದು ಸ್ವಲ್ಪ ಆಳಕ್ಕೆ ಇಳಿದರೂ ಗೊತ್ತಾಗಿಬಿಡುತ್ತದೆ. 30 ಲಕ್ಷ ರೈತರಿಗೆ ಭೂಮಿ ದೊರೆಯುವಂತಾದರೆ ಅದು ಸಾಮಾನ್ಯ ಸಾಧನೆಯಲ್ಲ. ಯಾಕೆಂದರೆ 30 ಲಕ್ಷ ಬಡವಾತಿ ಬಡ ರೈತರಿಗೆ ಭೂಮಿ ದೊರೆತಿದೆ. ಒಬ್ಬ ರೈತನ ಮನೆಯಲ್ಲಿ ಐದು ಜನರಿದ್ದಾರೆಂದುಕೊಂಡರೂ ಒಂದುವರೆ ಕೋಟಿ ಜನರಿಗೆ ಭೂಸುಧಾರಣೆಯ ನೇರ ಫಲ-ಅನುಕೂಲ ದೊರೆತಿದೆ. ಈ ಕುಟುಂಬಗಳಲ್ಲೂ ಶೇ.37 ರಷ್ಟು ಪರಿಶಿಷ್ಟ ಜಾತಿ ಮತ್ತು ಪ.ಪಂಗಡಗಳಿಗೆ ಸೇರಿದವರು.

ಕೆಳಗಿನ ಕೋಷ್ಟಕ ನೋಡಿ. ಪ.ಬಂಗಾಳದಲ್ಲಿ ದೇಶದ ಶೇ.3.9 ರಷ್ಟು ನಿವ್ವಳ ಬಿತ್ತನೆ ಭೂಮಿ ಹೊಂದಿದೆ. ಇಡೀ ದೇಶದ ಭೂ ಸುಧಾರಣೆಯ ಫಲಾನುಭವಿಗಳ ಶೇ. 54.5 ರಷ್ಟು ಪ.ಬಂಗಾಳದಲ್ಲೆ ಇದ್ದಾರೆ. ಹಾಗೆಯೆ ಭೂ ಸುಧಾರಣೆಯಡಿ ವಿತರಣೆಯಾದ ದೇಶದ ಶೇ. 22.6 ರಷ್ಟು ಭೂಮಿ ಪ.ಬಂಗಾಳದ್ದು.

ಪ. ಬಂಗಾಳದಲ್ಲಿ 11.28 ಲಕ್ಷ ಎಕರೆಗಳ ಕೃಷಿ ಭೂಮಿಯನ್ನು ಭೂಮಿ ಇಲ್ಲದ ಕೃಷಿ ಕೂಲಿಕಾರರಿಗೆ,

**ಕೋಷ್ಟಕ 1**

ಭೂಮಿ ಸುಧಾರಣಾ ಕಾಯ್ದೆಯಡಿ ಭೂಮಿ ವಿತರಣೆ ಹಾಗೂ ಫಲಾನುಭವಿಗಳು

| | ಭಾರತ | ಪ.ಬಂಗಾಳ | ಪ.ಬಂಗಾಳದ ಶೇ ಪ್ರಮಾಣ ದೇಶದ ವಿತರಣೆಯಲ್ಲಿ |
|---|---|---|---|
| ಹಂಚಿಕೆಯಾದ ಭೂಮಿ (ಎಕರೆಗಳಲ್ಲಿ) | 49,64,995 | 11,22,116 | ಶೇ.22.6 |
| ಫಲಾನುಭವಿಗಳು | 54,57,522 | 29,71,857 | ಶೇ.54.3 |

ಬಡವರಿಗೆ ವಿತರಿಸಲಾಗಿದೆ. ಇಲ್ಲೂ ವಿಶೇಷವೆಂದರೆ 5.15 ಲಕ್ಷದಷ್ಟು ಜಂಟಿ ಪಟ್ಟಾಗಳನ್ನು ಮತ್ತು 1.62 ಲಕ್ಷದಷ್ಟು ಮಹಿಳೆಯರಿಗೆ ಪಟ್ಟಾ ನೀಡಿರುವುದು.

ಆಪರೇಷನ್ ಬರ್ಗಾ ಮೂಲಕ ಪಾಲು ಬೆಳೆಗಾರರಿಗೆ ಹಕ್ಕುಗಳನ್ನು ನೀಡಿ 15.13 ಲಕ್ಷ ರೈತ ಕುಟುಂಬಗಳಿಗೆ ಅನುಕೂಲ ಮಾಡಿಕೊಡಲಾಗಿದೆ. ಈ ಕ್ರಮಗಳ ಪರಿಣಾಮವೇನೆಂದರೆ ಪ.ಬಂಗಾಳದಲ್ಲಿ ಶೇ.84 ರಷ್ಟು ಭೂಮಿಯನ್ನು ಸಣ್ಣ ಮತ್ತು ಅತೀ ಸಣ್ಣ ರೈತರು ಹೊಂದಿರುವುದು.

**ಅಪ ಪ್ರಚಾರ:**

ಪ. ಬಂಗಾಳದಲ್ಲಿ ವಿಶೇಷ ಆರ್ಥಿಕ ವಲಯಗಳ ಸಲುವಾಗಿ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂಬ ದುರುದ್ದೇಶದ ಅಪಪ್ರಚಾರ ಇತ್ತೀಚಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದಿದೆ. ಈ ವಿಷಯವನ್ನು ಸ್ವಲ್ಪವೇ ಆಳಕ್ಕಿಳಿದು ನೋಡಿದರೂ ಇದು ಹಸೀ ಸುಳ್ಳೆಂದು ಗೊತ್ತಾಗುತ್ತದೆ. ವಿಶೇಷ ಆರ್ಥಿಕ ವಲಯಗಳ ಕಾಯಿದೆ 2006 ರಲ್ಲಿ ಬಂದ ನಂತರ ಪ. ಬಂಗಾಳದಲ್ಲಿ 11 ವಿಶೇಷ ಆರ್ಥಿಕ ವಲಯಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇವೆಲ್ಲವೂ ಮಾಹಿತಿ ತಂತ್ರಜ್ಞಾನ ಮತ್ತು ಅದಕ್ಕೆ [illegible]

10 ರಿಂದ 20 ಹೆಕ್ಟೆರುಗಳಷ್ಟು ಭೂಮಿ ಸಾಕು. ಕೋಷ್ಟಕ 2 ಅನ್ನು ನೋಡಿ. ಭಾರತದ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಪ. ಬಂಗಾಳ ಅತ್ಯಂತ ಕಡಿಮೆ ಭೂಮಿಯನ್ನು ಈ ಸಲುವಾಗಿ ವಶಪಡಿಸಿ ಕೊಂಡಿರುವುದು ಸ್ಪಷ್ಟವಾಗುತ್ತದೆ. ಪ. ಬಂಗಾಳದ ವಿರುದ್ಧ ಇದು ಅತ್ಯಂತ ಹೇಯ ದುರುದ್ದೇಶದ ಅಪ ಪ್ರಚಾರ ಎಂಬುದು ವಿವರಣೆಯನ್ನು ಕೇಳದ ಸತ್ಯ.

ಈ ಅಪಪ್ರಚಾರ ನಡೆಯುತ್ತಿರುವಾಗಲೂ ಪ. ಬಂಗಾಳ ಸರ್ಕಾರ ಭೂಮಿ ಇಲ್ಲದವರಿಗೆ ಭೂ ವಿತರಣೆ ಮಾಡುತ್ತಿತ್ತು! 2007-2010 ರ ಅವಧಿಯಲ್ಲಿ 6,760 ಹೇ. ಭೂಮಿಯನ್ನು ಪ. ಬಂಗಾಳ ಸರ್ಕಾರ ವಿತರಣೆ ಮಾಡಿದೆ. ಇದಲ್ಲದೆ 20,000 ಜನರಿಗೆ ಇದೆ ಅವಧಿಯಲ್ಲಿ ಮನೆ ಕಟ್ಟಲು ಭೂಮಿಯನ್ನು ವಿತರಿಸಿದೆ. ಆದಿವಾಸಿಗಳಿಗೆ 15,300 ಎಕರೆಗಳಷ್ಟು ಭೂಮಿಗೆ ಪಟ್ಟಾವನ್ನು ಕಾಡಿನ ಹಕ್ಕಿನ ಕಾಯಿದೆಯಡಿ ನೀಡಲಾಗಿದೆ. ಪ. ಬಂಗಾಳದ ನಿವ್ವಳ ಬಿತ್ತನೆ ಭೂಮಿ 1995-96 ರಲ್ಲಿ ಶೇ. 62.8 ರಷ್ಟು ಇದ್ದದ್ದು 2008-09 ರಲ್ಲಿ ಶೇ.61 ಕ್ಕೆ ಇಳಿದಿದೆ ( ಪ. ಬಂಗಾಳದ ಆರ್ಥಿಕ ಸಮೀಕ್ಷೆ, 2009-10). ಕೃಷಿಯೇತರ ಚಟುವಟಿಕೆಗಳಿಗೆ ಅಪಾರ ಪ್ರಮಾಣದ ಭೂಮಿಯನ್ನು ವಶೀಕರಿಸಿಕೊಳ್ಳಲಾಗಿದೆ ಎಂಬುದು ಸುಳ್ಳು ಅನ್ನುವುದು ಇದರಿಂದಲೂ ಸ್ಪಷ್ಟವಾಗುತ್ತದೆ.

**ಪ್ರಶಂಸೆ:**

ಕೇಂದ್ರ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ ನೇಮಿಸಿದ ಸಮಿತಿಯೊಂದು (ರಾಜ್ಯಗಳಲ್ಲಿನ ಕೃಷಿ ಸಂಬಂಧ ಮತ್ತು ಭೂ ಸುಧಾರಣೆಗಳಲ್ಲಿ ಪೂರ್ತಿಯಾಗದ ಕಾರ್ಯಗಳ ಮೇಲಿನ ಸಮಿತಿ) ನೀಡಿರುವ ವಸ್ತುನಿಷ್ಠ ಪ್ರಶಂಸೆಯನ್ನು ನೋಡಿ:

"ಬಡವರಿಗೆ ಹಂಚಿರುವ ಭೂಮಿ ಬಹುತೇಕವಾಗಿ ಸಾಗುವಳಿಗೆ ಲಾಯಕ್ಕಲ್ಲದ ಭೂಮಿ. ಈ ಭೂಮಿಯೂ ಅವರ ವಶದಲ್ಲಿ ಇಲ್ಲ. ಇಂತಹ ಪರಿಸ್ಥಿತಿ ಪ.ಬಂಗಾಳ, ಕೇರಳ ಮತ್ತು ತ್ರಿಪುರಾಗಳನ್ನು ಹೊರತುಪಡಿಸಿದರೆ ಬೇರೆಲ್ಲ ರಾಜ್ಯಗಳಲ್ಲೂ ಇದೆ."

ಎಡ ಸರ್ಕಾರಗಳ ಸಾಧನೆಗಳ ಬಗ್ಗೆ ಇದಕ್ಕಿಂತ ಹೆಚ್ಚಿನ ಪುರಾವೆ ಬೇಕೆ? ಸಮಿತಿಯು ವರದಿ ಮುಂದುವರಿದು ಗೇಣಿ ಹಕ್ಕುಗಳ ಬಗ್ಗೆ ಹೇಳುತ್ತದೆ: "..........ಕಾಯಿದೆ ಬದ್ಧವಲ್ಲದ ಗೇಣಿ ಪದ್ಧತಿ ಬಹುತೇಕ ಕಡೆಗಳಲ್ಲಿ ಮುಂದುವರಿಯುತ್ತಿದೆ. ಗೇಣಿದಾರರಿಗೆ/ಪಾಲುಬೆಳೆಗಾರರಿಗೆ ನ್ಯಾಯಯುತ ಗೇಣಿ ವಿಷಯದಲ್ಲಿ ಪ.ಬಂಗಾಳದಲ್ಲಿ ಮಾತ್ರ ಎಡರಂಗ ಸರ್ಕಾರದ ಪೂರ್ಣ ಬೆಂಬಲ ವಿದೆ".

**ಕೋಷ್ಟಕ 2**

2006 ರಿಂದ ವಿಶೇಷ ಆರ್ಥಿಕ ವಲಯ - ಆಯ್ದ ರಾಜ್ಯಗಳ ಮಾಹಿತಿ

| ರಾಜ್ಯ | ಎಸ್‌ಇಝಡ್ ಸಂಖ್ಯೆ | ನೀಡಲಾದ ಭೂಮಿ (ಹೆಕ್ಟೇರ್‌ಗಳಲ್ಲಿ) | ಅತಿದೊಡ್ಡ ಎಸ್.ಇ.ಝಡ್. (ಹೆಕ್ಟೇರ್‌ಗಳಲ್ಲಿ) |
|---|---|---|---|
| ಆಂಧ್ರ | 74 | 12,300 | 2,206 |
| ಮಹಾರಾಷ್ಟ್ರ | 62 | 9,150 | 1,597 |
| ತಮಿಳುನಾಡು | 57 | 4,470 | 1,019 |
| ಕರ್ನಾಟಕ | 32 | 2,160 | 588 |
| ಹರ್ಯಾಣ | 32 | 1,380 | 440 |
| ಗುಜರಾತ್ | 30 | 8,600 | 6,214 |
| ಪಶ್ಚಿಮ ಬಂಗಾಳ | 11 | 210 | 48 |
| ಗೋವಾ | 3 | 250 | 123 |

**ದೇಶದಲ್ಲೇ ಉತ್ತಮಕೃಷಿ ಬೆಳವಣಿಗೆ ದರ**

ಭೂಸುಧಾರಣೆಯನ್ನು ಇಷ್ಟು ಉತ್ತಮವಾಗಿ ಮಾಡಿದ ಫಲ ರಾಜ್ಯದ ಕೃಷಿ ಬೆಳವಣಿಗೆ ದರದಲ್ಲಿ ಕಂಡಿದೆ. ಎಡರಂಗ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಬೆಳವಣಿಗೆ ದರ ಅತ್ಯಂತ ಕಡಿಮೆ ಇದ್ದದ್ದು ಅದು ಅಧಿಕಾರಕ್ಕೆ ಬಂದ ನಂತರ ಅತ್ಯುತ್ತಮ ವಾಯಿತು (ಕೋಷ್ಟಕ-3 ನೋಡಿರಿ). ದೇಶದಲ್ಲಿ ಕೃಷಿ ಬೆಳವಣಿಗೆ ದರ ಹೆಚ್ಚಿಸಬೇಕೆಂದರೆ ಭೂಸುಧಾರಣೆ ಮಾಡಲೆಬೇಕು ಎಂಬ ಸಂದೇಶವನ್ನೇ ಅದು ನೀಡುತ್ತಿರುವಂತೆ ಇದೆ.

ನವ ಉದಾರವಾದಿ ಜಾಗತೀಕರಣದ ನೀತಿಗಳು ಜಾರಿಗೆ ಬಂದ ನಂತರ ದೇಶದಾದ್ಯಂತ ಕೃಷಿ ಬೆಳವಣಿಗೆ ದರ ತೀವ್ರವಾಗಿ ಕುಸಿದಿದೆ. ಆದರೆ ಪ.ಬಂಗಾಳದಲ್ಲಿ 1995-96 ರಿಂದ 2004-05 ರ ಅವಧಿಯಲ್ಲಿ ಅದು ಶೇ 2.67 ರಷ್ಟಿದ್ದು ದೇಶದಲ್ಲೆ ಅತಿ ಹೆಚ್ಚಿನ ಬೆಳವಣಿಗೆ ದರದಲ್ಲಿ ಮೂರನೆ ರಾಜ್ಯವಾಗಿದೆ. ಈ ಅವಧಿಯಲ್ಲಿ ರಾಷ್ಟ್ರೀಯ ಸರಾಸರಿ ಕೃಷಿ ಬೆಳವಣಿಗೆ ದರ ಬರೀ ಶೇ.1.85 ರಷ್ಟು. ಮಹಾರಾಷ್ಟ್ರದ ಕೃಷಿ ಬೆಳವಣಿಗೆ ದರ ಈ ಅವಧಿಯಲ್ಲಿ ಶೇ. 0.1 ರಷ್ಟು. ಕರ್ನಾಟಕದ್ದು ಶೇ.0.03ರಷ್ಟು. (ಭಾರತ ಸರ್ಕಾರದ ಐದನೇ ಪಂಚವಾರ್ಷಿಕ ಯೋಜನೆಯ ಮೂರನೇ ಸಂಪುಟ ನೋಡಿ). ಬಹಳ ರಾಜ್ಯಗಳಲ್ಲಿ ಇಂತಹ ತೀವ್ರ ಕೃಷಿ ಬಿಕ್ಕಟ್ಟು ಹಲವು ರೈತರ ಆತ್ಮಹತ್ಯೆಯಲ್ಲಿ ಪರ್ಯವಸಾನಗೊಂಡಿದ್ದರೆ ಪ.ಬಂಗಾಳದಲ್ಲಿ ಇಂತಹ ಬಿಕ್ಕಟ್ಟು ಮತ್ತು ಪರಿಣಾಮಗಳು ಉಂಟಾಗಲಿಲ್ಲ ಎಂಬುದನ್ನು ಗಮನಿಸಬೇಕು. ನಿಜವೇನೆಂದರೆ ರಾಷ್ಟ್ರ ಸರಾಸರಿ ಶೇ. 0.2 ರಷು ಕೃಷಿ ಬೆಳವಣಿಗೆ ದರ ಹೊಂದಿರುವಾಗ ಪ.ಬಂಗಾಳದಲ್ಲಿ ಕೃಷಿ ಬೆಳವಣಿಗೆಯ ದರ ಶೇ.4.2 ರಷ್ಟಿದೆ!

**ಕೋಷ್ಟಕ 3**

**ಆಹಾರಧಾನ್ಯಗಳ ಬೆಳವಣಿಗೆ ದರ ಪಶ್ಚಿಮ ಬಂಗಾಳದಲ್ಲಿ**

| ಅವಧಿ | ಬೆಳವಣಿಗೆ ದರ |
|---|---|
| 1950-60 | 0.79 |
| 1960-70 | 3.32 |
| 1970-80 | 0.96 |
| 1980-90 | 5.81 |
| 1990-95 | 2.13 |

ವಿ.ಸೂ. : 1977ರಲ್ಲಿ ಪ. ಬಂಗಾಳದಲ್ಲಿ ಎಡರಂಗ ಅಧಿಕಾರಕ್ಕೆ ಬಂತೆಂಬುದನ್ನು 60 ರ ದಶಕದಲ್ಲಿ ಸಿಪಿಐ(ಎಂ) ಪಾಲ್ಗೊಂಡ ಸಂಯುಕ್ತ ರಂಗ ಸರ್ಕಾರಗಳು 67 ಮತ್ತು 69 ರಲ್ಲಿ ಅಧಿಕಾರಕ್ಕೆ ಬಂದು ಭೂಹೀನರ ಭೂ ಆಕ್ರಮಣ ಚಳುವಳಿಗಳು ಬಲಗೊಂಡವು ಎಂಬುದನ್ನು ಗಮನಿಸುವುದು.

ಕೆಲವು ಬೆಳೆಗಳ ಬೆಳವಣಿಗೆ ದರವನ್ನು ತೆಗೆದುಕೊಂಡು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಇದು ಇನ್ನೂ ನಿಚ್ಚಳವಾಗುತ್ತದೆ. ಬತ್ತದ ಉತ್ಪಾದನೆಯಲ್ಲಿ 1990-2005 ರ ಅವಧಿಯಲ್ಲಿ ಪ.ಬಂಗಾಳದಬೆಳವಣಿಗೆ ದರ ಶೇ.2.03 ರಷ್ಟಿದ್ದರೆ ತಮಿಳುನಾಡಿನಲ್ಲಿ ಅದು ಶೇ. -2.56 ರಷ್ಟಿದ್ದು ಆಂಧ್ರಪ್ರದೇಶದಲ್ಲಿ ಶೇ. 0.17 ರಷ್ಟಿದ್ದು ಉತ್ತರ ಪ್ರದೇಶದಲ್ಲಿ ಶೇ.1.46 ರಷ್ಟಿತ್ತು. ಗೋಧಿಯನ್ನು ತೆಗೆದುಕೊಂಡರೆ ಪ.ಬಂಗಾಳದ ಬೆಳವಣಿಗೆ ದರ ಶೇ. 3.46 ರಷ್ಟಿತ್ತು. ಇದು ಹರ್ಯಾಣ (ಶೇ.2.61), ಪಂಜಾಬ (ಶೇ1.46), ಉತ್ತರ ಪ್ರದೇಶ (ಶೇ.1.9) ಗಳ ದರಗಳಿಗಿಂತ ಹೆಚ್ಚಿನದಾಗಿತ್ತು (ನೋಡಿ: ಯೋಜನಾ ಆಯೋಗದ ಪ.ಬಂಗಾಳದ ಅಭಿವೃದ್ಧಿ ವರದಿ 2010, ಪುಟ 45). **ಪ.ಬಂಗಾಳ ದೇಶದಲ್ಲೆ ಅತ್ಯಂತ ಹೆಚ್ಚಿನ ಬತ್ತ ಬೆಳೆಯುವ ರಾಜ್ಯವಾಗಿ ಹೊರಹೊಮ್ಮಿರುವುದರಲ್ಲಿ ಆಶ್ಚರ್ಯವೇನಿಲ್ಲ. ಪ.ಬಂಗಾಳ ದೇಶದಲ್ಲೇ ಅತ್ಯಂತ ಹೆಚ್ಚಿನ ತರಕಾರಿ, ಹಣ್ಣು**

ಪುಟ 15 ಕ್ಕೆ

## ಹಜಾರೆ ಸತ್ಯಾಗ್ರಹ

# ಸಂಸದೀಯ ಪ್ರಜಾಪ್ರಭುತ್ವಕ್ಕೆ ಇದೆಂತಹಾ ತಿರಸ್ಕಾರ!

**ಮಸೂದೆಯ ಕರಡು ತಯಾರಿಸಲು ಜಂಟಿ ಸಮಿತಿಯ ರಚನೆಯಾಗಿದೆ. ಈ ನಂತರ ಅಣ್ಣಾ ಹಜಾರೆ ನಮ್ಮ ಸಂಸದೀಯ ವ್ಯವಸ್ಥೆ ಕುರಿತಂತೆ ವಿಲಕ್ಷಣ ಟೀಕೆ ಮಾಡಿದ್ದಾರೆ. ಅತ್ತ ಯುಪಿಎ ಮಂತ್ರಿವರ್ಯರು ಅಷ್ಟೇ ವಿಲಕ್ಷಣವಾದ ಟಿಪ್ಪಣಿ ಮಾಡಿದ್ದಾರೆ. ನಮ್ಮ ಸಂವಿಧಾನದಲ್ಲಿ ಜನತೆ ಸಾರ್ವಭೌಮ, ಜನತೆಯೇ ಪ್ರಥಮ ಎಂಬುದು ಶಾಶ್ವತ ಸಂದೇಶ. ಈ ಪ್ರಥಮ ಪ್ರಾಶಸ್ತ್ಯ ಇತರೆಲ್ಲ ಲಕ್ಷಣಗಳನ್ನು ಬದಿಗೊತ್ತುತ್ತದೆ. ಇದರ ಬಗ್ಗೆ ತಿರಸ್ಕಾರ, ಅಸಡ್ಡೆ ಸಂವಿಧಾನಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತದೆ. ಇದಕ್ಕೆ ಅವಕಾಶ ಕೊಡಲಾಗದು.**

ಯುಪಿಎ-2 ಸರಕಾರ ಸದ್ಯಕ್ಕಂತೂ ಅಣ್ಣಾ ಹಜಾರೆಯವರ ಉಪವಾಸ ಮತ್ತು ಲೋಕಪಾಲ ಮಸೂದೆಯ ಇಕ್ಕಟ್ಟಿನಿಂದ ಪಾರಾದಂತೆ ಕಾಣುತ್ತದೆ. ಈ ಶಾಸನದ ಕರಡು ತಯಾರಿಸಲು ರಚಿಸಿದ ಜಂಟಿ ಸಮಿತಿಯ ಅಧಿಸೂಚನೆ ಪ್ರಕಟವಾಗಿದೆ. ಮುಂದೆ ಏನೇ ಆಗಲಿ, ಒಂದಾದ ಮೇಲೊಂದರಂತೆ ಮಹಾ ಹಗರಣಗಳು ಬಯಲಿಗೆ ಬಂದ ಹಿನ್ನೆಲೆಯಲ್ಲಿ, ಜವಾಬುದಾರಿಕೆಯೆಂಬುದನ್ನು ಅರ್ಥಪೂರ್ಣಗೊಳಿಸುವ, ಸ್ಫುಟಗೊಳಿಸುವ ಒಂದು ಪರಿಣಾಮಕಾರಿ ಶಾಸನದ ಅಗತ್ಯ ಇನ್ನಷ್ಟು ಹೆಚ್ಚಿದೆ ಎಂಬುದಂತೂ ವಾಸ್ತವ ಸಂಗತಿ.

ಲೋಕಪಾಲ ಎಂಬ ಪರಿಕಲ್ಪನೆಯನ್ನು ಮೊದಲು ಸೂಚಿಸಿದ್ದು 1969ರಲ್ಲಿ ಆಡಳಿತ ಸುಧಾರಣಾ ಸಮಿತಿ. ಆಗ ದಿವಂಗತ ಮೊರಾರ್ಜಿ ದೇಸಾಯಿ ಅದರ ಮುಖ್ಯಸ್ಥರಾಗಿದ್ದರು. ಇದರೊಂದಿಗೆ ರಾಜ್ಯಗಳಲ್ಲಿ ಲೋಕಾಯುಕ್ತ ವ್ಯವಸ್ಥೆ ಇರಬೇಕೆಂದು ಸೂಚಿಸಲಾಗಿತ್ತು. ಆದರೆ ಇದಕ್ಕೆ ಪ್ರತಿರೋಧ ನಿರೀಕ್ಷಿತವೇ ಆಗಿತ್ತು. ಇದರಿಂದಾಗಿ ಈ ಶಾಸನ ಬಹಳ ಕಾಲದಿಂದ ನೆನೆಗುದಿಗೆ ಬಿದ್ದಿದೆ.

**ಎಡಪಕ್ಷಗಳ ಪ್ರಯತ್ನ**

ಎಡಪಕ್ಷಗಳು 1996ರಲ್ಲಿ ದೇವೇಗೌಡರ ನೇತೃತ್ವದ ಸಂಯುಕ್ತ ರಂಗ ಸರಕಾರವನ್ನು ಬೆಂಬಲಿಸಲು ಮುಂದಿಟ್ಟ ಷರತ್ತುಗಳಲ್ಲಿ ಲೋಕಪಾಲ ಮಸೂದೆಯನ್ನು ತರುವುದು ಕೂಡ ಒಂದು. ಒಂದು ಮಸೂದೆಯ ಕರಡು ಕೂಡ ಸಿದ್ಧವಾಯಿತು. ಆದರೆ ಅದು ಅತ್ಯಂತ ಅಸಮರ್ಪಕವಾಗಿತ್ತು. ಪ್ರಧಾನ ಮಂತ್ರಿಗಳು ಇದರ ವ್ಯಾಪ್ತಿಗೆ ಬರಬೇಕೇ ಬೇಡವೇ ಎಂಬುದು ವಿವಾದದ ವಿಷಯವಾಗಿತ್ತು. ವ್ಯಾಪ್ತಿಗೆ ಒಳಪಡಬೇಕು ಎಂಬುದು ಎಡಪಕ್ಷಗಳ ನಿಲುವಾಗಿತ್ತು. ಆದರೆ ಸಂಯುಕ್ತ ರಂಗ ಸರಕಾರದೊಳಗೇ ಅಡಕವಾಗಿದ್ದ ಅಸ್ಥಿರತೆಯಿಂದಾಗಿ ಆ ಮಸೂದೆ ಬೆಳಕು ಕಾಣಲೇ ಇಲ್ಲ. ನಂತರ ಆರು ವರ್ಷ ಆಡಳಿತ ನಡೆಸಿದ ಬಿಜೆಪಿ ನೇತೃತ್ವದ ಎನ್‌ಡಿಎ ಈ ವಿಷಯದಲ್ಲಿ ಏನೂ ಮಾಡದೆ ಸುಮ್ಮನಿತ್ತು. ಒಂದು ಭ್ರಷ್ಟಾಚಾರ-ವಿರೋಧಿ ಶಾಸನ ಅದಕ್ಕೆ ಬೇಕಿರಲಿಲ್ಲ ಅಥವ ಆ ಬಗ್ಗೆ ಭಯವೂ ಇದ್ದಿರಬಹುದು ಎಂಬುದು ಇದರಿಂದ ಬಯಲಾಯಿತು.

2004ರಲ್ಲಿ ಯುಪಿಎ ಸರಕಾರ ಅಧಿಕಾರಕ್ಕೆ ಬಂದಾಗ, ಮತ್ತೊಮ್ಮೆ ಎಡಪಕ್ಷಗಳ ಆಗ್ರಹದ ಮೇರೆಗೆ ಅದರ ಸಮಾನ ಕನಿಷ್ಟ ಕಾರ್ಯಕ್ರಮ(ಸಿಎಂಪಿ)ದಲ್ಲಿ 'ಲೋಕಪಾಲ ಮಸೂದೆಯನ್ನು ಕಾನೂನಾಗಿ ಮಾಡಲಾಗುತ್ತದೆ' ಎಂಬ ಒಂದು ಭರವಸೆಯನ್ನು ಸೇರಿಸಲಾಯಿತು. ನಂತರ, ಒಂದು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು. ಅದನ್ನು ಸ್ಥಾಯೀ ಸಮಿತಿಗೆ ಕಳಿಸಲಾಯಿತು. ಅದರ ಶಿಫಾರಸುಗಳೊಂದಿಗೆ ಅದೀಗ ಸಂಸತ್ತಿನ ಮುಂದಿದೆ. ಆದರೆ, ಇದು ಕೂಡ ತೃಪ್ತಿಕರವಾಗಿಲ್ಲ. ಅದರ ವ್ಯಾಪ್ತಿಯನ್ನು ಪರಿಣಾಮಕಾರಿಯಾಗಿಸಲು ಮತ್ತು ಅರ್ಥಪೂರ್ಣಗೊಳಿಸಲು ಸಾಕಷ್ಟು ಮಟ್ಟಿಗೆ ಬದಲಿಸುವ ಅಗತ್ಯವಿದೆ. ಈ ನಡುವೆ ಕೆಲವು ಸಾಮಾಜಿಕ ಕಾರ್ಯಕರ್ತರು ಸೇರಿ ಒಂದು ಜನ ಲೋಕಪಾಲ ಮಸೂದೆಯನ್ನು ತಯಾರಿಸಿದ್ದಾರೆ. ಅಣ್ಣಾ ಹಜಾರೆಯವರ ಉಪವಾಸ ಮುಷ್ಕರದ ಆಧಾರ ಇದು. ಈಗ ಪ್ರಕಟಿಸಿರುವ ಕರಡು ತಯಾರಿಸುವ ಸಮಿತಿ ಇವೆರಡೂ ಕರಡುಗಳನ್ನು ಗಮನಕ್ಕೆ ತಗೊಳ್ಳುವುದು ಖಂಡಿತ. ಆದರೆ ಈ ಬೆಳವಣಿಗೆಗಳ ಸಂದರ್ಭದಲ್ಲಿ ಎದ್ದಿರುವ ಕನಿಷ್ಟ ಎರಡು ಪ್ರಶ್ನೆಗಳನ್ನು ಪರಿಶೀಲಿಸುವ ಅಗತ್ಯವಿದೆ.

ಅಣ್ಣಾ ಹಜಾರೆಯವರನ್ನು, ನೀವು ಸಂಸತ್ತು ಪ್ರವೇಶಿಸಿ ಈ ಕಾನೂನನ್ನು ತಯಾರಿಸುವ ಪ್ರಕ್ರಿಯೆಯ



ಭಾಗವಾಗಬಾರದೇಕೆ ಎಂದು ಪ್ರಶ್ನಿಸಿದಾಗ ಅವರ ಉತ್ತರ ವಿಲಕ್ಷಣವಾಗಿತ್ತು. ತಾನು ಎಂದೂ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ, ಏಕೆಂದರೆ ಗೆಲ್ಲುವುದಿಲ್ಲ, ಠೇವಣಿಯನ್ನೂ ಕಳಕೊಳ್ಳಬಹುದು ಎಂದು ಅವರು ಹೇಳಿದರು; 'ಸಾಮಾನ್ಯ ಮತದಾರರಿಗೆ ಜಾಗೃತಿ ಇಲ್ಲ, ಅವರು ಅಭ್ಯರ್ಥಿ ಕೊಡುವ 100ರೂ.ಗೋ, ಒಂದು ಬಾಟಲಿ ಸೇಂದಿಯ, ಅಥವ ಸೀರೆಯ ಪ್ರಭಾವಕ್ಕೋ ಒಳಗಾಗಿ ತಮ್ಮ ಮತ ಚಲಾಯಿಸುತ್ತಾರೆ. ಅವರಿಗೆ ತಮ್ಮ ಮತದ ಬೆಲೆ ಗೊತ್ತಿಲ್ಲ' ಎಂಬುದು ಇದಕ್ಕೆ ಅವರು ಕೊಡುವ ಕಾರಣ. ಮತದಾರರ ಬಗ್ಗೆ ಇಂತಹ ತಿರಸ್ಕಾರ, ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಇಂತಹ ಅಸಡ್ಡೆ ನಿಜಕ್ಕೂ ಕಳವಳಕಾರಿ.

**ಮತದಾರನನ್ನು ಹೀಗಳೆಯಬೇಡಿ**

ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವ ಸ್ವರೂಪಕ್ಕೆ ಸವಾಲು ಬಂದಾಗಲೆಲ್ಲ ಆಧುನಿಕ ಭಾರತದ ಕಣ್ಣೋಟವನ್ನು ಎತ್ತಿ ಹಿಡಿದದ್ದು, ಕಾಪಾಡಿದ್ದು ಈ ಮತದಾರನೇ. ಇದೇ ಈ ಮತದಾರ, ಇಂದಿರಾ ಗಾಂಧಿಯವರ ತುರ್ತು ಪರಿಸ್ಥಿತಿ ಆಳ್ವಿಕೆಯನ್ನು ಸೋಲಿಸಿ, ಪ್ರಜಾಪ್ರಭುತ್ವವನ್ನು ಎಂತಹ ಚೈತನ್ಯದಿಂದ ಮರುಸ್ಥಾಪಿಸಿದನೆಂದರೆ, ಅದೀಗ ಭಾರತೀಯ ವಾಸ್ತವತೆಯ ಅಭಿನ್ನ ಅಂಶವಾಗಿ ಬಿಟ್ಟಿದೆ. ಈ ಪ್ರಜಾಪ್ರಭುತ್ವವೇ ತಾನೇ, ಇಂತಹ ಸಾಮಾಜಿಕ ಸಕ್ರಿಯತೆಗೆ, ಈ ರೀತಿಯ ಉಪವಾಸ ಮುಷ್ಕರಗಳಿಗೆ ಅವಕಾಶ ಒದಗಿಸಿರುವುದು?

ಜಾತ್ಯಾತೀತತೆ ಬೆದರಿಕೆಗೆ ಒಳಗಾಗಿರುವಂತೆ ಕಂಡಾಗ, ಇದೇ ಮತದಾರ ಎಲ್ಲರನ್ನೂ ಚಕಿತಗೊಳಿಸಿದ, 2004ರ ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಯನ್ನು ಸೋಲಿಸಿ, 'ಹೊಳೆಯುವ ಭಾರತ'ದ ಆಡಂಬರಪೂರ್ಣ ಪರಿಕಲ್ಪನೆಯನ್ನು ಧೂಳೀಪಟ ಮಾಡಿದ. ಈ ಮತದಾರ ಇದ್ದಿರದಿದ್ದರೆ, ಭಾರತ ನಾವು ಈಗ ಕಾಣುವ ಭಾರತವಾಗಿರುತ್ತಿರಲಿಲ್ಲ, ಈಗ ಕಾಣುವ ಸ್ಪಂದನಶೀಲತೆ ಎಂದೋ ಕಾಣೆಯಾಗಿರುತ್ತಿತ್ತು. ಈ ಸ್ಪಂದನಶೀಲತೆ ಮತ್ತು ಇತರ ಕೆಲವು ಗುಣಗಳಿಂದಾಗಿಯೇ ಮೋಂಬತ್ತಿ ಬೆಳಕಿನ ಪ್ರತಿಭಟನೆಗಳು, ಉಪವಾಸ ಮುಷ್ಕರಗಳಿಗೆ ಅವಕಾಶವಾಗಿರುವುದು.

**'ನಾವು, ಭಾರತದ ಜನತೆ'**

ಸಂವಿಧಾನ ಸಭೆಯಲ್ಲಿ ಒಂದು ದೀರ್ಘಾವಧಿಯ, ಅತ್ಯಂತ ಮಾಹಿತಿಪೂರ್ಣ ಚರ್ಚೆಯ ನಂತರ ಆಧುನಿಕ ಭಾರತದ ಸಂಸ್ಥಾಪಕರು ಭಾರತದ ಆಡಳಿತ ಸಾರ್ವತ್ರಿಕ ವಯಸ್ಕ ಮತದಾನವನ್ನು ಆಧರಿಸಿರುತ್ತದೆ ಎಂದು ನಿರ್ಧರಿಸಿದರು. ಆಮೂಲಕ ಅವರು, ಡಾ. ಅಂಬೇಡ್ಕರ್ ಹೇಳಿದಂತೆ, ಒಬ್ಬ ವ್ಯಕ್ತಿ ಒಂದು ಮತ, ಒಂದು ಮತ ಒಂದು ಮೌಲ್ಯ ಎಂಬ ಸೂತ್ರವನ್ನು ಸೃಷ್ಟಿಸಿದರು. ಜನತೆಯ ಇಚ್ಛೆಯೇ ಕೇಂದ್ರ ಬಿಂದು ಎಂಬುದನ್ನು ಸಂವಿಧಾನ ನಿರೂಪಿಸಿತು. ಸಂವಿಧಾನದ ಪೀಠಿಕೆ 'ನಾವು, ಭಾರತದ ಜನತೆ, ಈ ಸಂವಿಧಾನವನ್ನು ಅಂಗೀಕರಿಸುತ್ತೇವೆ, ಶಾಸನವಾಗಿಸುತ್ತೇವೆ ಮತ್ತು ನಮಗೆ ಕೊಟ್ಟುಕೊಳ್ಳುತ್ತೇವೆ' ಎಂದು ಸ್ಫುಟವಾದ ಮಾತುಗಳಲ್ಲಿ ಹೇಳುತ್ತದೆ. ನಮ್ಮ ಸಂವಿಧಾನದಲ್ಲಿ ಜನತೆ ಸಾರ್ವಭೌಮ, ಜನತೆಯೇ ಪ್ರಥಮ ಎಂಬುದು ಶಾಶ್ವತ ಸಂದೇಶ. ಈ ಪ್ರಥಮ ಪ್ರಾಶಸ್ತ?ೃ ಇತರೆಲ್ಲ ಲಕ್ಷಣಗಳನ್ನು- ಸಂಪತ್ತು, ಶಿಕ್ಷಣ, ಜಾತಿ, ಲಿಂಗ ಇತ್ಯಾದಿ ಇತ್ಯಾದಿಗಳನ್ನು ಬದಿಗೊತ್ತುತ್ತದೆ. ಇದರ ಬಗ್ಗೆ ತಿರಸ್ಕಾರ, ಅಸಡ್ಡೆ ಸಂವಿಧಾನಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತದೆ. ಇದಕ್ಕೆ ಅವಕಾಶ ಕೊಡಲಾಗದು.

ಇನ್ನೊಂದು ಕಡೆ, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿಗಳು ಅಷ್ಟೇ ವಿಲಕ್ಷಣವಾಗಿ ಅಭಿವೃದ್ಧಿ ಮತ್ತು ಲೋಕಪಾಲ ಮಸೂದೆ ಪರಸ್ಪರ ಎದುರಾಳಿಗಳು ಎಂಬಂತೆ ಟಿಪ್ಪಣಿ ಮಾಡಿದ್ದಾರೆ. 'ಒಂದು ಬಡ ಮಗುವಿಗೆ ಶಿಕ್ಷಣದ ಯಾವುದೇ ಸಾಧನಗಳಿಲ್ಲದಿದ್ದರೆ, ಆಗ ಲೋಕಪಾಲ ಮಸೂದೆ ಏನು ಮಾಡಬಲ್ಲದು'?-ಎಂದಿದ್ದಾರೆ. ಅವರು ಗಮನಿಸಬೇಕಾದ್ದು ಇದನ್ನೇ.

ಉದಾಹರಣೆಗೆ, 2ಜಿ ತರಂಗಾಂತರ ಹಗರಣವನ್ನು ನೋಡಿ. ಸಿಎಜಿ ಅಂದಾಜು ಮಾಡಿದ 1.76ಲಕ್ಷ ಕೋಟಿ ರೂ.ಗಳ ನಷ್ಟವನ್ನು ವಸೂಲಿ ಮಾಡಿದ್ದರೆ, ನಮ್ಮ ದೇಶದ 6ರಿಂದ 14 ವರ್ಷ ವಯಸ್ಸಿನ ಪ್ರತಿಯೊಂದು ಮಗು ಶಾಲೆಯಲ್ಲಿರುವಂತೆ ಮಾಡಲು ಸಾಧ್ಯವಿರುವ ಮೂಲರಚನೆಯನ್ನು ನಿರ್ಮಿಸಬಹುದಿತ್ತು. ಸಂಸತ್ತು ಅಂಗೀಕರಿಸಿದ ಶಿಕ್ಷಣದ ಹಕ್ಕಿನ ಕಾನೂನಿನ ಉದ್ದೇಶ ಇದೇ ತಾನೇ? ಈ ಕಾನೂನು ಎರಡು ವರ್ಷಗಳಿಂದ ಕಾಗದದ ಮೇಲೆಯೇ ಉಳಿದಿದೆ. ಏಕೆಂದರೆ ಕೇಂದ್ರ ಸರಕಾರವೂ, ರಾಜ್ಯ ಸರಕಾರಗಳೂ ಸಂಪನ್ಮೂಲಗಳಿಲ್ಲ ಎಂದು ಕೈಚೆಲ್ಲಿ ಕೂತಿವೆ.

**ಮಂತ್ರಿವರ್ಯರೇ, ಗಮನಿಸಿ**

*ಪುಟ 10 ಕ್ಕೆ*

### ಇದು ನಿಮಗೆ ಗೊತ್ತೇ?

ಲೋಕಪಾಲ ವ್ಯವಸ್ಥೆಯ ಪರಿಕಲ್ಪನೆ ಮೊದಲು ಬಂದದ್ದು 1969ರಲ್ಲಿ. ಆದರೆ ನಿರೀಕ್ಷಿತವಾಗಿಯೇ, ಮೊದಲು ತಯಾರಾದ ಲೋಕಪಾಲ ಮಸೂದೆ, ಬಹಳ ದುರ್ಬಲವಾಗಿದ್ದರೂ ಕೂಡ ನೆನೆಗುದಿಗ ಬಿತ್ತು. 1996ರಲ್ಲಿ ಸಂಯುಕ್ತ ರಂಗ ಸರಕಾರಕ್ಕೆ ಬೆಂಬಲ ನೀಡುವಾಗ ಎಡಪಕ್ಷಗಳು ಪರಿಣಾಮಕಾರಿ ಲೋಕಪಾಲ ಕಾನೂನು ತರುವ ಷ?ರತ್ತು ಹಾಕಿದ್ದವು. ನಂತರ ಮತ್ತೆ 2004ರಲ್ಲಿ ಎಡಪಕ್ಷಗಳ ಆಗ್ರಹದಿಂದಾಗಿಯೇ ಯುಪಿಎ ಯ 'ಸಮಾನ ಕನಿಷ್ಟ ಕಾರ್ಯಕ್ರಮ'ದಲ್ಲಿ ಲೋಕಪಾಲ ಕಾನೂನು ತರುವ ಭರವಸೆ ಸೇರಿತ್ತು. ಈ ನಡುವೆ ಆರು ವರ್ಷ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ್ದು ಈ ಬಗ್ಗೆ ದಿವ್ಯಮೌನ!

# ಕೇರಳದಲ್ಲಿ ಇಲ್ಲದ ಆಡಳಿತ ವಿರೋಧಿ ಅಲೆ ತಮಿಳುನಾಡಿನಲ್ಲಿ

## ತಮಿಳುನಾಡಿನಲ್ಲಿ ತೀವ್ರ ಆಡಳಿತ ವಿರೋಧಿ ಅಲೆ, ಕೇರಳದಲ್ಲಿ ಅಂತಹ ಆಡಳಿತ ವಿರೋಧಿ ಅಲೆ ಇಲ್ಲದ್ದನ್ನು ಕಂಡ ಕಾರಟರ ಲೇಖನ


**ಪ್ರಕಾಶ್ ಕಾರಟ್**

ಕೇರಳ ಮತ್ತು ತಮಿಳುನಾಡು ಜನತೆಯು ಏಪ್ರಿಲ್ 13ರಂದು ವಿಧಾನಸಭಾ ಚುನಾವಣೆಗಳಲ್ಲಿ ಮತ ಚಲಾಯಿಸಿದ್ದಾರೆ. ಇದರೊಂದಿಗೆ, ಪುದುಚೇರಿ ಕೇಂದ್ರಾಡಳಿತ ಪ್ರದೇಶದಲ್ಲಿಯೂ ಚುನಾವಣೆ ನಡೆದಿದೆ. ಕೇರಳ ಮತ್ತು ತಮಿಳುನಾಡುಗಳಲ್ಲಿ ಬಿರುಸಿನ ಚುನಾವಣಾ ಪ್ರಚಾರೋಂದೋಲನವು ಎರಡು ವಾರಗಳ ಕಿರು ಕಾಲಾವಧಿಯಲ್ಲಿ ಜರುಗಿದೆ. ಈ ಅವಧಿಯಲ್ಲಿ ನಾನು ಇವೆರಡೂ ರಾಜ್ಯಗಳಲ್ಲಿ ಕೆಲವು ದಿನಗಳನ್ನು ಕಳೆದೆ. ಚುನಾವಣಾ ಆಂದೋಲನ ಮತ್ತು ವಿವಿಧ ಚುನಾವಣಾ ಮೈತ್ರಿಗಳ ಭವಿಷ್ಯ ಕುರಿತಂತೆ ಗಮನಿಸಿರುವ ಕೆಲವು ಅಂಶಗಳು ಇಂತಿವೆ.

**ಪ್ರಧಾನ ವಿಷಯುಗಳು**

ವಿಶೇಷವಾಗಿ ಅಖಿಲ ಭಾರತ ಮಟ್ಟಕ್ಕೆ ಸಂಬಂಧಿಸಿರುವಂತೆ ಎರಡೂ ರಾಜ್ಯಗಳಲ್ಲಿ ಪ್ರಚಾರ ಸಮಯದಲ್ಲಿ ಬೆಲೆಯೇರಿಕೆ ಮತ್ತು ಭ್ರಷ್ಟಾಚಾರ ವಿಷಯಗಳು ಎರಡು ಪ್ರಧಾನ ವಿಷಯಗಳಾಗಿ ಚರ್ಚಿಸಲ್ಪಟ್ಟವು. ಎಲ್ಲೆಡೆ, ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡಲ್ಲೂ, ಇವೆರಡು ವಿಷಯಗಳ ಕುರಿತು ಮತ್ತು ತಮ್ಮ ಜೀವನದ ಮೇಲೆ ಅವುಗಳ ಪರಿಣಾಮದ ಕುರಿತು ಜನತೆಯು ಆತಂಕಗೊಂಡಿದ್ದಾರೆ. ಕೇರಳದಲ್ಲಿ, ಬೆಲೆಯೇರಿಕೆ ವಿಷಯವು ಪಡಿತರ ವಿತರಣಾ ವ್ಯವಸ್ಥೆಯೊಂದಿಗೆ ಸಂಬಂಧ ಹೊಂದಿದೆ. ಎಲ್‌ಡಿಎಫ್ ಸರ್ಕಾರವು ಕಿಲೋಗೆ ರೂ 2 ದರದ ಅಕ್ಕಿಯನ್ನು ಬಿಪಿಎಲ್ ಹೊರಗಿರುವ ಎಲ್ಲ ಅರ್ಹ ಕುಟುಂಬಗಳಿಗೆ ವಿಸ್ತರಿಸಿತ್ತು. ರಾಜ್ಯ ಸರ್ಕಾರವು ಆಹಾರ ಮತ್ತು ಅತ್ಯವಶ್ಯ ಸರಕುಗಳನ್ನು ಕನಿಷ್ಟ ದರದಲ್ಲಿ ನ್ಯಾಯಬೆಲೆ ಅಂಗಡಿಗಳು, ಮಾವೆಳಿ ಅಂಗಡಿಗಳು ಮತ್ತು ಸಹಕಾರಿಗಳ ಜಾಲದ ಮೂಲಕ ಲಭ್ಯವಿರುವಂತೆ ಮಾಡಿದ್ದನ್ನು ಜನತೆಯು ಅದು ಬೆಲೆಯೇರಿಕೆ ವಿರುದ್ಧ ಪರಿಹಾರವೆಂದು ಶ್ಲಾಘಿಸಿದ್ದಾರೆ. ತದ್ವಿರುದ್ಧವಾಗಿ, ಬೆಲೆಯೇರಿಕೆ ನಿಯಂತ್ರಿಸುವಲ್ಲಿ ಕಾಂಗ್ರೆಸ್-ನೇತೃತ್ವದ ಸರ್ಕಾರದ ದಾಖಲೆಯು ಬಹಳ ಕೆಟ್ಟದಾಗಿದೆ.

ಉನ್ನತ ಮಟ್ಟದ ಭ್ರಷ್ಟಾಚಾರದ ವಿಷಯವು ಕೇರಳದಲ್ಲಿ ವಿಶೇಷ ಧ್ವನಿ ಮೊಳಗಿಸಿದೆ. ಯುಡಿಎಫ್ ಸರ್ಕಾರದ ಮಾಜಿ ಮಂತ್ರಿ ಆರ್ ಬಾಲಕೃಷ್ಣ ಪಿಳ್ಳೈ ಯವರನ್ನು ಹೈಕೋರ್ಟ್ ಖುಲಾಸೆ ಮಾಡಿದ್ದನ್ನು ಇತ್ತೀಚೆಗೆ ಸುಪ್ರೀಂ ಕೋರ್ಟ್ ಬದಿಗಿರಿಸಿ ಕೆಳಹಂತದ ಕೋರ್ಟಿನ ತೀರ್ಪನ್ನು ಎತ್ತಿಹಿಡಿದ ನಂತರ ಸೆರೆಮನೆಗೆ ಕಳುಹಿಸಲಾಗಿದೆ, ಅವರಿಗೆ ಭ್ರಷ್ಟಾಚಾರಕ್ಕಾಗಿ ಶಿಕ್ಷೆ ವಿಧಿಸಿರುವುದು ವಿರೋಧ ಪಕ್ಷದ ನಾಯಕ ವಿಎಸ್ ಅಚ್ಯುತನಂದನ್ ರವರು ಸಲ್ಲಿಸಿದ್ದ ಅರ್ಜಿಯಿಂದಾಗಿ ಎಂಬ ಅಂಶ ಎಲ್‌ಡಿಎಫ್ ಸರ್ಕಾರವು ಭ್ರಷ್ಟಾಚಾರ ಕುರಿತು ತಳೆದಿರುವ ದೃಢತೆಯನ್ನು ತೋರಿಸುತ್ತದೆ. ಯುಪಿಎ ಆಳ್ವಿಕೆಯಡಿಯಲ್ಲಿ 2ಜಿ ತರಂಗಾಂತರ ಹಗರಣ ಮತ್ತು ಇತರೆ ಹಲವು ಭ್ರಷ್ಟಾಚಾರ ಪ್ರಕರಣಗಳು ಯುಪಿಎ ಸರ್ಕಾರವು ಜನತೆಯ ಕಣ್ಣಲ್ಲಿ ಅದೆಷ್ಟು ಅಧೋಗತಿಗಿಳಿದಿದೆ ಎಂಬ ಚಿತ್ರಣವನ್ನು ಬಿಚ್ಚಿಟ್ಟಿದೆ. ಇಂಥಹ ಪರಿಸ್ಥಿತಿಯಲ್ಲಿ, ಎಲ್‌ಡಿಎಫ್ ಸರ್ಕಾರವು ತನ್ನ ಆಳ್ವಿಕೆಯಲ್ಲಿ ಭ್ರಷ್ಟಾಚಾರದಲ್ಲಿ ಮುಳುಗಿದ್ದು ವಿವಿಧ ಹಗರಣಗಳನ್ನು ಬೆಳೆಸಿದೆ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಚುನಾವಣಾ ಪ್ರಚಾರದಲ್ಲಿ ಹೇಳಿರುವುದು ಸತ್ಯಕ್ಕೆ ದೂರವಾದುದಷ್ಟೆ ಅಲ್ಲ, ಅದನ್ನು ಕಾಂಗ್ರೆಸ್ ಬೆಂಬಲಿಗರೇ ನಂಬುತ್ತಿಲ್ಲ. ಯುಡಿಎಫ್ ಮತ್ತೆ ಅಧಿಕಾರಕ್ಕೆ ತರುವುದೆಂದರೆ ಭ್ರಷ್ಟಾಚಾರದ ಹಳೆಯ ದಿನಗಳನ್ನು ಮತ್ತೆ ತರುವುದು ಮತ್ತು ಕೇಂದ್ರದಲ್ಲಿ ಯುಪಿಎ ಆಳ್ವಿಕೆಯಡಿಯಲ್ಲಿ



ಜರುಗುತ್ತಿರುವುದನ್ನು ಆಮದು ಮಾಡಿಕೊಳ್ಳುವುದು ಎಂದೇ ಅರ್ಥ ಎಂಬ ಅಂಶವನ್ನು ಎಲ್‌ಡಿಎಫ್ ಪ್ರಚಾರವು ಪರಿಣಾಮಕಾರಿಯಾಗಿ ಕೈಗೊಂಡಿತು.

ಉನ್ನತ ಮಟ್ಟದ ಭ್ರಷ್ಟಾಚಾರ ವಿರುದ್ದ ಬಹುದೊಡ್ಡ ರೇಜಿಗೆ ಮತ್ತು ಭ್ರಷ್ಟಾಚಾರ-ಮುಕ್ತ ಸರ್ಕಾರಕ್ಕಾಗಿ ಬಲವಾದ ಅಭಿಪ್ರಾಯ ರೂಪುಗೊಂಡಿರುವುದು ಎಲ್‌ಡಿಎಫ್ ಪರವಾಗಿ ಖಂಡಿತವಾಗಿ ಕೆಲಸ ಮಾಡಿದೆ. ಮುಖ್ಯಮಂತ್ರಿ ವಿಎಸ್ ಅಚ್ಯುತನಂದನ್ ಸಭೆಗಳಿಗೆ ಹಾಜರಾಗುತ್ತಿದ್ದ ದೊಡ್ಡ ಜನಸಂದಣಿಯಿಂದ ಇದನ್ನು ಗುರುತಿಸಬಹುದು.

ಎಡರಂಗದ ಕುರಿತು ವಿರುದ್ಧಾಭಿಪಾಯ ಹೊಂದಿರುವ ಮಾಧ್ಯಮ ಕೂಡ ಗಮನಿಸಿರುವಂತೆ ಮಹತ್ವದ ಅಂಶವೊಂದನ್ನು ಚುನಾವಣಾ ಆಂದೋಲನ ತೋರಿಸಿಕೊಟ್ಟಿದೆ. ಎಲ್‌ಡಿಎಫ್ ಸರ್ಕಾರದ ವಿರುದ್ಧ ಯಾವುದೇ ಕಾಣಬಹುದಾದ ಆಡಳಿತ-ವಿರೋಧಿ ಅಲೆಯೇನೂ ಇರಲಿಲ್ಲ. ಈ ಸಂಬಂಧವಾಗಿ ಅಭಿವೃದ್ಧಿ ಪ್ರಶ್ನೆಯನ್ನು ಮೂರನೇ ಪ್ರಧಾನ ವಿಷಯವಾಗಿ ಎತ್ತಲಾಗಿದೆ. ಕಾಂಗ್ರೆಸ್ ನಾಯಕತ್ವ ಮತ್ತು ಯುಡಿಎಫ್ ಅಭಿವೃದ್ಧಿ ಅಥವಾ ಅದರ ಹಿನ್ನಡೆಯನ್ನು ಪ್ರಚಾರದ ಪ್ರಧಾನ ವಿಷಯವಾಗಿಸಿಕೊಂಡಿದ್ದವು. ಪ್ರಧಾನಮಂತ್ರಿ ಮತ್ತು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಇಬ್ಬರೂ ಎಲ್‌ಡಿಎಫ್ ಸರ್ಕಾರದ ವೈಫಲ್ಯಗಳ ಕುರಿತು ಆರೋಪಿಸಿ ರಾಜ್ಯದ ಅಭಿವೃದ್ಧಿಗಾಗಿ ಮತಯಾಚಿಸಿದರು.

**ಎಲ್‌ಡಿಎಫ್ ದಾಖಲೆ**

ಅವರು ಕೇಂದ್ರದ ನಿಧಿ ಮತ್ತು ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ರಾಜ್ಯ ಸರ್ಕಾರವು ವಿಫಲವಾಗಿದೆ ಎಂದು ಆರೋಪಿಸಿದರು. ಅವರು ಕೇರಳವು ಕಳೆದ ಐದು ವರ್ಷಗಳಲ್ಲಿ ಬಂಡವಾಳ ಆಕರ್ಷಿಸುವಲ್ಲಿ ಮತ್ತು ಅಭಿವೃದ್ಧಿ ಖಾತರಿ ಪಡಿಸಿಕೊಳ್ಳುವಲ್ಲಿ ಹಿಂದುಳಿದಿದೆ ಎಂದು ಹೇಳಿಕೊಂಡರು. ಇದಕ್ಕೆ ಎಡರಂಗದ ಹಿಮ್ಮುಖವಾಗಿ ನೋಡುವ ಸಿದ್ಧಾಂತವೇ ಕಾರಣ ಎಂದೂ ಹೇಳಿದರು. ಮನಮೋಹನ್ ಸಿಂಗ್ ಪ್ರಕಾರ: 'ಅಭಿವೃದ್ಧಿಯ ಮೂಲಭೂತ ಅಂಶಗಳು ಬದಲಾಗಿವೆ ಎಂಬುದನ್ನು ಅವರು ಗುರುತಿಸುವಲ್ಲಿ ವಿಫಲವಾಗಿದ್ದಾರೆ ಮತ್ತು ಸಾಮಾನ್ಯ ಜನರ ಅವಶ್ಯಗಳಿಗೆ ಸಂಬಂಧವಿರದ ಯೋಜನೆಗಳನ್ನು ಅವರು ಅನುಸರಿಸುತ್ತಿದ್ದಾರೆ' ಎಂದರು. ಇಲ್ಲಿಯೇ ಇರುವುದು ಅತಿ ಪ್ರಧಾನ ಅಂಶ. ಈ ಚುನಾವಣೆಗಳು ಅಭಿವೃದ್ಧಿಯ ಕುರಿತಾಗಿ ಎರಡು ವಿಭಿನ್ನ ಧೋರಣೆಗಳನ್ನು ಕಂಡವು. ಕಾಂಗ್ರೆಸ್ ಮತ್ತು ಯುಪಿಎ ಸರ್ಕಾರಕ್ಕೆ 'ಅಭಿವೃದ್ಧಿಯ ಮೂಲಭೂತಗಳು ಬದಲಾಗಿವೆ'. ಅಂದರೆ ನವ-ಉದಾರವಾದಿ, ಮಾರುಕಟ್ಟೆ ಚಾಲಿತ ಯೋಜನೆಗಳನ್ನು ಅನುಸರಿಸುವುದು ಅವಶ್ಯವಾಗಿದೆ. ಕೇಂದ್ರದ ಜನವಿರೋಧಿ ಕಾರ್ಷಿಕ ಯೋಜನೆಗಳಿಂದಾಗಿ ಕೇರಳದಲ್ಲಿ ರೈತರ ಸಂಕಷ್ಟ ಮತ್ತು ಆತ್ಮಹತ್ಯೆಗಳು ಜರುಗಿವೆ. ಇಂಥಹ ನವ-ಉದಾರವಾದಿ ಧೋರಣೆಗೆ ಕೇರಳ ಸರ್ಕಾರ ಅನುಸರಿಸಿದ - ಸಾರ್ವಜನಿಕ ಉದ್ದಿಮೆಗಳ ಪುನರುಜ್ಜೀವನ ಮತ್ತು ಅವುಗಳನ್ನು ಲಾಭಗೊಳಿಸುವುದು - ಹಿಡಿಸುವುದಿಲ್ಲ. ದುಡಿಯುವ ಜನತೆಯ ಎಲ್ಲ ವಿಭಾಗಗಳಿಗೆ ವಿಸ್ತರಿಸಿರುವ ವಿವಿಧ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳು, ಪಡಿತರ ವಿತರಣೆ ವ್ಯವಸ್ಥೆಯ ಸಾರ್ವತ್ರೀಕರಣಕ್ಕಾಗಿ ಪ್ರಯತ್ನ, ರೈತರ ಸಾಲವನ್ನು ನಿರ್ಮೂಲಗೊಳಿಸಿದ್ದು, ಕನಿಷ್ಟ ಕೂಲಿ ಖಾತರಿ, ಪಿಂಚಣಿ ಮತ್ತು ಇತರೆ ಸಾಮಾಜಿಕ ಭದ್ರತಾ ಲಾಭಗಳಂಥಹ ಕಾರ್ಯಕ್ರಮಗಳನ್ನೇ ನಿಖರವಾಗಿ ಪ್ರಧಾನಮಂತ್ರಿಗಳು 'ಸಾಮಾನ್ಯ ಜನತೆಯ ಅವಶ್ಯಕತೆಗಳಿಗೆ ಸಂಬಂಧವಿರದವು' ಎಂದು ಕಿರುಚುತ್ತಿರುವುದು ಆದರೆ ಇವು ಯಾವುದೇ ಆಡಳಿತ-ವಿರೋಧಿ ಪ್ರವೃತ್ತಿಗಳಿರದಂತೆ ಮಾಡಿವೆ.

ಎಲ್‌ಡಿಎಫ್ ಪ್ರಣಾಳಿಕೆಯು ಅಭಿವೃದ್ಧಿ ಪಥವೊಂದನ್ನು ಹಾಕಿಕೊಂಡಿದ್ದು ಅದು ಕೇಂದ್ರದ ಯುಪಿಎ ಸರ್ಕಾರದ ನವ-ಉದಾರವಾದಿ ಧೋರಣೆಗೆ ಸವಾಲು ಹಾಕುತ್ತದೆ. ಇದನ್ನೇ ಹಲವು ಟೀಕಾಕಾರರು ಧಾಳಿ ಮಾಡಿ ಟೀಕಿಸುತ್ತಿರುವುದು. ಕೇರಳವು ಚಿಮಚಾ ಬಂಡವಾಳಶಾಹಿ ಪಥವನ್ನು ಅನುಸರಿಸಬೇಕೆಂದು, ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಮಾಡಲು ಅವಕಾಶ ನೀಡುವುದು ಮತ್ತು ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ನಡೆಸುತ್ತಿರುವ ರಾಜ್ಯಗಳಲ್ಲಿ ಹೆಸರಾಗಿರುವ ದೊಡ್ಡ ವ್ಯಾಪಾರಿ-ರಾಜಕಾರಣಿಗಳು ಮತ್ತು ಅಧಿಕಾರಿಗಳ ನಡುವೆ ಭ್ರಷ್ಟ ಶಾಮೀಲಾತಿಯನ್ನು ಉತ್ತೇಜಿಸುವ ಪಥವನ್ನು ಕೇರಳ ಅನುಸರಿಸಬೇಕೆಂದು ಅವರು ಬಯಸುತ್ತಾರೆ.

ಎಲ್‌ಡಿಎಫ್ ಸರ್ಕಾರದ ಕಾರ್ಯಕ್ಷಮತೆಯ ಬಗ್ಗೆ ಜನತೆಗೆ ಯಾವುದೇ ಗಂಭೀರ ಅತೃಪ್ತಿ ಇರದಿರುವುದರಿಂದ ಕಾಂಗ್ರೆಸ್-ನಾಯಕತ್ವದ ಯುಡಿಎಫ್ ಜಾತಿ ಮತ್ತು ಕೋಮುವಾದಿ ಸಂಘಟನೆಗಳನ್ನು ಅಣಿಗೊಳಿಸಿ ಬೆಂಬಲ ಪಡೆಯುತ್ತಿದೆ. ಕೇರಳ ಕೂಡ ಹಣದ ಹರಿವು ಮತ್ತು ಮಧ್ಯಪಾನ ಸರಬರಾಜನ್ನು ಹಿಂದೆಂದೂ ನೋಡಿರದ ಪ್ರಮಾಣದಲ್ಲಿ ಕಾಣುತ್ತಿದೆ. ಪ್ರಚಾರದ ಅಂತ್ಯದ ಹೊತ್ತಿಗೆ ತಯಾರಾದ ಅಭಿಪ್ರಾಯ ಮತದಾನಗಳು ಮತ್ತು ವಿರೋಧಿ ಮಾಧ್ಯಮ ಬಿಂಬಗಳನ್ನು ಎಲ್‌ಡಿಎಫ್ ತನ್ನ ಯಶಸ್ವಿ ಪ್ರಚಾರಾಂದೋಲನದ ಮೂಲಕ ಪುಡಿಗಟ್ಟಿದೆ.

ತಮಿಳುನಾಡಿನಲ್ಲೂ ಕೂಡ ಬೆಲೆ ಏರಿಕೆ ಮತ್ತು ಭ್ರಷ್ಟಾಚಾರ ಎರಡು ಪ್ರಮುಖ ವಿಷಯಗಳಾಗಿವೆ. ಇಲ್ಲಿ ಬೆಲೆ ಏರಿಕೆಗಿಂತಲೂ ಭ್ರಷ್ಟಾಚಾರವು ಮಹತ್ವದ ವಿಷಯವಾಗಿದೆ. ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳನ್ನು ಹೊಂದಿರುವ ಆಡಳಿತಾರೂಢ ಡಿಎಂಕೆ ಪಕ್ಷದ ಮಂತ್ರಿಗಳೇ ಭ್ರಷ್ಟಾಚಾರದಲ್ಲಿ ಸಿಲುಕಿದ್ದಾರೆ. ಸ್ವತಂತ್ರ ಭಾರತದಲ್ಲಿ ಹಿಂದೆಂದೂ ಕಂಡುಬರದಿದ್ದ ಅತಿ ದೊಡ್ಡದಾದ 2 ಜಿ ಸ್ಪೆಕ್ಟ್ರಂ ಹಗರಣದ ಕೇಂದ್ರ ವ್ಯಕ್ತಿ ಡಿಎಂಕೆ ಪಕ್ಷದ ಮಾಜಿ ಸಚಿವ ಎ.ರಾಜಾ ಆಗಿದ್ದಾರೆ. ಅದೂ ಅಲ್ಲದೇ ಈ ಪಕ್ಷವು ಸ್ವಜನಪಕ್ಷಪಾತದಲ್ಲಿ ತೊಡಗಿದೆ, ಮುಖ್ಯಮಂತ್ರಿಗಳ ಕುಟುಂಬದವರ ಕೈಯಲ್ಲಿ ವಾಣಿಜ್ಯ ವ್ಯವಹಾರಗಳಾದ ಮತ್ತು ಚಿತ್ರೋದ್ಯಮದ, ದೂರದರ್ಶನ ವಾಹಿನಿಗಳು, ಕೇಬಲ್ ನೆಟ್‌ವರ್ಕ್, ರಿಯಲ್ ಎಸ್ಟೇಟ್, ಹೋಟೆಲ್, ವಿಮಾನಯಾನವು ಕೇಂದ್ರೀಕರಣಗೊಂಡಿದೆ. ಎಐಡಿಎಂಕೆ ಪ್ರಧಾನ ಕಾರ್ಯದರ್ಶಿ ಜಯಜಲಿತಾ ಇವುಗಳನ್ನು ಚುನಾವಣಾ ಪ್ರಚಾರದ ಪ್ರಮುಖ ದಾಳಿಯಾಗಿ ಬಳಸಿಕೊಳ್ಳುತ್ತಿದ್ದು, ಜನರ ಪ್ರತಿಕ್ರಿಯೆಯೂ ಅಭೂತಪೂರ್ವವಾಗಿದೆ.

ಬೆಲೆ ಏರಿಕೆ, ವಿದ್ಯುತ್ ಕೊರತೆ, ಪೂರೈಕೆ ವ್ಯತ್ಯಯ, ಕರುಣಾನಿಧಿ ಅವರ ಕುಟುಂಬದೊಂದಿಗೆ ಸಂಪರ್ಕ ಹೊಂದಿರುವ ಗುತ್ತಿಗೆದಾರರ ಮಾಫಿಯಾ ಮುಂತಾದ ಸಮಸ್ಯೆಗಳನ್ನು ಡಿಎಂಕೆ ಸರ್ಕಾರದ ವಿರುದ್ಧ ಜನರು ತಿರುಗಿಬೀಳುವಂತೆ ಮಾಡಿದೆ. ಕಾಂಗ್ರೆಸ್ ಮತ್ತು ಡಿಎಂಕೆ ಮೈತ್ರಿಯಲ್ಲಿ ಆರಂಭದಲ್ಲಿ ಕಂಡುಬಂದ ಒಡಕು ಕೂಡ ಡಿಎಂಕೆಯ ಗೌರವವನ್ನು ಜನರ ಕಣ್ಣಲ್ಲಿ ಕಡಿಮೆ ಮಾಡಿದೆ.

ತಮಿಳುನಾಡು ರಾಜ್ಯವು ನವ ಉದಾರೀಕರಣ ರಾಜಕೀಯದ ತೀವ್ರ ಪರಿಣಾಮಗಳನ್ನು ಎದುರಿಸುತ್ತಿರುವ ದೇಶದ ಕೆಲವೇ ರಾಜ್ಯ ಗಳಲ್ಲಿ ಒಂದಾಗಿದೆ. ಚುನಾವಣೆಗಳಲ್ಲಿ ದೇಶದ ಯಾವುದೇ ರಾಜ್ಯಗಳಲ್ಲಿ ಕಂಡುಬರದಿದ್ದ ದೊಡ್ಡಮಟ್ಟದ ಅಕ್ರಮ ಹಣದ ಚಲಾವಣೆ ರಾಜ್ಯದಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಕಂಡು ಬರುತ್ತಿದೆ. ಕಳೆದ ಲೋಕಸಭೆ ಚುನಾವಣೆಯಲ್ಲಿ ಹಾಗೂ ತಿರುಮಂಗಲಂ ಉಪ ಚುನಾವಣೆಯಲ್ಲಿ ಹಣ ಹಂಚಿ ಮತಗಳನ್ನು ಕೊಂಡುಕೊಂಡಿದ್ದನ್ನು ಗಮನಿಸಿರುವ ಚುನಾವಣಾ ಆಯೋಗ ಈ ಸಲ ಹಣದ ಹರಿವನ್ನು ಅತ್ಯಂತ

ಪುಟ 13 ಕ್ಕೆ

# ಛಲ ಬೇಕು, ಬಲ ಬೇಕು

*ಪುಟ 3 ರಿಂದ*

ಹೋರಾಟಗಾರರ ನಿಲುವುಗಳ ಬಗ್ಗೆ ಪೂರ್ಣ ಅರಿವಿತ್ತು. ಎಂದಲ್ಲ. ದೇಶದಲ್ಲಿ, ರಾಜ್ಯದಲ್ಲಿ ಒಂದೆ ಬೆನ್ನಿಗೆ ಮತ್ತೊಂದರಂತೆ ಭಾರಿ ಭ್ರಷ್ಟಾಚಾರದ ಹಗರಣಗಳು ಹೊರಬರುತ್ತಲೇ ಇವೆ. ಖಚಿತ ದಾಖಲೆಗಳ ಸಮೇತ ಹೊರಬಂದರೂ ಅಧಿಕಾರದಲ್ಲಿರುವವರು ಅದನ್ನು ಕೇವಲ ಆರೋಪಗಳೆಂದು ಜರಿಯುತ್ತಾರೆ. ನಿಷ್ಪಕ್ಷ ತನಿಖೆಯಾಗಬೇಕೆಂಬ ಕನಿಷ್ಟ ಪ್ರಜಾಪ್ರಭುತ್ವ ನಿಷ್ಠತೆಯನ್ನು ಅವರ್‍ಯಾರೂ ತೋರುತ್ತಿಲ್ಲ. ಹಾಗಿದ್ದಲ್ಲಿ ಪ್ರಧಾನಿಯೇ, ಮುಖ್ಯಮಂತ್ರಿಯೋ, ಸಚಿವರೋ, ಪಕ್ಷಾಧ್ಯಕ್ಷರೋ ರಾಜೀನಾಮೆ ಕೊಟ್ಟು ಅಧಿಕಾರದ ದುರುಪಯೋಗ ತಡೆಯಬಹುದಿತ್ತು. ಜನರ ಮುಂದೆ ತಮ್ಮ ಒಡ್ಡಿಕೊಳ್ಳಲು ಅವರು ಸಿದ್ಧರಿಲ್ಲ. ಈ ಮನೋಭಾವದಲ್ಲಿ 1980ರ ದಶಕಕ್ಕೂ, ಈಗಿನ ಪರಿಸ್ಥಿತಿಗೂ ತುಂಬಾ ಬಿನ್ನವಿದೆ. ಸ್ವಾತಂತ್ರ್ಯಾ ನಂತರದ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿಗಳು ಕನಿಷ್ಟ ಸ್ವಲ್ಪ ಮಟ್ಟಿಗಾದರೂ ಸ್ವಾವಲಂಬನೆಯ ಸಾರ್ವಭೌಮತ್ವದ ಕನಿಷ್ಟ ಸಂಸದೀಯ ಚೌಕಟ್ಟಿನಲ್ಲಿ ಇದ್ದವು. ಇದರರ್ಥ ನೈತಿಕತೆಯ ಅಂಕುಶದಲ್ಲಿ ಎಲ್ಲವೂ, ಎಲ್ಲರೂ ಇದ್ದರೆಂದಲ್ಲ. ಆಗಲೂ ಅದು ಆಳುವ ವರ್ಗಗಳಾದ ಬಂಡವಾಳಶಾಹಿ, ಭೂಮಾಲಿಕ ವರ್ಗದ ಬೆಳವಣಿಗೆಯ ಹಿತಗಳಿಗನುಗುಣವಾಗಿ ತನ್ನ ಶಕ್ತಿ, ಸಂಪನ್ಮೂಲಗಳ ಕ್ರೋಢೀಕರಣದ ಅವಶ್ಯಕತೆಯಾಗಿ, ಈ ಮಿತಿಯೊಳಗೇ ಇದ್ದವು. ಇಂತಹುದೇ ಹಿತಗಳಿಗಾಗಿ ನಮ್ಮ ಆರ್ಥಿಕ ವ್ಯವಸ್ಥೆಯನ್ನು ವಿದೇಶಿ, ಸ್ವದೇಶಿ ಬಂಡವಾಳಕ್ಕೆ ಮುಕ್ತವಾಗಿ ತೆರೆದ ಖಾಸಗೀಕರಣ, ಉದಾರೀಕರಣ, ಜಾಗತೀಕರಣದ ಜಾರಿ ಭಾಗವಾಗಿ ನಮ್ಮ ಸಂಪನ್ಮೂಲವನ್ನು ಬಿಟ್ಟುಕೊಡುವ ಕಬಳಿಸುವ, ಖಾಸಗೀಕರಣದ ತೀವ್ರ ಪ್ರಶ್ನೆಯಂತೆ ಭ್ರಷ್ಟಾಚಾರವು ಹಲವು ಹೊಸ ಸ್ವರೂಪಗಳಲ್ಲಿ ಅಗಾಧವಾಗಿ ನಡೆದಿದೆ.

### ಛಲವಿಲ್ಲ, ಬಲವಿಲ್ಲ

ಇಂತಹ ಹಗರಣಗಳ ಸ್ಫೋಟ, ಆಳುವವರ ಭಂಡ ಸಮರ್ಥನೆಗಳು ಸಾರ್ವಜನಿಕರಲ್ಲಿ ಆಕ್ರೋಶ ಮೂಡಿಸಿದೆ. ಇದರಿಂದ ಕಳೆದುಹೋಗುತ್ತಿರುವ ಮಾನ ಉಳಿಸಿಕೊಳ್ಳಲು ಮನಮೋಹನ್‌ಸಿಂಗ್ ಸರ್ಕಾರ ಎಂಥದ್ದೋ ಒಂದು ಮಸೂದೆಯನ್ನು ಮಂಡಿಸಿದರೆ ಅಯ್ತೆಂದು ಹಳೆಯ ಲೋಕಪಾಲ್ ಮಸೂದೆಗೆ ಒಂದಿಷ್ಟು ಬಣ್ಣ ಬಳಿದು ಮಂಡಿಸಲು 2011 ರ ಜನವರಿಯಲ್ಲಿ ಆಂಟನಿ, ಸಿಬಲ್, ಪ್ರಣವ್ ಮುಖರ್ಜಿ, ಚಿದಂಬರಂ ಸಮಿತಿ ರಚಿಸಿ ಮರೆತುಹೋಗಿದ್ದರು. ಈಗಿನ ವಿಧಾನಸಭಾ ಚುನಾವಣೆಗಳಲ್ಲಿ ಭ್ರಷ್ಟಾಚಾರ ಒಂದು ಪ್ರಮುಖ ವಿಷಯವಾಗಿದ್ದರಿಂದ ತಾನು ಭ್ರಷ್ಟಾಚಾರ ವಿರೋಧಿಯೆಂದು ತೋರಿಸಲು ಕಾಂಗ್ರೆಸ್ ಸರ್ಕಾರ ಲೋಕಪಾಲ್ ಮಸೂದೆಯ ಬಗ್ಗೆ ಪ್ರಸ್ತಾಪಿಸಿದೆ. ಇದರಲ್ಲಿನ ಅಂಶಗಳನ್ನು ಗಮನಿಸಿದಾಗ ಈ ಸಂಸ್ಥೆ ಯಾವುದೇ ಬಲ ಹೊಂದಿರದೇ ಒಟ್ಟಾರೆ ಸರ್ಕಾರದ ಅಧೀನದಲ್ಲೇ, ಅದು ಕೆಲಸ ಮಾಡುವಂತೆ ಶಿಫಾರಸುಗಳಿವೆ. ಈ ಲೋಕಪಾಲ್ ಸಂಸ್ಥೆ ಸ್ವಯಂ ಆಗಿ ದೂರನ್ನು ದಾಖಲಿಸಿ ತನಿಖೆ ನಡೆಸುವಂತಿಲ್ಲ. ಎರಡೂ ಸಭೆಗಳ ಸಭಾಧ್ಯಕ್ಷರುಗಳು ದೂರು ನೀಡಿದರೆ ಮಾತ್ರ ತನಿಖೆ ನಡೆಸಬಹುದು. ಈ ಮಸೂದೆ ವಿದೇಶಾಂಗ ಮತ್ತು ರಕ್ಷಣಾ ಇಲಾಖೆಗಳನ್ನು ತನಿಖೆಯ ವ್ಯಾಪ್ತಿಯಿಂದ ಹೊರಗಿಟ್ಟಿತು. ವಿಚಿತ್ರವೆಂದರೆ ರಕ್ಷಣಾ ಇಲಾಖೆಯಂಥಲ್ಲಿ ಶಸ್ತ್ರ ಖರೀ ವ್ಯವಹಾರದಲ್ಲಿ ವಿಪರೀತ ಭ್ರಷ್ಟಚಾರ ನಡೆಯುತ್ತಿದೆ. ಇಂತಹ ಬ್ರಹ್ಮಾಂಡ ಭ್ರಷ್ಟತೆಯನ್ನು ಕಂಡರೂ ಒಂದು ಪ್ರಥಮ ಮಾಹಿತಿ ವರದಿ (ಎಫ್‌ಐಆರ್)ನ್ನು ದಾಖಲಿಸಲು ಅದರಲ್ಲಿ ಅವಕಾಶವಿಲ್ಲ. ಇಂತಹದ್ದಕ್ಕೆ ಸದಸ್ಯರು, ಅಧ್ಯಕ್ಷರಾಗುವಲ್ಲಿ ಅಂತಿಮ ತೀರ್ಮಾನ ಸರ್ಕಾರದ್ದೆ. ಇದು ಕಾಂಗ್ರೆಸ್ ನೇಮಕದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಪರಿ! ಆದ್ದರಿಂದಲೇ ಇದರ ಸುತ್ತ ವಿವರವಾದ ಚರ್ಚೆಯ ಅಗತ್ಯವಿತ್ತು. ಕರಡು ಮಸೂದೆಯನ್ನು ಮಂಡಿಸಿ ವಿರೋಧ ಪಕ್ಷಗಳನ್ನು ಒಳಗೊಂಡು ವಿಶಾಲವಾಗಿ ಚರ್ಚೆ ನಡೆಸಬೇಕಿತ್ತು. ಇದಕ್ಕೂ ಸರ್ಕಾರಕ್ಕೆ ಮನಸ್ಸಿರಲಿಲ್ಲ. ಇಂತಹ ಸನ್ನಿವೇಶದಲ್ಲಿ ಒಂದೆಡೆ ಎಡಪಕ್ಷಗಳ ಸತತ ಒತ್ತಡ, ಈ ಕ್ರಿಯಾಶೀಲತೆಯಿಂದ ಉಂಟಾದ ವಾತಾವರಣದಲ್ಲಿ ಸ್ವಯಂ ಸೇವಾ ಸಂಘಟನೆಗಳು ಹಜಾರೆಯವರ ನೇತೃತ್ವದಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದು.

### ಅ-ರಾಜಕೀಯದ ರಾಜಕೀಯ

ಜನಲೋಕಪಾಲ್ ಮಸೂದೆಗೆ ಆಗ್ರಹಿಸಿದ ಹಜಾರೆ ಬಳಗದ ಬೇಡಿಕೆಗಳಲ್ಲಿ ವಿಚಿತ್ರವಾದ, ಆದರೆ ತುಂಬಾ ಲೆಕ್ಕಾಚಾರದ ಕೆಲವು ಬೇಡಿಕೆಗಳೂ ಇದ್ದವು. ಅಂತಹದ್ದೊಂದು ಕರಡು ತಯಾರಿಸಲು ಸರ್ಕಾರದ ಪ್ರತಿನಿಧಿಗಳಲ್ಲದೇ 'ನಾಗರೀಕ ಸಮಾಜ' ವೂ ಅದರಲ್ಲಿ ಇರಬೇಕು ಎಂಬುದು ಒಂದು ಬೇಡಿಕೆ. ಹೌದು! ಇರಬೇಕು. ಆದರೆ ಈ ಸಮಾಜ ಯಾವುದು? ಅದು ಹಜಾರೆಯುವರನ್ನು ರಂಗ ವೇದಿಕೆಗೆ ತಂದ ಸ್ವಯಂಸೇವಾ ಸಂಸ್ಥೆಗಳಷ್ಟೇ ಎಂಬುದು ಅದರ ಕ್ರಮಗಳಿಂದ ತಿಳಿಯುತ್ತದೆ. ಸಂಸದೀಯ ಪ್ರಜಾಪ್ರಭುತ್ವದ ಈ ರಾಷ್ಟದಲ್ಲಿ ಆಳುವ ಪಕ್ಷಕ್ಕೆ ಎಷ್ಟು ಮಹತ್ವದ ಸ್ಥಾನವಿದೆಯೋ ವಿರೋಧ ಪಕ್ಷಗಳಿಗೂ ಅಷ್ಟೇ ಮುಖ್ಯ ಪಾತ್ರವನ್ನು ಸಂವಿಧಾನದಲ್ಲಿ ಕಲ್ಪಿಸಲಾಗಿದೆ. ಭಾರತದ ಜನತೆಯನ್ನು ಪ್ರತಿನಿಧಿಸುವ ರಾಜಕೀಯ ಪಕ್ಷಗಳಾಗಲೀ, ಅಸಂಖ್ಯಾತ ಜನಸಮೂಹದ ಬೆಂಬಲವಿರುವ ಇತರೆ ಸಾಮಾಜಿಕ, ಸಾಂಸ್ಕೃತಿಕ, ಸಾಮೂಹಿಕ ಸಂಘಟನೆಗಳಾಗಲೀ 'ನಾಗರೀಕ ಸಮಾಜದ ಪ್ರತಿನಿಧಿಗಳಲ್ಲವೇ? ಭ್ರಷ್ಟಾಚಾರದ ಹಗರಣಗಳ ವಿರುದ್ಧ ಸತತ ಹೋರಾಡುತ್ತಿರುವ ನಿಷ್ಕಳಂಕಿತ ಎಡಪಕ್ಷಗಳು ನಾಗರೀಕ ಸಮಾಜದಲ್ಲಿ ಬರುವುದಿಲ್ಲವೇ? ಹೀಗಿರಬೇಕಾದರೆ ಸ್ವದೇಶಿ, ವಿದೇಶಿ ಹಣಕಾಸು ನೆರವು ಪಡೆದು ಈ ರಾಜಕೀಯ ವ್ಯವಸ್ಥೆ ಹಾಗೂ ರಾಜಕೀಯ ಪಕ್ಷಗಳ ಬಗ್ಗೆ ಅಸಹ್ಯ ಭಾವನೆ ಇರಿಸಿಕೊಂಡು ಹಾಗೂ ಹೇಸಿಗೆ ಹುಟ್ಟಿಸುವ ಸಿನಿಕತನದ ಸೋಗಲಾಡಿತನವಿರುವುದೇ ತಮ್ಮ ನಾಗರೀಕ ಸಮಾಜದ, ಅರ್ಹತೆಯೆಂದೇ ಭಾವಿಸುತ್ತಿವೆ. ಆದ್ದರಿಂದಲೇ ಈ ಸ್ವಯಂಸೇವಾ ಸಂಸ್ಥೆಗಳಿಗೆ ನೆರವು ನೀಡುವ ಮಾಲೀಕರು ಕೊಟ್ಟಿರುವ ಕೆಲಸದಂತೆ ರಾಜಕೀಯದಿಂದ ದೂರ, ರಾಜಕೀಯರಹಿತತೆ ಎಂಬ ಅಧ:ಪತನದ ಸಿದ್ಧಾಂತದಡಿ ಜನರಿಗೆ ಮಂಕುಬೂದಿ ಎರಚುತ್ತವೆ. ಅಂತಿಮವಾಗಿ ಪ್ರಜಾಪ್ರಭುತ್ವದ ಬಗ್ಗೆ ಅಸಹ್ಯ ಹುಟ್ಟಿದಾಗ ಅದರ ಸ್ಥಾನದಲ್ಲಿ ಸರ್ವಾಧಿಕಾರವನ್ನು ಒಪ್ಪಿಕೊಳ್ಳುವ ಅನಿವಾರ್ಯ ಸ್ಥಿತಿಯು ನಿರ್ಮಾಣವಾಗುತ್ತದೆ. ಅದರಂತೆಯೇ ಭಾರತೀಯ ಸಮಾಜದ ವಿಶಿಷ್ಟತೆಯ ಹಿನ್ನೆಲೆಯಲ್ಲಿರುವ ಬಹುಪಕ್ಷೀಯ ವ್ಯವಸ್ಥೆ ಹೋಗಿ ಎರಡೇ ಪಕ್ಷಗಳು ಆಡಳಿತ ತರಬೇಕೆಂಬುದು. ಇನ್ನೂ ಮುಂದುವರೆದು ಸರ್ವಾಧಿಕಾರದ ಬಿಗಿ ಹಿಡಿತದಲ್ಲಿ ಅಭಿವೃದ್ಧಿ ಸಾಧಿಸಬೇಕೆಂದೂ ವಾದಿಸ ಲಾಗುತ್ತಿರುವುದು. ಇದು ಆಳುವ ವರ್ಗಗಳಿಗೂ, ಬಿಜೆಪಿಯಂತಹ ವಿರೋಧ ಪಕ್ಷಕ್ಕೆ ತುಂಬಾ ಆಕರ್ಷಣೀಯ, ಅಪೇಕ್ಷಣೀಯವಾಗಿದೆ. ಆದ್ದರಿಂದಲೇ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಳುಗಿರುವ ಬಿಜೆಪಿ ನಾಯಕರು, ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪನವರು ಅದ್ವಾನಿ ಇಂತಹ ಹೋರಾಟಕ್ಕೆ ಸರ್ವ ಬೆಂಬಲ ಸಾರಿದ್ದು, ಸಂಘ ಪರಿವಾರಿ ರಾಮದೇವರಂಥವರೂ ಘರ್ಜಿಸಿ ಬೆಂಬಲ ನೀಡಿದ್ದು ಚಿತೋಹಾರಿ!

ಈಗಿನ ಸೀಮಿತ ಪ್ರಜಾಪ್ರಭುತ್ವವೇ ಕಾರ್ಪೊರೇಟ್ ಕಂಪನಿಗಳು ಮನಸ್ಸಿಗೆ ಬಂದಂತೆ ಲೂಟಿ ಹೊಡೆಯಲು, ಆಳುವ ವರ್ಗಗಳಿಗೆ ಅಡ್ಡಿ ಎನಿಸುತ್ತಿದೆ. ಇದನ್ನೇ ಬದಲಾಯಿಸಲು ಅಮೇರಿಕಾ ಬಯಸುತ್ತಿದೆ. ಅಮೇರಿಕಾವು 'ರಾಜಕೀಯ ರಹಿತ'ರಿಗೆ ಬಗೆಬಗೆಯ ನೆರವು ನೀಡುತ್ತಿರುವುದು ಅದರ ಗುಪ್ತಾಚಾರ ಇಲಾಖೆಯ ದಾಖಲೆಗಳಿಂದ ಗೊತ್ತಾಗುತ್ತದೆ.

ನಿಜಕ್ಕೂ ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕೆಂದರೆ, ಈಗಿನ ಭ್ರಷ್ಟಾಚಾರ ಎಲ್ಲಿಂತ ಹುಟ್ಟುವುದು? ಇದು ಕೇವಲ ನೈತಿಕ ಪ್ರಶ್ನೆಯೇ? ವ್ಯಕ್ತಿಗಳಿಂದ ಹಾಗೂ ರಾಜಕೀಯ ನಾಯಕರಿಂದ ಮಾತ್ರ ಭ್ರಷ್ಟಾಚಾರ ಘಟಿಸುವುದೇ? ಮೂಲಭೂತವಾಗಿ ಭ್ರಷ್ಟತೆ ಈ ವ್ಯವಸ್ಥೆಯ ತಳಪಾಯದಲ್ಲೇ ಇದೆ. ಶ್ರಮದ ಶೋಷಣೆಯೇ, ಭ್ರಷ್ಟಾಚಾರ. ಅದರಿಂದ ಗಳಿಸುವ ಅಪಾರ ಆಸ್ತಿಯೇ ಅನೈತಿಕ ಭ್ರಷ್ಟಾಚಾರ, ಇದರ ಪ್ರತಿಫಲನ ಅದೇ ವರ್ಗಗಳನ್ನು ಪ್ರತಿನಿಧಿಸುವ ಕಾಂಗ್ರೆಸ್, ಬಿಜೆಪಿಯಂತಹ ವಿವಿಧ ರಾಜಕೀಯ ಪಕ್ಷಗಳಲ್ಲಿ ಹಾಸುಹೊಕ್ಕಾಗಿದೆ. ಆದ್ದರಿಂದ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ ಎದುರಿಸದೇ ಮೇಲ್ಮಟ್ಟದ ಭ್ರಷ್ಟಾಚಾರವನ್ನು ಎದುರಿಸಿವುದೂ ಕಷ್ಟ. ಆದ್ದರಿಂದ ಸರ್ಕಾರದ ಈಗಿನ ದೋಚುವ ನೀತಿಗಳಲ್ಲಿ ಬದಲಾವಣೆಯೂ ಅಗತ್ಯ.

ಇಂತಹ ಕಣ್ಣೋಟದ ಆಧಾರದಲ್ಲಿ ಭ್ರಷ್ಟಾಚಾರದ ವಿರುದ್ಧದ ಹೋರಾಟ ಸಾಗಬೇಕಾಗಿದೆಯಾದರೂ ತಕ್ಷಣದಲ್ಲಿನ ಪ್ರಶ್ನೆಗಳನ್ನು ಎದುರಿಸುತ್ತಲೇ ಹೋಗಬೇಕಾಗುತ್ತದೆ. ಒಂದು ಶಕ್ತಿಯುತವಾದ ಲೋಕಪಾಲ್ ಕಾಯ್ದೆ ಅದರ ಜಾರಿಗೆ ಇಂದಿನ ತುರ್ತಿನ ಸಂಸ್ಥೆ ಅಗತ್ಯವಾಗಿದೆ. ಹಲವಾರು ವ್ಯತಿರಿಕ್ತ ನಿಲುವುಗಳಿದ್ದರೂ ಅಣ್ಣಾ ಹಜಾರೆ ಸತ್ಯಾಗ್ರಹ ವಿಶೇಷವಾಗಿ ಮಧ್ಯಮವರ್ಗದ ಜನರ ಗಮನ ಸೆಳೆದಿದೆ. ಕೇಂದ್ರ ಸರ್ಕಾರ ಇನ್ನೂ ಕಾಲಹರಣ ಮಾಡದೇ ತಕ್ಷಣದಲ್ಲೇ ಕರಡು ಸಿದ್ಧಗೊಳಿಸಿ ದೇಶದ ಮುಂದಿಡಬೇಕು. ವಿರೋಧಪಕ್ಷಗಳು, ಜನಸಂಘಟನೆಗಳು ಸಾಮಾಜಿಕ ಕಾರ್ಯಕರ್ತರು, ಚಿಂತಕರು ಹೀಗೆ ವಿಶಾಲವಾಗಿ ಒಳಗೊಂಡ ಚರ್ಚೆ ಆರಂಭವಾಗಬೇಕು. ಸರ್ಕಾರವು ಸಲಹೆ ಸೂಚನೆ ಪಡೆಯಬೇಕು.

ಇಷ್ಟಾದ ಮೇಲೂ ಒಂದು ಪ್ರಶ್ನೆ ಉಳಿಯುತ್ತದೆ. ಭ್ರಷ್ಟಾಚಾರ ಎದುರಿಸಲು ಹಲವು ಹತ್ತು ಸಂಸ್ಥೆಗಳಿರುವುದಾದರೂ ಸರ್ಕಾರ ನಿಜಕ್ಕೂ ಸಂವಿಧಾನ ಸಂಸತ್ತಿಗೆ ಬದ್ಧವಾಗಿರುವಂತಹ ಹಲ್ಲು, ಉಗುರುಗಳಿರುವ, ಕಚ್ಚಬಲ್ಲ ಲೋಕಪಾಲ್ ಮಸೂದೆಯನ್ನು ಅಂಗೀಕರಿಸುವುದೇ? ಕಾದು ನೋಡಿ, ಆದರೆ ಯಾವುದೇ ಕಾರಣಕ್ಕೂ ಹೋರಾಟ ನಡೆಸಲು ನಿರಾಶರಾಗಬೇಡಿ.

---

# ಸಂಸದೀಯ ಪ್ರಜಾಪ್ರಭುತ್ವಕ್ಕೆ ...


*ಪುಟ 8 ರಿಂದ*

ಅಗತ್ಯವಿರುವ ಶಾಲೆಗಳನ್ನು ಕಟ್ಟಲು, ಶಿಕ್ಷಕರನ್ನು ನೇಮಿಸಿಕೊಳ್ಳಲು, ಮಧ್ಯಾಹ್ನದ ಊಟ, ಪಠ್ಯ ಪುಸ್ತಕಗಳು, ಸಮವಸ್ತ್ರಗಳು ಇತ್ಯಾದಿ ಸೌಲಭ್ಯಗಳಿಗೆ ಪ್ರತಿವರ್ಷ ರೂ.35000 ಕೋಟಿ ರೂ.ಗಳಂತೆ ಸತತ ಐದು ವರ್ಷ ಖರ್ಚು ಮಾಡಬೇಕಾಗುತ್ತದೆ ಎಂದು ರಾಷ್ಟ್ರೀಯ ಶಿಕ್ಷಣ ಯೋಜನೆ ಮತ್ತು ಆಡಳಿತ ಸಂಸ್ಥೆ(ಎನ್‌ಐಇಪಿಎ) ಲೆಕ್ಕ ಹಾಕಿದೆ. ಅಂದರೆ ಐದು ವರ್ಷಗಳಲ್ಲಿ ಇದು 1.75 ಲಕ್ಷ ಕೋಟಿ ರೂ. ಆಗುತ್ತದೆ. 2ಜಿ ತರಂಗಾಂತರ ಹಗರಣವನ್ನು ತಪ್ಪಿಸಿದ್ದರೆ, ಭಾರತದಲ್ಲಿ ಪ್ರತಿಯೊಂದು ಹುಡುಗ, ಹುಡುಗಿಯನ್ನು ಶಾಲೆಗೆ ಕಳಿಸಲು ಬೇಕಾದ ಸಂಪನ್ಮೂಲ ಇರುತ್ತಿತ್ತು. ಮಂತ್ರಿವರ್ಯರೇ, ಇದೀಗ ಮಹಾ ಹಗರಣವನ್ನು ನಿಗ್ರಹಿಸುವುದರ ಮಹತ್ವ. ಈ ಭ್ರಷ್ಟಾಚಾರ ನಮ್ಮ ಜನತೆಗೆ ಒಂದು ಉತ್ತಮ ಬದುಕನ್ನು, ನಮ್ಮ ದೇಶಕ್ಕೆ ಒಂದು ಉತ್ತಮ ಅದೃಷ್ಟವನ್ನು ವಂಚಿಸುತ್ತಿದೆ.

ಇದೇ ರೀತಿಯಲ್ಲಿ, ರಾಷ್ಟ್ರೀಯ ಸಲಹಾ ಮಂಡಳಿ, ದೇಶದ ಪ್ರತಿಯೊಂದು ಕುಟುಂಬಕ್ಕೆ (ಎಪಿಎಲ್ ಮತ್ತು ಬಿಪಿಎಲ್) 35 ಕೆ.ಜಿ. ಆಹಾರಧಾನ್ಯಗಳನ್ನು ಕಿಲೋಗೆ 3 ರೂ. ದರದಲ್ಲಿ (ಪ್ರಸಕ್ತ ವಿಧಾನಸಭಾ ಚುನಾವಣೆಗಳಲ್ಲಿ 1ರೂ.ದರದಲ್ಲಿ ಎಂದು ಕಾಂಗ್ರೆಸ್ ಭರವಸೆ ಕೊಡುತ್ತಿದೆ ಎಂಬುದು ಬೇರೆ ಮಾತು) ಒದಗಿಸಲು ವರ್ಷಕ್ಕೆ 88000 ಕೋಟಿ ರೂ. ಹೆಚ್ಚಿನ ಖರ್ಚು ತಗಲುತ್ತದೆ ಎಂದು ಲೆಕ್ಕ ಹಾಕಿದೆ. 2ಜಿ ತರಂಗಾಂತರ ಹಗರಣವನ್ನು ತಪ್ಪಿಸಿ, ಸರಕಾರದ ಖಜಾನೆಗಾದ ಆ 1.76ಲಕ್ಷ ಕೋಟಿ ರೂ.ಗಳನ್ನು ವಸೂಲು ಮಾಡಿದ್ದರೆ, ಪೂರ್ಣ ಎರಡು ವರ್ಷ ಭಾರತದ ಜನತೆಗೆ ಆಹಾರ ಭದ್ರತೆ ಕೊಡಬಹುದಿತ್ತು. ಮಂತ್ರಿವರ್ಯರೇ, ಹೀಗೆ ಭ್ರಷ್ಟಾಚಾರದ ನಿಗ್ರಹ ಒಂದು ಉತ್ತಮ ಭಾರತದ ನಿರ್ಮಾಣಕ್ಕೆ ನೇರವಾಗಿ ಕೊಡುಗೆ ನೀಡುತ್ತದೆ.

ಅಂತಿಮವಾಗಿ, ಈ ಸಮಿತಿಯ ಕರಡು ಸಂಸತ್ತಿನ ಮುಂದೆ ಪರಿಶೀಲನೆಗೆ ತರುವ ವರೆಗೆ ಕಾಯಬೇಕು. ನಮ್ಮ ಸಂವಿಧಾನಿಕ ಕ್ರಮದ ಪ್ರಕಾರ ಸಂಸತ್ತು ಮಾತ್ರವೇ ಕಾನೂನುಗಳನ್ನು ತರಲು ಸಾಧ್ಯ. ಎಡಪಂಥೀಯರು ಪರಿಣಾಮಕಾರಿಯೂ ಆಗಿರುವ ಮತ್ತು ಪಾರದರ್ಶಕವೂ ಆಗಿರುವ, ಎಲ್ಲ ವಿಭಾಗಗಳನ್ನು ಒಳಗೊಳ್ಳುವ, ಭ್ರಷ್ಟಾಚಾರವನ್ನು ತಡೆಯುವ ಪರಿಧಿಯಲ್ಲಿ ಎಲ್ಲ ಕೋನಗಳಿಂದ ತನಿಖೆ ಮಾಡುವ ಒಂದು ಶಾಸನವನ್ನು ಅನುಷ್ಠಾನಗೊಳಿಸಲು ಬದ್ಧವಾಗಿದೆ.

# ಶಿರಸಿ : ಮಹಿಳಾ ಹಮಾಲಿ ಕಾರ್ಮಿಕರ ರಾಜ್ಯ ಸಮಾವೇಶ



## ನಿಗದಿತ, ಸಮಾನ ಕೂಲಿಗಾಗಿ ಒತ್ತಾಯ

**ಮಹಿಳಾ ಹಮಾಲಿಗಳು ನ್ಯಾಯ ಕೇಳಿ - ತಮ್ಮ ಬೆವರಿನ ಸರಿಯಾದ ಪಾಲು ಕೇಳಿ ಸಂಘಟಿತರಾಗುತ್ತಿದ್ದಾರೆ. ರಾಜ್ಯ ಸಮಾವೇಶದ ವರದಿ ಇದು**

**ಮಹೇಶ್ ಪತ್ತಾರ್**

ಬ್ಯಾಡಗಿ ಮೆಣಸಿನಕಾಯಿ, ಶಿರಸಿ ಅಡಿಕೆ, ಹುಬ್ಬಳ್ಳಿಯ ಉಳ್ಳಾಗಡ್ಡಿ, ಕಾಳು-ಕಡಿ, ಚಳ್ಳಕೆರೆಯ ಹುಣಸೆಹಣ್ಣು, ಮಂಗಳೂರಿನ ಗೇರುಬೀಜ ಹೀಗೆ ರಾಜ್ಯದ ಬಹಳಷ್ಟು ಮಾರುಕಟ್ಟೆಗಳಲ್ಲಿ ಹಾಗೂ ಅಕ್ಕಿ, ಎಣ್ಣೆ ಗಿರಣಿಗಳಲ್ಲಿ ಹಮಾಲಿ ಕೆಲಸಕ್ಕೆ ಪೂರಕವಾದ ಸ್ವಚ್ಛಗೊಳಿಸುವದು. ಜರಡಿ ಹಿಡಿಯುವದು, ಚೀಲ ತುಂಬಿ ಹೊಲೆಯುವದು, ಕೃಷಿ ಉತ್ಪನ್ನಗಳ ವರ್ಗೀಕರಣ, ಖಾಲಿ ಚೀಲಗಳ ರಿಪೇರಿ. ಮೆಣಸಿನಕಾಯಿ ತುಂಬುವುದು, ತೆಗೆಯುವದು, ಸೋರಿಕೆಯಾಗಿದ್ದನ್ನು ಗುಡಿಸುವುದು ಹಾಗೂ ಆರಿಸುವುದು ಮತ್ತು ಪುರುಷ ಹಮಾಲರು ಚೀಲಗಳನ್ನು ಎತ್ತುವಾಗ ಇಳಿಸುವಾಗ ಸಹಾಯ ಮಾಡುವುದು ಈ ಕೆಲಸ ಮಹಿಳಾ ಹಮಾಲಿ ಕಾರ್ಮಿಕರದ್ದು.

ಸಾವಿರಾರು ಸಂಖ್ಯೆಯಲ್ಲಿರುವ ಈ ಮಹಿಳೆಯರು ಖಾಯಂ ಕೆಲಸ ನಿಗದಿತ ಆಧಾಯದ ಭರವಸೆಯಿಲ್ಲದೇ, ಯಾವುದೇ ಕಾನೂನಿನ ರಕ್ಷಣೆಯಿಲ್ಲದೇ ಅಸಹಾಯಕ ಬದುಕು ನಡೆಸುತ್ತಿದ್ದಾರೆ..... ರಾಜ್ಯದ ಯಾವುದೇ ಮಾರುಕಟ್ಟೆಯಲ್ಲಿ ಮಹಿಳಾ ಹಮಾಲಿ ಕಾರ್ಮಿಕರಿಗೆ ನಿಗದಿತ ಕೂಲಿ ದರಗಳನ್ನು ನಿಗದಿ ಮಾಡಿದ ಉದಾಹರಣೆಗಳೇ ಇಲ್ಲ.!! ಕೆಲಸ ಮಾಡುವ ಪ್ರದೇಶದಲ್ಲಿ ಕನಿಷ್ಟ ಪ್ರತ್ಯೇಕ ಶೌಚಾಲಯಗಳಿಲ್ಲದೇ ನಿತ್ಯ ಕಷ್ಟ ಪಡುವಂತಾಗಿದೆ. ವರ್ತಕರ ಅಂಗಡಿಗಳಲ್ಲಿ ಕಸ ಗುಡಿಸುವುದು, ನೀರು ತುಂಬುವದು ಹೆಚ್ಚುವರಿಯಾಗಿ ಮಾಡಿದರೆ ಮಾತ್ರ ಅಲ್ಲಿ ಅವರಿಗೆ ಕೆಲಸ. ಕೆಲವು ಕಡೆ ಒಂದಿಷ್ಟು ದಿನದ ಲೆಕ್ಕದಲ್ಲಿ ಕೂಲಿ ಕೊಡಲಾಗುತ್ತಿದೆ. ಬಹುತೇಕ ಕಡೆ ಉಳಿದ ನೆಲಗಾಳುಗಳೇ ಅವರ ಕೂಲಿ. ಈ ರೀತಿ ಅತ್ಯಂತ ಕಡಿಮೆ ಕೂಲಿ ನೀಡಿ ದುಡಿಸಲಾಗುತ್ತಿದೆ ಅಲ್ಲದೇ ಅವರ ಅಸಹಾಯಕತೆಯನ್ನು ವ್ಯವಸ್ಥಿತವಾಗಿ ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಸಮಾನ ಕೆಲಸಕ್ಕೆ ಸಮಾನ ವೇತನವಂತೂ ಮರೀಚಿಕೆಯಾಗಿದೆ. ಸಂಸಾರದ ಜವಾಬ್ದಾರಿಯೊಂದಿಗೆ ಮಾರುಕಟ್ಟೆಗಳಲ್ಲಿ ದಿನ ಬೆಳಗಾದರೆ ದುಡಿಯಲೇಬೇಕಾದ ಅನಿವಾರ್ಯತೆ ಅವರದ್ದು.



ಸಮಾಜದಲ್ಲಿ ಅತ್ಯಂತ ತುಳಿತಕ್ಕೊಳಗಾಗಿರುವ, ಕಡೆಗಣಿಸಲ್ಪಟ್ಟ ಈ ದುಡಿಯುವ ಮಹಿಳೆಯರ ಅವರದೇ ಆದ ಸಮಸ್ಯೆಗಳ ಕುರಿತು ಚರ್ಚಿಸಲು ಪರಿಹಾರಗಳಿಗಾಗಿ ಹೋರಾಟಗಳನ್ನು ರೂಪಿಸಲು ಮತ್ತು ಅವರಲ್ಲಿ ಸಂಘಟನಾತ್ಮಕ ಜಾಗೃತಿ ಮೂಡಿಸಲು ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಶತಮಾನೋತ್ಸವ ಹಾಗೂ ಸಿಐಟಿಯು 40ನೇ ವರ್ಷಾಚರಣೆ ಅಂಗವಾಗಿ ಸಂಘಟಿಸಿದ್ದ ಮಹಿಳಾ ಹಮಾಲಿ ಕಾರ್ಮಿಕರ ಪ್ರಥಮ ರಾಜ್ಯ ಸಮಾವೇಶವು



ಮಾರ್ಚ-27ರಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿ ಎಪಿಎಂಸಿಯಲ್ಲಿ ಯಶಸ್ವಿಯಾಗಿ ನಡೆದಿದೆ. ರಾಜ್ಯದ ವಿವಿಧ ಮಾರುಕಟ್ಟೆಗಳಿಂದ ಅಂದಾಜು 600 ಮಹಿಳಾ ಹಮಾಲಿ ಕಾರ್ಮಿಕರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

**ಸರಿಯಾದ ಪಾಠ ಕಲಿಸಿ -ಎಸ್.ಪ್ರಸನ್ನಕುಮಾರ್**

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ ಹಿರಿಯ ಮಹಿಳಾ ಹಮಾಲಿ ಕಾರ್ಮಿಕರೊಂದಿಗೆ ಜಂಟಿಯಾಗಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ ದಕ್ಷಿಣ ಭಾರತದಲ್ಲಿ 2ರೂ ದರದಲ್ಲಿ ಅಕ್ಕಿ ಸಿಗಲಾರದ ನತದೃಷ್ಟರೆಂದರೆ ಅದು ಕರ್ನಾಟಕದ ಜನತೆ. ಕೆಜಿಗೆ 2 ರೂ ದರದಲ್ಲಿ ಅಕ್ಕಿ ಕೊಡುತ್ತೇವೆಂದು ಜನತೆಗೆ ವಚನ ನೀಡಿದ ರಾಜ್ಯ ಬಿಜೆಪಿ ಸರಕಾರ 34 ತಿಂಗಳು ಕಳೆದರೂ ಭರವಸೆ ಅನುಷ್ಠಾನಗೊಳಿಸದೇ ವಚನ ಭ್ರಷ್ಟವಾಗಿದೆ. ಶೇ 90 ರಷ್ಟಿರುವ ದುಡಿಯುವ ಜನರ ಸಮಸ್ಯೆಗಳನ್ನು ಪರಿಹರಿಸುವ ಜವಾಬ್ದಾರಿಯನ್ನು ಮರೆತು ಸ್ವಜನ ಪಕ್ಷಪಾತ, ಭ್ರಷ್ಟಾಚಾರದಲ್ಲಿ ಮುಳುಗಿದೆ. ಇಂತಹ ಬೇಜವಾಬ್ದಾರಿ ಸರಕಾರಕ್ಕೆ ತಕ್ಕ ಪಾಠ ಕಲಿಸುವುದಕ್ಕೆ ಮಹಿಳೆಯರು ಸೇರಿದಂತೆ ದುಡಿಯುವ ಜನ ಸಂಘಟಿತ ಹೋರಾಟ ನಡೆಸುವ ಅನಿವಾರ್ಯತೆ ಇದೆ ಎಂದರು.

**ಪುರುಷರಷ್ಟೇ ಅಲ್ಲ:** ಅವರು ಮುಂದುವರೆದು ಮಾತನಾಡಿ ಹಮಾಲಿಗಳೆಂದರೆ ಕೇವಲ ಪುರುಷರು ಮಾತ್ರವಲ್ಲ. ಪೂರಕವಾದ ಕೆಲಸವನ್ನು ಮಹಿಳೆಯರು ನಿರ್ವಹಿಸುವದರಿಂದ ಮಾತ್ರ ಇಂತಹ ಕಾರ್ಯಗಳು ಪೂರ್ಣಗೊಳ್ಳಲು ಸಾಧ್ಯ. ಮಹಿಳಾ ಹಮಾಲಿ ಕಾರ್ಮಿಕರಿಗೆ ಸೌಲಭ್ಯಗಳನ್ನು ಕಲ್ಪಿಸಲು ಸರಕಾರ ಮುಂದಾಗಬೇಕೆಂದರು.

**ಸರಕಾರಕ್ಕೆ ಒತ್ತಾಯ:** ಲೈಸೆನ್ಸ್, ಗುರುತಿನ ಚೀಟಿ, ವಿಮೆ, ಪಿಂಚಣಿ, ನಿಗದಿತ ಕೂಲಿ, ಶಿಶುಪಾಲನಾ ಕೇಂದ್ರ, ತುರ್ತು ಚಿಕಿತ್ಸೆ, ಪ್ರತ್ಯೇಕ ವಿಶ್ರಾಂತಿ ಗೃಹ, ಶೌಚಾಲಯ, ಮುಂತಾದ ಸೌಲಭ್ಯ ಕಲ್ಪಿಸಲು, ಅವರ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಎಪಿಎಂಸಿ ನಿರ್ದೇಶಕರಿಗೆ ಹಾಗೂ ಸರಕಾರಕ್ಕೆ ಒತ್ತಾಯಿಸಲಾಗಿದೆ. ಈ ಸಮಾವೇಶವು ಮುಂದಿನ ಹೋರಾಟ ಕಾರ್ಯಕ್ರಮಗಳನ್ನು ರೂಪಿಸಲಿದೆ ಎಂದು ರಾಜ್ಯ ಹಮಾಲಿ ಕಾರ್ಮಿಕ ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ ಪ್ರಾಸ್ತಾವಿಕವಾಗಿ ಮಾತನಾಡಿದರು.

**ಕೊಡುವವರಿಗೂ ಸಂಸ್ಕಾರ ಇರಬೇಕು!!:** ವೇತನ, ಕೂಲಿ ಇತ್ಯಾದಿ ತೆಗೆದುಕೊಳ್ಳುವವರಿಗೆ ಸಂಸ್ಕಾರ ಇರಬೇಕು, ಹೇಳಲಾಗುತ್ತಿದೆ ನಿಜ._ ಆದರೆ ಕೊಡುವವರಿಗೂ ಆ ಸಂಸ್ಕಾರ ಇರಬೇಕಲ್ಲವೇ?. 21ನೇ ಶತಮಾನದಲ್ಲಿಯೂ ನಿಗದಿತ ಕೂಲಿ ಇಲ್ಲದೇ ಮಹಿಳೆಯರನ್ನು ದುಡಿಸಿಕೊಳ್ಳುವದು ಸಂಸ್ಕಾರವೇ? ಸಮಾಜದಲ್ಲಿ ಅತ್ಯಂತ ಕಡೆಗಣಿಸಲ್ಪಟ್ಟ ಮಹಿಳಾ ಹಮಾಲಿ ಕಾರ್ಮಿಕರ ಈ ವಿಭಾಗವನ್ನು ರಾಜ್ಯ ಹಮಾಲಿ ಫೆಡರೇಶನ್ ಸಿ.ಐ.ಟಿ.ಯು. ಅಡಿಯಲ್ಲಿ ಸಂಘಟಿಸುತ್ತಿರುವುದು ಹಾಗೂ ಈ ಸಮಾವೇಶ ರಾಜ್ಯದ ಕಾರ್ಮಿಕ ಚಳುವಳಿಯಲ್ಲಿ ದಾಖಲಾರ್ಹವಾಗಿದೆ. ಶೇ.50 ರಷ್ಟಿರುವ ದುಡಿಯುವ ಮಹಿಳೆಯರು ಸಂಘಟಿತರಾಗದಿದ್ದರೆ ಕಾರ್ಮಿಕ ಚಳುವಳಿ ಅಪೂರ್ಣವಾಗುತ್ತದೆ ಎಂದು ದುಡಿಯುವ ಎಲ್ಲ ವಿಭಾಗದ ಮಹಿಳೆಯರು ಸಂಘಟಿತರಾಗುವ ಅಗತ್ಯತೆ ಕುರಿತು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಹಾಗೂ ರಾಜ್ಯ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕಿ ಎಸ್. ವರಲಕ್ಷ್ಮೀ ಮಾತನಾಡಿದರು.

**ಅನುಭವಗಳು, ಸಮಸ್ಯೆಗಳು :** ಪ್ರಧಾನ ಕಾರ್ಯದರ್ಶಿಗಳ ಕರಡು ವರದಿಯ ಮೇಲೆ ನಡೆದ ಚರ್ಚೆಯಲ್ಲಿ ರಾಜ್ಯದ ವಿವಿಧ ಮಾರುಕಟ್ಟೆಗಳಿಂದ ಆಗಮಿಸಿದ್ದ ಮಹಿಳಾ ಹಮಾಲಿ ಕಾರ್ಮಿಕ ಮುಖಂಡರು ತಾವು ಅನುಭವಿಸುತ್ತಿರುವ ಸಮಸ್ಯೆಗಳು ಹಾಗೂ ಅನುಭವಗಳನ್ನು ಹಂಚಿಕೊಂಡರು.

**ಸಮಾರೋಪ:** ದುಡಿಯುವ ಬಡ ಜನತೆಗೆ ನ್ಯಾಯಯುತ ಸೌಲಭ್ಯಗಳು ಸಿಗುತ್ತಿಲ್ಲ. ಇರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಲು ಜಾಗ್ರತರಾಗಬೇಕು. ತಮ್ಮ ಮಕ್ಕಳನ್ನು ಹಮಾಲಿ ಕೆಲಸಕ್ಕೆ ದೂಕದೇ (ಸಮಸ್ಯೆಯ ಮರೆಮಾಚಿ ಕಾರ್ಮಿಕರನ್ನೇ ನಿಂದಿಸುವ ಅಧಿಕಾರಶಾಹಿ ಛಾಪೆ ಗಮನಿಸಿ) ಅವರಿಗೆ ಉತ್ತಮ ಶಿಕ್ಷಣ ಕೊಡಿಸಲು ಹೆಚ್ಚಿನ ಗಮನ ಹರಿಸಬೇಕು. ನಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಹಮಾಲಿ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವುದರೊಂದಿಗೆ ತಮ್ಮ ಪ್ರಮುಖ ಬೇಡಿಕೆಗಳನ್ನು ಸರಕಾರದ ಗಮನಕ್ಕೆ ತರುವದಾಗಿ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾಧಿಕಾರಿ ಬಿ.ಎನ್. ಕೃಷ್ಣಯ್ಯ ಭರವಸೆ ನೀಡಿದರು.

**ಜಾಗೃತಿ ಮೂಡಿಸಲಾಗುತ್ತಿದೆ:** ದುಡಿಯುವ ಮಹಿಳೆಯರು ಸಂಘಟಿತರಾಗಿ ಹೋರಾಟ ನಡೆಸಬೇಕಾಗಿದೆ. ಸಿಐಟಿಯು ರಾಜ್ಯದಲ್ಲಿ ದುಡಿಯುವ ಮಹಿಳೆಯರ ಧೀರೋದಾತ್ತ ಹೋರಾಟ ನಡೆಸಲಾಗಿದೆ ಎಂದು ಸಿಐಟಿಯು ಉ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವಕರ ಹೇಳಿದರು.

ಬಾರೇ ಅಕ್ಕ, ಬಾರೇ ತಂಗಿ ಒಂದೇ ಮನದಿಂದ ಸೇರೋಣ ॥ ಸಿಐಟಿಯು ಸೇರೋಣ, ನೆಮ್ಮದಿಯ ಬಾಳು ಕಟ್ಟೋಣ ॥


'ಸಮಾವೇಶದಲ್ಲಿ ಗಮನ ಸೆಳೆದ ಹಾಡು ಈ ಯಶಸ್ವಿ ಸಮಾವೇಶದ ಆಶಯವಾಗಲಿ. ಈ ಸಮಾವೇಶದ ನಿರ್ಣಯಗಳನ್ನು ಜಾರಿಗೊಳಿಸಲು ನಾವೆಲ್ಲರೂ ಬದ್ಧರಾಗೋಣ' ಎಂದು ರಾಜ್ಯ ಹಮಾಲಿ ಫೆಡರೇಶನ್‌ನ ಅಧ್ಯಕ್ಷ ಮಹೇಶ ಪತ್ತಾರ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ್ಯ ಹಮಾಲಿ ಫೆಡರೇಶನ್‌ನ ಉಪಾಧ್ಯಕ್ಷ ದುರಗಪ್ಪ ಚಿಕ್ಕತುಂಬಳ, ಉಪವಿಭಾಗಾಧಿಕಾರಿ ಜೆ. ಜಗದೀಶ, ಶಿರಸಿ ತಹಶೀಲ್ದಾರ ಕೃಷ್ಣಮೂರ್ತಿ, ಅಂಕೋಲಾ ತಹಶೀಲ್ದಾರ ಉದಯಕುಮಾರ ಶೆಟ್ಟಿ ಮಾತನಾಡಿದರು. ಸಿಐಟಿಯು ಜಿಲ್ಲಾ ಅಧ್ಯಕ್ಷ ಹರೀಶ ನಾಯ್ಕ, ರಾಜ್ಯ ಹಮಾಲಿ ಫೆಡರೇಶನ್‌ನ ಉಪಾಧ್ಯಕ್ಷ ತಿಲಕ ಜಟ್ಟಿ ಗೌಡ, ಸಿಐಟಿಯು ಮುಖಂಡರಾದ ಮುತ್ತಾ ಪೂಜಾರಿ, ಕಲ್ಪನಾ ನಾಯ್ಕ, ವೆಂಕಟೇಶ ನಾಯ್ಕ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸ್ವಾಗತ ಸಮಿತಿ ಗೌರವಾಧ್ಯಕ್ಷ ಸಿ.ಆರ್.ಶಾನಭಾಗ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ನಾಗಪ್ಪ ನಾಯ್ಕ ವಂದನಾರ್ಪಣೆ ಸಲ್ಲಿಸಿದರು.

**ಉಪಸಮಿತಿ ಆಯ್ಕೆ:** ರಾಜ್ಯ ಸಂಚಾಲಕರಾಗಿ ಶಿರಸಿಯ ಗೀತಾ ಚಕ್ರಸಾಲಿ, ಬಾಳ್ಗಿಯ ಶಾರದಮ್ಮಾ, ಹುಬ್ಬಳ್ಳಿಯ ನಾಗಮ್ಮ ಹಿರೇಮನಿ ಇವರಲ್ಲದೆ 9 ಜನರನ್ನು ಸಮಿತಿ ಸದಸ್ಯರಾಗಿ ಸಮಾವೇಶ ಮಹಿಳಾ ಹಮಾಲಿ ಕಾರ್ಮಿಕರ ರಾಜ್ಯ ಉಪಸಮಿತಿಗೆ ಆಯ್ಕೆ ಮಾಡಿತು.

ಯುಪಿಎ ದರ್ಬಾರ್

# ಪ್ರಧಾನ ಮಂತ್ರಿಗಳು ಮೌನಕಾಲೂರಿಲ್ಲ ಎಂದ ಹಣಕಾಸು ಮಂತ್ರಿಗಳು



■ ವೇದರಾಜ ಎನ್.ಕೆ.


ಹಗರಣಗಳ ದೊಡ್ಡ ಮೂಟೆಯನ್ನೇ ಹೊತ್ತುಕೊಂಡಿರುವ ಯುಪಿಎ-2 ಸರಕಾರ ಮತ್ತೆ ತಲೆಬಾಗಬೇಕಾಗಿ ಬಂದಿದೆ-2ಜಿ ಹಗರಣದ ಮೇಲೆ ಜೆಪಿಸಿ ರಚಿಸುವುದಿಲ್ಲ ಎಂದು ಪಟ್ಟು ಹಿಡಿದ ನಂತರ ಕೊನೆಗೂ ಅದನ್ನು ರಚಿಸಿದ ಅದು ಮತ್ತೆ ಅಂತಹುದೇ ಕ್ರಮ ಕೈಗೊಳ್ಳಬೇಕಾಗಿ ಬಂದಿದೆ. ಅಣ್ಣಾ ಹಜಾರೆಯವರ 97 ಗಂಟೆಗಳ ಉಪವಾಸ ಮುಷ್ಕರದ ಹಿನ್ನೆಲೆಯಲ್ಲಿ ದೇಶಾದ್ಯಂತ ವ್ಯಕ್ತಗೊಂಡ ಭ್ರಷ್ಟಾಚಾರ-ವಿರೋಧಿ ಆಕ್ರೋಶವನ್ನು ಕಂಡ ಯುಪಿಎ-2 ಸರಕಾರ ಲೋಕಪಾಲ ಮಸೂದೆಯನ್ನು ತರಬೇಕೆಂಬ ಬೇಡಿಕೆಗೆ ಸ್ಪಂದಿಸಬೇಕಾಗಿ ಬಂದಿದೆ. ಅಣ್ಣಾ ಹಜಾರೆಯವರ ಬೇಡಿಕೆಯಂತೆ ಒಂದು ಜಂಟಿ ಕರಡು ಸಮಿತಿಯನ್ನು ರಚಿಸಲಾಗಿದೆ. ಅದರಲ್ಲಿ ಸರಕಾರದ ಪರವಾಗಿ ಐದು ಮಂತ್ರಿಗಳು ಹಾಗೂ ಹಜಾರೆಯವರ ಕಡೆಯಿಂದ ಅವರೂ ಸೇರಿದಂತೆ ಐವರು ಪ್ರತಿಷ್ಠಿತರು ಇರುತ್ತಾರೆ. ಮುಂದಿನ ಮಳೆಗಾಲದ ಅಧಿವೇಶನದಲ್ಲಿ, ಜುಲೈನಲ್ಲಿ ಈ ಕರಡನ್ನು ಮಂಡಿಸಲಾಗುತ್ತದೆ ಎಂದು ಹೇಳಲಾಗಿದೆ. ಯುಪಿಎ-2 ಸರಕಾರದ ಹಣಕಾಸು ಮಂತ್ರಿಗಳು ಮತ್ತು ಪ್ರಖ್ಯಾತ ವಕೀಲ ಶಾಂತಿ ಭೂಷಣ್ ಇದರ ಸಹ-ಅಧ್ಯಕ್ಷರಾಗಿರುತ್ತಾರೆ ಮತ್ತು ಕಾನೂನು ಮಂತ್ರಿಗಳು ಸಂಚಾಲಕರಾಗಿರುತ್ತಾರೆ.

ಈ ಗಜೆಟ್ ಪ್ರಕಟಣೆಯ ನಂತರ ಯುಪಿಎ ಮುಖಂಡರು ಮುಖ ಉಳಿಸಿಕೊಳ್ಳುವ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಾಹುಲ್ ಗಾಂಧಿಯವರು ತಮ್ಮ ಪಕ್ಷ ಮಾಹಿತಿ ಹಕ್ಕು, ಅರಣ್ಯ ಹಕ್ಕು, ಶಿಕ್ಷಣದ ಹಕ್ಕು ಮತ್ತು ಆಹಾರ ಭದ್ರತಾ ಕಾನೂನುಗಳ ನಂತರ ಈಗ ಭ್ರಷ್ಟಾಚಾರ ತಡೆಗೆ ಮುಂದಾಗಿದೆ ಎಂದು ಹೇಳಿಕೊಂಡಿದ್ದಾರೆ.

ಅದಕ್ಕೆ ಅಣ್ಣಾ ಹಜಾರೆಯವರ ಉಪವಾಸಕ್ಕೆ ಕಾಯುತ್ತಿದ್ದರೇ ಎಂದೇನೂ ವಿವರಣೆ ಕೊಟ್ಟಿಲ್ಲ. ಅತ್ತ ಕಾಂಗ್ರೆಸ್ ವಕ್ತಾರ ಅಭಿಷೇಕ್ ಸಿಂಘ್ವಿ ದನಿ ಭಿನ್ನವಾಗಿತ್ತು - 'ನಾವು ಸ್ವಲ್ಪ ಹೆಚ್ಚೇ ಬಿಟ್ಟುಕೊಟ್ಟದ್ದೇವೆ ಎಂದು ಜನ ಹೇಳಬಹುದು. ಈ ಬೇಡಿಕೆಯನ್ನು ಒಪ್ಪಿರುವುದು, ಭವಿಷ್ಯದಲ್ಲಿ ಇಂತಹ ಬೇಡಿಕೆಗಳಿಗೆ ಮಾದರಿ ಎಂದು ಪರಿಗಣಿಸಬಾರದು' ಎಂಧರವರು, ಬಹುಶಃ ಖೇದದಿಂದ.

ಜಂಟಿ ಸಮಿತಿಯ ಅಧ್ಯಕ್ಷರಲ್ಲೊಬ್ಬರಾದ, ಯುಪಿಎ-2 ಸರಕಾರದ ಹಿರಿಯರಾದ ಪ್ರಣಬ್ ಮುಖರ್ಜಿಯವರು ಪ್ರಧಾನ ಮಂತ್ರಿಗಳು 'ದುರ್ಬಲರೇನಲ್ಲ, ಅವರು ಭ್ರಷ್ಟಾಚಾರವೂ ಸೇರಿದಂತೆ ಎಲ್ಲ ಪ್ರಶ್ನೆಗಳ ಬಗ್ಗೆ ಎಚ್ಚರದಿಂದಿದ್ದಾರೆ, ಪೂರ್ವಕ್ರಿಯಾಶೀಲತೆ ಇರುವವರು' ಎಂದಿದ್ದಾರೆ.

ಯುಪಿಎ-2 ಅಂತರ್ಗತ ಪ್ರಾಮಾಣಿಕತೆ




ಕೃಪೆ: ದಿ ಹಿಂದೂ

ಆದರೆ 2ಜಿ ಹಗರಣ ಬಯಲಾದಾಗಲಾಗಲೀ, ಸುಪ್ರಿಂ ಕೋರ್ಟ್ ಉಸ್ತುವಾರಿಗೆ ಅದು ಬಂದಾಗಲಾಗಲೀ, ಜೆಪಿಸಿ ರಚನೆಯ ಬೇಡಿಕೆಯ ಸಂದರ್ಭದಲ್ಲಾಗಲೀ, ಬೇರೆ ಯಾವ ಸಂದರ್ಭದಲ್ಲಾಗಲೀ (ಅಮೆರಿಕಾದ ಅಡಿಯಾಳು ಮಿತ್ರನಾಗುವ ಪ್ರಯತ್ನವೊಂದರಲ್ಲಿ ನಕಾರಾತ್ಮಕವಾಗಿ ಬಿಟ್ಟು) ಪ್ರಣಬ್ ಮುಖರ್ಜಿಯವರು ಹೇಳಿದ ಯಾವ ಗುಣಗಳೂ ಕಾಣ ಬಂದಿಲ್ಲವಲ್ಲ.

ಆದರೆ, ಆಡಳಿತದ ವೈಫಲ್ಯ, ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ ಬಡವರನ್ನೇ ಹೆಚ್ಚಾಗಿ ತಟ್ಟಿದೆ ಎಂಬುದನ್ನು ನಮ್ಮ ಹಣಕಾಸು ಮಂತ್ರಿಗಳಂತೂ ಈಗ ಒಪ್ಪಿಕೊಳ್ಳುತ್ತಾರೆ. ಈ ಪ್ರಶ್ನೆಗಳನ್ನು ಎದುರಿಸದೆ ಎಲ್ಲರನ್ನು ಒಳಗೊಳ್ಳುವ ಅಭಿವೃದ್ಧಿ ಅಜೆಂಡಾ ಸಾಧ್ಯವಿಲ್ಲ ಎಂದೂ ಹೇಳಿದ್ದಾರೆ. ಇದನ್ನು ಅವರು ಹೇಳಿದ್ದು ಭಾರತದ ದೊಡ್ಡ ಬಂಡವಾಳಿಗರ ಸಂಸ್ಥೆ ಸಿಐಐ ನ ರಾಷ್ಟ್ರೀಯ ಸಮ್ಮೇಳದವನ್ನು ಉದ್ದೇಶಿಸಿ ಮಾತನಾಡುತ್ತ. ಅವರ ಮಾತುಗಳನ್ನೇ ಬಳಸುವುದಾದರೆ ' ಉತ್ತಮ ಆಶಯಗಳಿದ್ದರೆ ಸಾಲದು, ಉತ್ತಮ ಕ್ರಿಯೆಗಳೂ ಇರಬೇಕು.' ಅವರ 2011-12ರ ಬಜೆಟ್ ಅಂತಹ ಯಾವ ಸಂಕೇತವನ್ನೂ ಕೊಟ್ಟಿಲ್ಲ, ಬದಲಿಗೆ, ವ್ಯತಿರಿಕ್ತ ಸಂಕೇತಗಳನ್ನೇ ಕೊಟ್ಟಿದೆ. ಬಹುಶಃ, ತಾವು ಎಂತಹ ಸನ್ನಿವೇಶದಲ್ಲಿ ಬಂಡವಾಳಿಗರ ಪರವಾಗಿ ಕೆಲಸ ಮಾಡಬೇಕಿದೆ ಎಂಬುದನ್ನು ದೇಶದ ಬಂಡವಾಳಿಗರ ಗಮನಕ್ಕೆ ತರಲು ಈ ಎಲ್ಲ ಮಾತುಗಳು.

★

### ಮಾವೋವಾದಿಗಳಿಗೂ ಹಫ್ತಾ?

ಹೌದು- ಹೀಗೆಂದವರು ಕೇಂದ್ರ ಗೃಹ ಕಾರ್ಯದರ್ಶಿಗಳು. ಅದೇ ಸಿಐಐ ಏರ್ಪಡಿಸಿದ್ದ 'ಅಭಿವೃದ್ಧಿ ತಾರತಮ್ಯಗಳ ಭದ್ರತಾ ಆಯಾಮಗಳು' ಎಂಬ ಬಗ್ಗೆ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಾ ಅವರು, ಮಧ್ಯ ಮತ್ತು ಪೂರ್ವ ಭಾರತದಲ್ಲಿರುವ ಹಲವು ಉದ್ದಿಮೆಗಳಿಂದ ಹಣ ಕೇಳುವ ನೋಟೀಸುಗಳನ್ನು ಮಾವೋವಾದಿಗಳು ಕೊಡುತ್ತಾರೆ. ಉದ್ಯಮಿಗಳು ಅಭದ್ರ ಪರಿಸ್ಥಿತಿಯಿಂದಾಗಿ ತಮ್ಮ ವ್ಯವಹಾರಗಳು ಸುಲಲಿತವಾಗಿ ನಡೆಯಲು ಅವರು ಕೇಳಿದ ಹಣ ತೆರುತ್ತಾರೆ ಎಂದರು ಗೃಹ ಕಾರ್ಯದರ್ಶಿಗಳು.

ಆದರೆ ಅವರ 'ಬಾಸ್' ದಿಲ್ಲಿ ಬಿಟ್ಟು ಕೊಲ್ಕತಾಗೆ ಹೋದಾಗ ಬೇರೆಯೇ ಹೇಳುತ್ತಾರಲ್ಲ. ಅವರೇ ಏಕೆ, ಯುಪಿಎ-2 ಸರಕಾರದ ಪ್ರಧಾನ ಮಂತ್ರಿಗಳೂ ಕೊಲ್ಕತಾಕ್ಕೆ ಬಂದಾಗ ಅದೇ ರೀತಿ ರಾಗ ಬದಲಿಸುತ್ತಾರಲ್ಲ? ಅದಕ್ಕೆ ಗೃಹ ಕಾರ್ಯದರ್ಶಿಗಳೇನು ಮಾಡಲು ಸಾಧ್ಯ, ಅಲ್ಲವೇ?

ಗೃಹ ಕಾರ್ಯದರ್ಶಿಗಳು ಇನ್ನೂ ಒಂದು ವಿಚಾರ ಹೇಳಿದರು-ಭಾರತದ ಸಮೃದ್ಧಿಯಿಂದ ಎಲ್ಲ ಭಾರತೀಯರಿಗೂ ಸಮಾನವಾಗಿ ಪ್ರಯೋಜನ ವಾಗುತ್ತಿಲ್ಲ. ಈ ಅಸಮಾನತೆ ಸಾಮಾಜಿಕ ಅಸಂತೃಪ್ತಿಗೆ ಕಾರಣವಾಗುತ್ತಿದೆ. ಇದನ್ನು ಅವರು ಹೇಳಿದ್ದು ಯುಪಿಎ ಸರಕಾರದ ನೀತಿಗಳಿಂದ ಗರಿಷ್ಠ ಪ್ರಯೋಜನ ಪಡೆದಿರುವ ಭಾರತದ ಪ್ರಮುಖ ಬಂಡವಾಳಶಾಹಿಗಳ ಎದುರು! ಬನ್ನಿ, ಈ ಸವಾಲನ್ನು ತುರ್ತಾಗಿ, ಒಟ್ಟಾಗಿ ಎದುರಿಸಲು ಸರಕಾರ ಮತ್ತು ಉದ್ಯಮಿಗಳು ಒಟ್ಟಾಗಿ ಕೆಲಸ ಮಾಡೋಣ, ಇಲ್ಲವಾದರೆ ಮಾಹಿತಿ ಸ್ಫೋಟದ ಈ ಕಾಲದಲ್ಲಿ ಜಾಗೃತಗೊಂಡ ಜನಸಮೂಹಗಳು ಬಹಳ ದಿನ ಕಾಯಲು ಸಿದ್ಧರಿಲ್ಲ ಎಂದೂ ಅವರು ಎಚ್ಚರಿಸಿದ್ದಾರೆ!

### ಯುವ ಅಪರಾಧಿಗಳು

ದೇಶದಲ್ಲಿ ಅಪರಾಧ ಎಸಗುವವರಲ್ಲಿ ಸುಮಾರು 81ಶೇ. ಮೊದಲ ಬಾರಿಗೆ ಇಂತಹ ಅಪರಾಧಕ್ಕಿಳಿಯುವವರು. ಇವರಲ್ಲಿ ಹೆಚ್ಚಿನವರು 16ರಿಂದ 28 ವರ್ಷ ವಯೋಗುಂಪಿನವರು. ಇದು ಕೇಂದ್ರ ಗೃಹ ಕಾರ್ಯದರ್ಶಿಗಳು ಸಿಐಐ ವಿಚಾರ ಸಂಕಿರಣದಲ್ಲಿ ಕೊಟ್ಟಿರುವ ಅಂಕಿ-ಅಂಶ. ಈ ಬಗ್ಗೆ ಎಚ್ಚರಿಕೆ ವಹಿಸದಿದ್ದರೆ, ಅಂದರೆ ಅಭಿವೃದ್ಧಿಯಲ್ಲಿನ ಅಸಮಾನತೆಯನ್ನು ನಿವಾರಿಸದಿದ್ದರೆ, ಭಾರತದ ಜನಸಂಖ್ಯೆಯಲ್ಲಿ ಯುವಜನರ ಸಂಖ್ಯೆ ಹೆಚ್ಚಿರುವುದರಿಂದ ಇರುವ ಅನುಕೂಲಗಳೇ ಪ್ರತಿಕೂಲ ಸಂಗತಿಗಳಾಗಿ ಬಿಡಬಹುದು ಎಂಬುದು ಅವರ ಆತಂಕ. ನಿಜ. ಆದರೆ ಯುಪಿಎ-2 ಸರಕಾರ ಈ ದಿಕ್ಕಿನಲ್ಲಿ ಏನು ಮಾಡುತ್ತಿದೆ?

★

### 2ಜಿ-ಪ್ರಮುಖ ಟೆಲಿಕಾಂ ಕಂಪನಿಗಳ ಮೇಲೆ ಫೆಮಾ ಆಪಾದನೆಗಳು

2-ಜಿ ತರಂಗಾಂತರ ಹಂಚಿಕೆಯ ಭ್ರಷ್ಟಾಚಾರದ ಕಬಂಧ ಬಾಹುಗಳು ಎಲ್ಲೆಲ್ಲ ಹರಡಿವೆ ಎಂಬುದು ಒಂದೊಂದಾಗಿ ಬೆಳಕಿಗೆ ಬರುತ್ತಿದೆ. ಹಗರಣದಲ್ಲಿ ಸಿಲುಕಿರುವ ದೊಡ್ಡ ಟೆಲಿಕಾಂ ಕಂಪನಿಗಳಾದ ಸ್ವಾನ್, ಲೂಪ್ ಮತ್ತು ಎಸ್-ಟೆಲ್ ಮೇಲೆ ಜಾರಿ ನಿರ್ದೇಶನಾಲಯ(ಇಡಿ) ವಿದೇಶಿ ವಿನಿಮಯ ನಿಯಮಗಳ ಉಲ್ಲಂಘನೆಯ ಹಲವು ಆಪಾದನೆಗಳನ್ನು ಜಡೆದಿದೆ. ಈ ಉಲ್ಲಂಘನೆಗಳ ಹಣಕಾಸು ಮೊತ್ತ ಸುಮಾರು 4300 ಕೋಟಿ ರೂ.ಗಳು ಎನ್ನಲಾಗಿದೆ. ಈ ವಿದೇಶಿ ವಿನಿಮಯ ಅವ್ಯವಹಾರಗಳು ನಡೆದಿರುವುದು ಅಗ್ಗದ ದರಗಳಲ್ಲಿ ಸರಕಾರದಿಂದ ಪಡೆದ 2ಜಿ ತರಂಗಾಂತರವನ್ನು ಬೇರೆ ಕಂಪನಿಗಳಿಗೆ ಮಾರಿಕೊಳ್ಳುವ ಪ್ರಕ್ರಿಯೆಯಲ್ಲಿ. ಟಾಟಾ ಗುಂಪಿನ ವರ್ಜಿನ ಮೊಬೈಲ್ ಕೂಡ ಇಂತಹ ಉಲ್ಲಂಘನೆ ಮಾಡಿರುವ ಸಂದೇಹವಿದೆ ಎಂದು ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದೆಯಂತೆ.

ಇನ್ನೊಂದು ಆಯಾಮವೆಂದರೆ ಕಪ್ಪು ಹಣವನ್ನು ಬಿಳಿ ಮಾಡಲು ಕೂಡ ತರಂಗಾಂತರ ಹಂಚಿಕೆಯ ಬಳಕೆ. ಈ ಹಗರಣದಲ್ಲಿ ಈಗಾಗಲೇ ಚಾರ್ಜ್ ಶೀಟ್ ಆಗಿರುವವರೆಲ್ಲರಿಗೆ ಮೇಲೆ ಜಾರಿ ನಿರ್ದೇಶನಾಲಯ ಕಪ್ಪು ಹಣವನ್ನು ಬಿಳಿಮಾಡುವ ಮನಿ ಲಾಂಡರಿಂಗ್ (ಅಂದರೆ ಹಣ ಮಡಿಗೊಳಿಸುವ) ಕಾನೂನಿನ ಅಡಿಯಲ್ಲಿ ಸಮನ್ಸ್

ಪುಟ 15ಕ್ಕೆ

### 'ಭೋಪಾಲ್ ಅನಿಲ ದುರಂತ' ಏಕಿಷ್ಟು ವಿಳಂಬ? - ಸುಪ್ರಿಂ ಕೋರ್ಟ್ ಪ್ರಶ್ನೆ

ಭೋಪಾಲ ಅನಿಲ ಸೋರಿಕೆ ಕುರಿತ 1996 ರ ಸುಪ್ರಿಂ ಕೋರ್ಟ್ ತೀರ್ಪಿನಲ್ಲಿ ನ್ಯಾಯ ದೊರೆತಿಲ್ಲ, ಅದನ್ನು ಸರಿಪಡಿಸಬೇಕು ಎಂದು ಸಿಬಿಐ ಹಾಕಿದ್ದ ಅರ್ಜಿ ಈ ವಾರ ಸುಪ್ರಿಂಕೋರ್ಟಿನಲ್ಲಿ ವಿಚಾರಣೆಗೆ ಬಂದಾಗ, ಇಂತಹ ಅರ್ಜಿ ಹಾಕಲು ಇಷ್ಟೊಂದು ವಿಳಂಬ ಏಕೆ ಎಂದು ಸಿಬಿಐನ್ನು ಸುಪ್ರಿಂಕೋರ್ಟ್ ಪ್ರಶ್ನಿಸಿತು.

"ನಾವು ತಪ್ಪು ಮಾಡಿರಬಹುದು. ಜೂನ್ 7, 2010ರಂದು ವಿಚಾರಣಾ ಕೋರ್ಟಿನ ತೀರ್ಪು ಬಂದಾಗ ಸಾರ್ವಜನಿಕ ಆಕ್ರೋಶ ವ್ಯಕ್ತವಾಯಿತು. ನಾವು ಈ ವಿಷಯವನ್ನು ಪರಿಶೀಲಿಸಿದೆವು. ಒಂದು ವಿಚಾರ ನಮ್ಮನ್ನು ದಿಟ್ಟಿಸಿ ನೋಡುತ್ತಿತ್ತು- 5000 ಕ್ಕೂ ಹೆಚ್ಚು ಅಮಾಯಕರನ್ನು ಬಲಿ ತೆಗೆದುಕೊಂಡ ಒಂದು ಕೈಗಾರಿಕಾ ಅವಘಡಕ್ಕೆ ಎರಡೇ ವರ್ಷಗಳ ಶಿಕ್ಷೆ. ಬಹಳ ದೊಡ್ಡ ಅನ್ಯಾಯವಾಗಿದೆ.. ಈ ತೀರ್ಪು ಹಾಗೇ ಉಳಿದು 26 ವರ್ಷಗಳ ನಂತರವೂ ನ್ಯಾಯದ ನಿರಾಕರಣೆಯಾಗಬೇಕೇ" ಎಂದು ಸಿಬಿಐ ಪರವಾಗಿ ದೇಶದ ಅಟಾರ್ನಿ ಜನರಲ್ ಸಮಜಾಯಿಷಿ ಕೊಟ್ಟರಂತೆ. ○



## ಬಿಜೆಪಿ ದರ್ಬಾರ್

# ಜನಸಂಕಟಗಳ ಪರಿಹಾರಕ್ಕಿಲ್ಲದ ಹಣ ದೇವಾಲಯಗಳಿಗೆ ಭಿನ್ನಮತೀಯರ ಬೆನ್ನ ಹಿಂದೆ ಗುಪ್ತಚರರು

■ ಆರ್.ರಾಮಕೃಷ್ಣ

ಯುದ್ಧದಲ್ಲಿ ಮತ್ತು ಪ್ರೀತಿಯಲ್ಲಿ ಏನೇ ಮಾಡಿದರೂ ನಡೆಯುತ್ತದೆ ಎಂಬ ಮಾತನ್ನು ಹಲವರು ಹೇಳುತ್ತಾರೆ. ಇದು ಅಮಾನುಷ ಹತ್ಯಾಕಾಂಡ, ಅತ್ಯಾಚಾರ, ಲೂಟಿ, ಅನಾಚಾರಗಳನ್ನು ಸಮರ್ಥಿಸಿಕೊಳ್ಳುವ ಒಂದು ತಂತ್ರಗಾರಿಕೆಯ ಮಾತಷ್ಟೇ. ಇನ್ನು ರಾಜಕಿಯ ರಂಗದ ವಿಷಯಕ್ಕೆ ಬಂದರೆ ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ ಏನು ಬೇಕಾದರೂ ಮಾಡಬಹುದು ಎಂಬುದು ಬಂಡವಾಳಶಾಹಿ ರಾಜಕೀಯ ಪಕ್ಷಗಳ ಚಿಂತನೆ ಮತ್ತು ಧೋರಣೆ. ಕರ್ನಾಟಕ ರಾಜ್ಯದಲ್ಲಿ ಮೂರು ವಿಧಾನ ಸಭಾ ಕ್ಷೇತ್ರಗಳ ಚುನಾವಣೆಗಳು ನಡೆದು ಹೋಗಿವೆ. ಸಾರ್ವಜನಿಕ ಜೀವನದಲ್ಲಿ ನೈತಿಕತೆ, ಶೀಲಗಳ ಬಗೆಗೆ ಉದ್ದುದ್ದ ಮಾತನಾಡುವ ಭಾರತೀಯ ಜನತಾ ಪಕ್ಷ- ಬಿಜೆಪಿ ಇಲ್ಲಿ ಏನೇನು 'ಪರಮ ಪವಿತ್ರ ಕೆಲಸಗಳನ್ನು' ನಡೆಸಿದೆ ಎಂಬುದರ ಪಟ್ಟಿಯನ್ನು ಮಾಡುತ್ತಾ ಹೋಗಬಹುದು. ಆದರೆ ಈಗ ಹಾಗೆ ಮಾಡುತ್ತಿಲ್ಲ. ಸುಮ್ಮನೆ ಇರಲಿ ಅಂತ ಹಾಗೆ ಒಂದೆರಡು ಸಣ್ಣ ಉದಾಹರಣೆಗಳು. ನಿಮಗಾಗಿ.

ಚುನಾವಣೆಯ ವೇಳಾಪಟ್ಟಿ ಪ್ರಕಟವಾಗುತ್ತಿದ್ದಂತೆ ಚುನಾವಣಾ ನೀತಿ ಸಂಹಿತೆ ಜಾರಿಗೆ ಬರುತ್ತದೆ. 'ನೀತಿ'ಯೇ ಇಲ್ಲದೇ ನೀತಿಗೆಟ್ಟ ಜನರಿಗೆ ಯಾವ ಸಂಹಿತೆ, ಯಾವ ಕಾನೂನು ? ರಾಜ್ಯ ಸರ್ಕಾರದ ಖಜಾನೆಯಿಂದ ರಾಜ್ಯದ ವಿವಿಧ ದೇವಾಲಯಗಳಿಗೆ ಹಣ ಧಾರಾಳವಾಗಿ ಬಿಡುಗಡೆಯಾಗುತ್ತದೆ. ನೀತಿ ಸಂಹಿತೆ ಉಲ್ಲಂಘಿಸಿ ಹಣ ಬಿಡುಗಡೆ ಮಾಡಿದ್ದು ಒಂದು ಕಡೆ ಕಾನೂನು ಬಾಹಿರ ವಿಚಾರ. ಇದರಲ್ಲಿ ಮತ್ತೊಂದು ರಾಜಕೀಯ ವಿಚಾರವಿದೆ. ಅದನ್ನು ಗಮನಿಸಿ. ಹಣ ಬಿಡುಗಡೆ ಮಾಡಿರುವುದು ಕುಡಿಯುವ ನೀರಿಲ್ಲದೆ ಹಾಹಾಕಾರವೆದ್ದಿರುವ ಪ್ರದೇಶಗಳಿಗೆ ನೀರು ಪೂರೈಕೆ ಮಾಡಲಾಗಲಿ, ಅಥವಾ ಪ್ರವಾಹ ಸಂತ್ರಸ್ಥ ಜನರಿಗೆ ಮನೆ ನಿರ್ಮಾಣಕ್ಕಾಗಲಿ ಅಲ್ಲ. ಅಥವಾ ಜನರ ಬದುಕಿನ ಬವಣೆ ನೀಗುವ ಯಾವುದೇ ಅವಶ್ಯಕತೆಗಳಿಗಾಗಿ ಅಲ್ಲ. ಹುಲು ಮಾನವರಿಗೆ ಅಲ್ಲವೇ ಅಲ್ಲ. ದೇವಾನು ದೇವತೆಗಳಿಗೆ.

ಇದು ಇನ್ನೊಂದು ವಿಚಾರ. ಕ್ಷೇತ್ರ ಬಂಗಾರ ಪೇಟೆ, ಊರು ಅದೇ. ಚುನಾವಣೆಯ ಹಿಂದಿನ ದಿನ ಸಂಜೆ ಮನೆ ಮನೆಯ ಮುಂದೆ ಕಮಲ ಪಕ್ಷದ ಮರಿ ಮುಖಂಡರ ಹಾಜರಿ. ಜೊತೆಗೆ ಪುಟ್ಟ ಕಾರ್ಯಕರ್ತರ ದಂಡು. ಮನೆಯಲ್ಲಿ ಎಷ್ಟು ಓಟಿದೆ ಎಂಬ ಲೆಕ್ಕಾಚಾರ. ಕಮಲ ಪಕ್ಷಿಗರಿಗೆ ಗುಣಿಸುವುದನ್ನು ಹೇಳಿಕೊಡಬೇಕೆ ? ಅದೂ ಜನಾರ್ಧನ ರೆಡ್ಡಿ, ಯಡಿಯೂರಪ್ಪ, ಅನಂತ ಕುಮಾರರಂಥ ಅತಿರಥ ಮಹಾರಥರಿರುವ ಪಕ್ಷದ ಕಾರ್ಯಕರ್ತರಿಗೆ. ಮನೆಯಲ್ಲಿ ನಾಲ್ಕು ಓಟಿದೆ ಅನ್ನಿ. 250X4 = 1000 ರೂಪಾಯಿ. ಹಾಂ ಇಗೊಳ್ಳಿ ಆರ್.ಬಿ.ಐ. ಮುದ್ರಿಸಿದ ಅಸಲಿ ನೋಟು. ಜನಸಾಮಾನ್ಯರ ಭಾಷೆಯಲ್ಲಿ ಹೇಳುವುದಾದರೆ ಅದು ಕನಕಾಂಬರ ನೋಟು. ಕಮಲಕ್ಕೇ ಓಟು ಹಾಕ ಬೇಕೆಂಬ ಒತ್ತಾಸೆ. ಆಮೇಲೆ ತಂಡ ಮುಂದಿನ ಮನೆಗೆ. ಇದು.... ಒಣಿಯ ಕಥೆ. ಕೊಡುಗೆಗಳು ಒಣಿಯಿಂದ ಒಣಿಗೆ ಬೇರೆ ಬೇರೆಯಾಗಿರಬಹುದು. ಪ್ರತ್ಯಕ್ಷ ವರದಿ ಬಂದಿರುವ ಒಂದು ಒಣಿಯ ಕತೆ ಇದು. ಬೇರೆ ಬೇರೆಡೆ ಪ್ರಮಾಣ ಬೇರೆಯಾಗಿರಬಹುದು. ಕೆಲವು ಒಣಿಗಳಲ್ಲಿ ಈ 'ದ್ರವ್ಯ'ದ ಜೊತೆಗೆ ಧಾರಾಳವಾಗಿ 'ದ್ರಾವಣ'ವೂ ಹರಿದಾಡಿರಬಹುದು. ಚುನಾವಣಾ ಆಯೋಗ (ಮನಸಿದ್ದು) ಚಾಪೆ ಕೆಳಗೆ ತೂರಿದರೆ, ಈ ರಾಜಕೀಯ ಪಕ್ಷಗಳಿಗೆ ರಂಗೋಲಿ ಕೆಳಗೆ ತೂರುವುದು ಗೊತ್ತಿದೆ.

ಕಾಂಗ್ರೆಸ್ ಟೋಳಿ ಚುನಾವಣೆಯ ದಿನ ಬೆಳಿಗ್ಗೆ ಬಂದಿತಂತೆ. ಕಾಂಗ್ರೆಸ್‌ನವರು ಇದರಲ್ಲೂ ಲೇಟು ಅಂತ 'ಆಪರೇಷನ್ ಕಮಲ'ದಲ್ಲಿ ನಿಷ್ಣಾತವಾದ ಕಮಲ ಕಾರ್ಯಕರ್ತರು ಕಾಂಗ್ರೆಸಿಗರನ್ನು ಗೇಲಿ ಬೇಕಾದರೂ ಮಾಡಬಹುದು. ಅವರು ಜನತಾದಳದವರನ್ನೂ ಗೇಲಿ ಮಾಡಬಹುದು. ಏಕೆಂದರೆ ಅವರು ಓಟು ಕೇಳುವುದಕ್ಕೂ ಬಂದಿಲ್ಲವಂತೆ. ಯಾಕೆ ಅಂತ ನೀವು ಅವರನ್ನೇ ಕೇಳಬೇಕು.




★

### ಗುಪ್ತಚರ ಇಲಾಖೆಯ ಅದ್ಭುತ ಬಳಕೆ

ನಮ್ಮಲ್ಲಿ ಗುಪ್ತಚರ ಇಲಾಖೆ ಎಂಬುದೊಂದಿದೆ. ಒಂದು ಸರ್ಕಾರ ಜನಪರವಾಗಿ ಚಿಂತಿಸುವುದಿದ್ದರೆ ಸಮಾಜದ ನೆಮ್ಮದಿ ಕೆಡಿಸುವ ಬೆಳವಣಿಗೆಗಳು ಏನಾದರೂ ಸಂಭವಿಸುವ ಸಾಧ್ಯತೆ ಇದೆಯಾ ಅಂತ ಗುಪ್ತಚರ ಇಲಾಖೆಯಿಂದ ಮಾಹಿತಿ ತರಿಸಿಕೊಂಡು ಅಂತಹ ಅವಗಢ ತಪ್ಪಿಸಲು ಪ್ರಯತ್ನ ಮಾಡಬಹುದು. ಉದಾಹರಣೆಗೆ ಕೋಮು ಗಲಭೆಗಳು, ಇಲ್ಲ ಜಾತಿ ಗಲಭೆಗಳು, ಅಥವಾ ಭಯೋತ್ಪಾದಕ ಧಾಳಿ ಇತ್ಯಾದಿಗಳ ಕುರಿತು.

ನಮ್ಮ ಯಡಿಯೂರಪ್ಪನವರ ಆಡಳಿತದ ಸೊಗಸು ನೋಡಿ. ಗುಪ್ತಚರ ವ್ಯವಸ್ಥೆ ಇಲ್ಲಿ ಎಷ್ಟು ಸಮರ್ಥವಾಗಿ ಬಳಕೆಯಾಗಿದೆ. ಚುನಾವಣೆಗೆ ಮುಂಚೆ ರಾಜ್ಯದ ಬಿಜೆಪಿಯಲ್ಲಿ ಮತ್ತೊಮ್ಮೆ ಬಂಡಾಯ ಸಿಡಿದು ಮತ್ತೊಂದು ಸುತ್ತಿನ ಭಿನ್ನಮತದ ಅಲೆ ಎದ್ದಿತಲ್ಲವೇ ? ಆಗ ಯಡಿಯೂರಪ್ಪ ಆಶ್ರಯಿಸಿದ್ದು ಇದೇ ಗುಪ್ತಚರ ಇಲಾಖೆಯನ್ನ.ತನ್ನದೇ ಪಕ್ಷದ ಯಾವ ಯಾವ ಮುಖಂಡರು ಯಾವ ಯಾವ ಎಲ್ಲೆಲ್ಲಿದ್ದಾರೆ. ಯಾವ ಭಿನ್ನಮತೀಯ ಮುಖಂಡರುಗಳು ಎಲ್ಲಿ ಸೇರುತ್ತಾರೆ. ಯಾರ ಚಲನವಲನಗಳೇನು ? ವರದಿ ಕೊಡಿ ಅಂತ ಗುಪ್ತಚರ ಇಲಾಖೆಗೆ ಮೌಖಿಕ ಆದೇಶವಂತೆ. ಚುನಾವಣೆಗಳು ಮುಗಿದು ಹೋದ ಮೇಲೆ ಈಗ ಮತ್ತೆ ಭಿನ್ನಮತದ ರಾಗಾಲಾಪನೆ ಆರಂಭವಾಗಿದೆ. ಅಂದ ಮೇಲೆ ಯಡಿಯರಪ್ಪನವರು ಬಿಡುತ್ತಾರೆಯೆ?

○

# ಕೇರಳದಲ್ಲಿ ಇಲ್ಲದ ಆಡಳಿತ ವಿರೋಧಿ ಅಲೆ

ಪುಟ 9ರಿಂದ

ಸೂಕ್ಷ್ಮವಾಗಿ ಗಮನಿಸುತ್ತಿದೆ ಅಲ್ಲದೆ ಅತ್ಯಂತ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡಿದೆ. 50 ಕೋಟಿ ಹಣ ಹಾಗೂ ವಸ್ತುಗಳನ್ನು ರಾಜ್ಯದ ವಿವಿಧ ಕಡೆಗಳಲ್ಲಿ ಚುನಾವಣಾ ಆಯೋಗ ವಶಪಡಿಸಿಕೊಂಡಿದೆ. ತಿರುಚಿಯಲ್ಲಿ ಬಸ್ ಮೇಲ್ಛಾವಣಿಯಲ್ಲಿ ಮೂಟೆಗಳಲ್ಲಿ ಕಟ್ಟಿ ಸಾಗಿಸುತ್ತಿದ್ದ 5.1 ಕೋಟಿ ರೂಪಾಯಿ ವಶಪಡಿಸಿಕೊಳ್ಳಲಾಗಿದೆ. ಆಯೋಗ ವಶಪಡಿಸಿಕೊಂಡಿರುವ ಹಣದ ಪ್ರಮಾಣ ಐಸ್‌ಬರ್ಗ್ ಮಹಾ ಪರ್ವತದ ಸಣ್ಣ ತುದಿಯಷ್ಟೇ ಆಗಿದೆ. ನಗರ ಪ್ರದೇಶದಲ್ಲಿ ಪ್ರತಿ ಮತಕ್ಕೆ 500 ರಿಂದ 1000 ರೂಪಾಯಿವರೆಗೆ ಹಂಚಲಾಗುತ್ತಿದೆ, ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಓಟಿಗೆ 500 ರೂಪಾಯಿವರೆಗೂ ನೀಡಲಾಗುತ್ತಿದೆ.

ಇಷ್ಟಾದರೂ ಪ್ರಚಾರ ಕಾಲದಲ್ಲಿ ಯಾರಾದರೂ ಕೂಡ ಜನರ ಮನಸ್ಥಿತಿಯನ್ನು ಗ್ರಹಿಸುವುದು ಸಾಧ್ಯವಿತ್ತು. ಯಾವ ಪ್ರಮಾಣದ ಹಣವೂ ಈ ಬಾರಿಯ ಫಲಿತಾಂಶವನ್ನು ಬದಲಿಸಲು ಸಮರ್ಥವಾಗಲಾರದು.

ಡಿ.ಎಂ.ಕೆ. ಪಕ್ಷವು ದೇಶದ ಪ್ರಪ್ರಥಮವಾದ ಪ್ರಾದೇಶಿಕ ಪಕ್ಷವಾಗಿದೆ. ಈ ಪಕ್ಷಕ್ಕೆ ಒಂದು ಕಾಲದಲ್ಲಿ ಸಾಮಾಜಿಕ ನ್ಯಾಯ ಆಧಾರಿತವಾದ ವೇದಿಕೆಯಿಂದ ಗಳಿಸಿಕೊಂಡ ಬಲವಾದ ಸಾಮೂಹಿಕ ನೆಲೆ ಮತ್ತು ಸಂಘಟನಾ ಸ್ವರೂಪವಿತ್ತು. ಒಕ್ಕೂಟ ತತ್ವ ಮತ್ತು ಅದರ ಆಧಾರದ ಮೇಲಿನ ಕೇಂದ-ರಾಜ್ಯ ಸಂಬಂಧಗಳಿಗಾಗಿ ಸತತವಾಗಿ ಹೋರಾಟ ನಡೆಸಿದ ಪಕ್ಷಗಳಲ್ಲಿ ಡಿ.ಎಂ.ಕೆ.ಯೂ ಒಂದಾಗಿತ್ತು. ಅಂಥ ಒಂದು ಪಕ್ಷವು ಇದೀಗ ಚಮಚಾ ಬಂಡವಾಳಶಾಹಿಯೊಂದಿಗೆ ಸಂಪೂರ್ಣವಾಗಿ ಕೈ ಜೋಡಿಸಿರುವ ಕುಟುಂಬವೊಂದರ ಖಾಸಗಿ ಉದ್ದಿಮೆಯಂತಾಗಿರುವ-ಅತ್ಯಂತ ಹತಾಶೆಯಿಂದ ಚುನಾವಣಾ ವ್ಯವಸ್ಥೆಯೊಳಗೆ ಹಣಬಲದ ವಿಜೃಂಭಣೆಗೆ ಯತ್ನಿಸುತ್ತಿರುವ ನೈತಿಕ ಅಧಃಪತನವನ್ನು ನೋಡಬೇಕಾದ ದುರಂತ ಬಂದೊದಗಿದೆ.

ಡಿ.ಎಂ.ಕೆ. ಪಕ್ಷವನ್ನು ಜನತೆ ಈ ಚುನಾವಣೆಯಲ್ಲಿ ಕಿತ್ತೊಗೆದರೆ ಆ ಪಕ್ಷ ಅದಕ್ಕೆ ಅರ್ಹವಾಗಿಯೇ ಇದೆ. ಈ ಭ್ರಷ್ಟಾಚಾರದಲ್ಲಿ ಪಾಲುದಾರನಾಗಿ ಕಾಣುತ್ತಿರುವ ಕಾಂಗ್ರೆಸ್ ಪಕ್ಷ ಅತ್ಯಂತ ಹೀನಾಯ ಸೋಲು ಕಾಣಲಿದೆ.

○

# ಗಣಿ ಲೂಟಿ : ಉತ್ತರವಿಲ್ಲದ ಅಧಿಕಾರಿ ನೌಕರರಿಗೆ ರಾಜ್ಯ ಸರ್ಕಾರದ ರಕ್ಷಣೆ

ಕರ್ನಾಟಕದ ಗಣಿ ಸಂಪತ್ತು ಬಲು ಸಮೃದ್ಧ. ತೋಡಿ ತೆಗೆದಷ್ಟು ಸಿಗುವಂಥದ್ದು. (ಎಷ್ಟು ದಿನ ಅಂತ ಕೇಳಬೇಡಿ) ಹಾಗೆ ಈ ಇಲ್ಲಿನ ಗಣಿ ಲೋಕದ ಹಗರಣಗಳೂ ಕೂಡ. ಅಗೆದಷ್ಟು, ಬಗೆದಷ್ಟು ಹಗರಣಗಳ ಹೊರಣ ಹೊರಬೀಳುತ್ತಲೇ ಇದೆ.

ಇಲ್ಲಿನ ಈ ಮಾಹಿತಿ ನೋಡಿ. ಇದು ಏಪ್ರಿಲ್ ಎರಡನೇ ವಾರದ ಪರಿಸ್ಥಿತಿ. ಕರ್ನಾಟಕ ಗಣಿ ಅಕ್ರಮಗಳ ಬಗೆಗೆ ಈಗ ಸುಪ್ರೀಂಕೋರ್ಟ್‌ನ ಉನ್ನತಾಧಿಕಾರಿಗಳ ಸಮಿತಿ, ಸಿಬಿಐ ತನಿಖೆ, ಲೋಕಾಯುಕ್ತ ತನಿಖೆಗಳು ನಡೆಯುತ್ತಿವೆ. ಈ ಸಂಬಂಧವಾಗಿ ತನಿಖಾಧಿಕಾರಿಗಳು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಭೇಟಿ ನೀಡಿ, ಗಣಿಗಾರಿಕೆ ಸಂಬಂಧಿಸಿದ ಮಾಹಿತಿ, ವಿವರ, ದಾಖಲೆ ಕೇಳಿದರೆ ಕೊಡಬೇಕಾದವರು ಯಾರು? ಗಣಿ ಇಲಾಖೆಯ ಅಧಿಕಾರಿಗಳು ನೌಕರರು ಅಲ್ಲವೇ?

ಕರ್ನಾಟಕ ರಾಜ್ಯ ಘನ ಸರ್ಕಾರದಿಂದ ಬಳ್ಳಾರಿ ಜಿಲ್ಲೆಯ ಗಣಿ ಇಲಾಖೆಯ ವಿವಿಧ ಅಧಿಕಾರಿಗಳು ಹಾಗೂ ನೌಕರರನ್ನು ನೆರೆಹೊರೆಯ ಬೇರೆ ಬೇರೆ ಜಿಲ್ಲೆಗೆ ಓ.ಓ.ಡಿ. ಕಳಿಸಲಾಗಿದೆ. ಅದೂ ವಿವಿಧ ತನಿಖಾಧಿಕಾರಿಗಳ ತಂಡಗಳು ಭೇಟಿ ನೀಡಬಹುದಾದ ಹೊತ್ತಿಗೆ ಸರಿಯಾಗಿ. ಓ.ಓ.ಡಿ. ಅಂದರೆ ಅನ್ಯ ಕಾರ್ಯನಿಮಿತ್ತ ಅಂತ. ಏನು ಅಂಥಾ ಅನ್ಯ ಘನ ಕಾರ್ಯ!!

32 ಸಿಬ್ಬಂದಿಯ ಪೈಕಿ 20 ನೌಕರರನ್ನು ಹಾಗೂ ಇಲಾಖೆಯ ಹೊಸಪೇಟೆ ಉಪನಿರ್ದೇಶಕರು ಮುಂತಾದವರನ್ನೂ ಬೇರೆಡೆ ಕಳಿಸಲಾಗಿದೆ. ಮಾರ್ಚ್ 26,27 ರಂದು ಸುಪ್ರೀಂಕೋರ್ಟ್‌ನ ಸಿಇಸಿ ತಂಡ ಹೊಸಪೇಟೆ, ಸಂಡೂರಿಗೆ, ಭೇಟಿ ನೀಡಲಿದೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಒಂದು ವಾರ ಮೊದಲೇ ಈ ಓಓಡಿ ಕಳಿಸುವ ಕೆಲಸ ನಡೆದಿದೆ.

ತನಿಖಾ ತಂಡಗಳು ಕೇಳುವ ಎಲ್ಲ ಪ್ರಶ್ನೆಗಳಿಗೆ ಉತ್ತರವೆಲ್ಲಿದೆ? ದಾಖಲೆ ತೋರಿಸುವುದು ಹೇಗೆ? ಈ ಸಂಕಟದಿಂದ ಅಧಿಕಾರಿ ನೌಕರರ ವರ್ಗವನ್ನು ಕಾಪಾಡುವ ಕರ್ತವ್ಯ ಪಾಪ ಸರ್ಕಾರಕ್ಕೆ ಇದೆಯಲ್ಲವೇ? ಯಡಿಯೂರಪ್ಪನವರ ಸರ್ಕಾರ ಅದನ್ನೇ ಮಾಡಿದೆ. ಅಳಿದುಳಿದ ಮತ್ತು ಹೊಸದಾಗಿ ಆ ಜಾಗಗಳಿಗೆ ಬಂದ ನೌಕರರು ಯಾವ ದಾಖಲೆ ಎಲ್ಲಿದೆ ಎಂದು ಸಿಗದೆ, ಗೊತ್ತಾಗದೇ ಪರದಾಡುತ್ತಿದ್ದರಂತೆ. ಅದೇ ಅಲ್ಲವೇ ಬಿಜೆಪಿ ದರ್ಬಾರ್‌ಗೆ ಬೇಕಿರುವುದು.

○

## ಜಗದಗಲ

ಶರತ್‌ಚಂದ್ರ

# ಪೆರು : ಎಡ ಅಭ್ಯರ್ಥಿಗೆ ಮೊದಲ ಸುತ್ತಿನ ವಿಜಯ

ಎಡ ಅಧ್ಯಕ್ಷರುಗಳು ಮತ್ತು ಸರ್ಕಾರಗಳನ್ನು ಚುನಾಯಿಸುವ ಅಲೆ ಇರುವ ಲ್ಯಾಟಿನ್ ಅಮೆರಿಕದಲ್ಲಿ, ಕೆಲವೇ ದೇಶಗಳಿಗೆ ಈ ಅಲೆ ತಟ್ಟಿರಲಿಲ್ಲ. ಪೆರು ಅವುಗಳಲ್ಲಿ ಒಂದು. ಎಡ ಅಲೆ ಈಗ ಪೆರುವನ್ನೂ ಮುಟ್ಟಿದೆ. ಅಲ್ಲಿನ ನೆಲದಲ್ಲಿ ಗಟ್ಟಿಯಾಗಿ ನೆಲೆ ಊರುವ ಸೂಚನೆ ಕೊಟ್ಟಿದೆ. ಎಪ್ರಿಲ್ 10 ರಂದು ನಡೆದ ಅಧ್ಯಕ್ಷೀಯ ಚುನಾವಣೆಗಳಲ್ಲಿ ಎಡ ಪಂಥೀಯ ಅಭ್ಯರ್ಥಿ ಒಲ್ಲಾಂಟಾ ಹುಮಲ ಮೊದಲ ಸುತ್ತಿನಲ್ಲಿ ಶೇ. 30 ಮತ ಪಡೆದು ಜಯ ಗಳಿಸಿದ್ದಾರೆ. ಶೇ. 23 ಮತ ಗಳಿಸಿ ಎರಡನೇ ಸ್ಥಾನ ಪಡೆದ ಕೆಕೋ ಫುಜಿಮುರಿ ಮತ್ತು ಹುಮಲ ಜೂನ್ 5 ರಂದು ನಡೆಯುವ ಎರಡನೇ ಸುತ್ತಿನಲ್ಲಿ ಅಭ್ಯರ್ಥಿಗಳಾಗಿರುತ್ತಾರೆ. ಯಾವುದೇ ಅಭ್ಯರ್ಥಿಗೆ ಶೇ. 50 ಕ್ಕಿಂತ ಹೆಚ್ಚು ಮತ ಸಿಗದಿದ್ದರೆ, ಮತ ಗಳಿಕೆಯಲ್ಲಿ ಮೊದಲ ಎರಡು ಸ್ಥಾನ ಪಡೆದ ಅಭ್ಯರ್ಥಿಗಳ ನಡುವೆ ಇನ್ನೊಮ್ಮೆ ಸ್ಪರ್ಧೆ ಇರುತ್ತದೆ. ಹುಮಲ ಎರಡನೇ ಸುತ್ತಿನಲ್ಲಿ ಜಯ ಗಳಿಸುವ ಹೆಚ್ಚಿನ ಸಾಧ್ಯತೆ ಇದೆ ಎನ್ನಲಾಗಿದೆ. ಹುಮಲ ಅವರ ಪಕ್ಷ ಪಾರ್ಲಿಮೆಂಟಿನಲ್ಲಿ ಬಹುಮತ ಪಡೆಯದಿದ್ದರೂ, 130 ಸೀಟುಗಳಲ್ಲಿ 46 ಸಿಟು ಗಳಿಸಿ ಅತೀ ದೊಡ್ಡ ಪಕ್ಷವಾಗಿದೆ.



ಎಡ ಅಭ್ಯರ್ಥಿ ಹುಮಲ ಮಾಜಿ ಮಿಲಿಟರಿ ಅಧಿಕಾರಿ ಆಗಿದ್ದು, 1990-2000 ಅವಧಿಯಲ್ಲಿ ಆಳಿದ ಕುಖ್ಯಾತ ಅಧ್ಯಕ್ಷ ಫುಜಿಮೊರಿ ಆಡಳಿತದ ವಿರುದ್ಧ ಬಂಡೆದ್ದಿದ್ದರು. ಅಧ್ಯಕ್ಷ ಫುಜಿಮೊರಿ ಆಡಳಿತ ತೀವ್ರ ಭ್ರಷ್ಟಾಚಾರ ಮತ್ತು ಹಲವು ನರಮೇಧಗಳ ಮಾನವ ಹಕ್ಕುಗಳ ದಮನಕ್ಕೆ ಕುಖ್ಯಾತಿ ಪಡೆದಿತ್ತು. ಆ ಬಗ್ಗೆ ತೀವ್ರ ಜನಾಂದೋಲನ ನಡೆದು ಅವರನ್ನು ಜೈಲಿಗೆ ಹಾಕಲಾಯಿತು. ಈಗ 25 ವರ್ಷದ ಜೈಲು ವಾಸ ಅನುಭವಿಸುತ್ತಿದ್ದಾರೆ. ಎರಡನೇ ಸ್ಥಾನ ಪಡೆದ ಕೆಕೋ ಅವರ ಮಗಳು. 2006 ರಲ್ಲಿ ನಡೆದ ಕಳೆದ ಚುನಾವಣೆಯಲ್ಲಿ ಸಹ ಹುಮಲ ಮೊದಲ ಸುತ್ತಿನಲ್ಲಿ ಶೇ. 26 ಮತ ಪಡೆದು ಜಯ ಗಳಿಸಿದ್ದರು. ಈ ಬಾರಿ ಅವರ ಮೊದಲ ಸುತ್ತಿನ ಜಯ ಗಳಿಕೆ ಹೆಚ್ಚಿದೆ ಎಂಬುದು ಗಮನಾರ್ಹ. ಆದರೆ ಎರಡನೇ ಸುತ್ತಿನಲ್ಲಿ ಸ್ವಲ್ಪ ಮತಗಳ ಅಂತರದಿಂದ ಸೋತಿದ್ದರು.

ಹುಮಲ ವೆನೆಜುವೇಲಾ ಅಧ್ಯಕ್ಷ ಚವೇಜ್ ಅವರ ಶಿಷ್ಯರು, ಅನುಯಾಯಿ. ಅವರ ಬಗ್ಗೆ ಹುಷಾರಾಗಿರಬೇಕು ಎಂದು ಅವರ ವಿರಜ್ಜ ಅಮೆರಿಕನ್ ಮತ್ತು ಸ್ಥಳೀಯ ಮಾಧ್ಯಮಗಳು ಹರಿಯ ಬಿಟ್ಟ ತೀಕ್ಷ್ಣ ಅಪಪ್ರಚಾರ ಮೊದಲ ಸುತ್ತಿನಲ್ಲಿ ಹೆಚ್ಚಿನ ಪರಿಣಾಮ ಬೀರಿಲ್ಲ. ಎರಡನೇ ಸುತ್ತಿನಲ್ಲಿ ಎಷ್ಟರ ಮಟ್ಟಿಗೆ ಪರಿಣಾಮ ಬೀರುತ್ತದೆ ಎಂದು ಕಾದು ನೋಡಬೇಕಾಗಿದೆ. ಐಎಂಎಫ್ ಅಣತಿಯನ್ನು ಚಾಚೂ ಪಾಲಿಸುವ ಪೆರು ಸರ್ಕಾರಗಳು ಸಾಮಾಜಿಕ ವೆಚ್ಚಗಳಲ್ಲಿ ತೀವ್ರ ಕಡಿತ ಮಾಡಿವೆ. 1990 ರ ದಶಕದಲ್ಲಿ ಶೇ. 37 ರಷ್ಟು ಇದ್ದ ಸಾಮಾಜಿಕ ವೆಚ್ಚವನ್ನು 2010 ರ ಹೊತ್ತಿಗೆ ಶೆ. 27 ಕ್ಕೆ ಇಳಿಸಲಾಗಿದೆ. ಅದನ್ನು ಪುನಃ ಹೆಚ್ಚಿಸಬೇಕು. ಅದಕ್ಕೆ ದೊಡ್ಡ (ವಿದೇಶೀ) ಕಂಪನಿಗಳಿಗೆ ನೀಡಿರುವ ತೆರಿಗೆ ವಿನಾಯಿತಿಗಳನ್ನು ರದ್ದು ಮಾಡಿ ತೆರಿಗೆ ಸಂಗ್ರಹ ಮಾಡಬೇಕು. ಇದು ಬಡ ಜನತೆಯ ಒತ್ತಾಯ.

ಅದನ್ನು ಬೆಂಬಲಿಸುವ ಏಕಮಾತ್ರ ಅಭ್ಯರ್ಥಿ ಹುಮಲ. ಅವರಿಗೆ ದಕ್ಷಿಣದ ಬಡ ಪ್ರದೇಶಗಳಲ್ಲಿ ಮೊದಲ ಸುತ್ತಿನಲ್ಲೇ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಮಾಧ್ಯಮಗಳ ಭಾರೀ ಅಪಪ್ರಚಾರ ಮತ್ತು ಮಧ್ಯಮ ವರ್ಗಗಳ ಬೆಂಬಲ ಕಳೆದು ಕೊಳ್ಳುವ ಭಯದಿಂದ ಹುಮಲ ಪೂರ್ಣ ಎಡ ಕಾರ್ಯಕ್ರಮ ಮಂಡಿಸಿಲ್ಲ. ಆದರೆ ಅವರ ಒಲವು ಏನು ಎಂದು ಮತದಾರರಿಗೆ ಗೊತ್ತು. ಕೆಕೋ ಅದನ್ನು ನಿರಾಕರಿಸಿದ್ದರೂ, ಆರಿಸಿ ಬಂದರೆ ತಂದೆ ಫುಜಿಮೊರಿಯ ಬಿಡುಗಡೆ ಆಕೆಯ ಒಂದಂಶದ ಕಾರ್ಯಕ್ರಮ ಎಂಬುದೂ ಮತದಾರರಿಗೆ ಗೊತ್ತು. ಮೊದಲ ಸುತ್ತಿನಲ್ಲಿ ಇತರ ಬಲಪಂಥೀಯ ಅಭ್ಯರ್ಥಿಗಳು ತೀವ್ರ ಭ್ರಷ್ಟಾಚಾರದ ಆಪಾದನೆಗೆ ಗುರಿಯಾದವರಾದ್ದರಿಂದ ಕೆಕೋ ಹೆಚ್ಚಿನ ಮತ ಗಳಿಸಿದ್ದರು. ಪೆರುವಿನಲ್ಲೂ ಐಎಂಎಫ್ ಅಣತಿ ಧಿಕ್ಕರಿಸುವ ಅಧ್ಯಕ್ಷರ ಆಯ್ಕೆಯ ಅವಕಾಶವನ್ನು ಮತದಾರ ಈ ಬಾರಿ ಬಿಟ್ಟು ಕೊಡಲ್ಲ ಎಂದು ನಿರೀಕ್ಷಿಸಬಹುದು.

# ಅಮೆರಿಕ ಸರ್ಕಾರ 'ಬಂದ್' ಬೆದರಿಕೆ - ರಿಪಬ್ಲಿಕನ್ ಬ್ಲಾಕ್ ಮೇಲ್

ಕಳೆದ ವಾರ ಅಮೆರಿಕ ಸರ್ಕಾರ "ಬಂದ್" ಆಗುವ ಹಂತ ತಲುಪಿತ್ತು. ರಿಪಬ್ಲಿಕನ್/ಟೀ ಪಾರ್ಟಿ ಬಹುಮತ ಇರುವ ಪಾರ್ಲಿಮೆಂಟ್ ಸದನದ ಅಸಹಕಾರದಿಂದ ಸರ್ಕಾರದ ವಾರ್ಷಿಕ ವೆಚ್ಚದ ಬಜೆಟ್ ಮಂಜೂರು ಆಗಿರಲಿಲ್ಲ. ಬಜೆಟ್ ಮಂಜೂರು ಆಗದೆ ಸರ್ಕಾರ ಯಾವುದೇ ಖರ್ಚು ಮಾಡುವಂತಿಲ್ಲ. ಇದು ಆಗದೆ ಸರ್ಕಾರದ 8 ಲಕ್ಷ ನೌಕರರಿಗೆ ಸಂಬಳ ಕೊಡುವಂತಿಲ್ಲ. ಪಿಂಚಣಿ, ಆರೋಗ್ಯ ಸೇವೆ, ಆಹಾರ ಪೂರೈಕೆ, ನಿರುದ್ಯೋಗ ಭತ್ಯ ಮತ್ತು ಸರ್ಕಾರ ನಡೆಸುವ ಹಲವಾರು ಸಾಮಾಜಿಕ ಕಲ್ಯಾಣ ಸೇವೆಗಳಿಗೆ ಸರ್ಕಾರ ವೆಚ್ಚ ಮಾಡುವಂತಿಲ್ಲ. ಇದು ಸರ್ಕಾರಕ್ಕೆ ಬೀಗ ಹಾಕಿದಂತೆ. ರಿಪಬ್ಲಿಕನ್/ಟೀ ಪಾರ್ಟಿ ಅಧ್ಯಕ್ಷ ಒಬಾಮಾ ಮತ್ತು ಡೆಮೊಕ್ರಾಟಿಕ್ ಪಕ್ಷದ ಮೇಲೆ ಕೆಲವು ಆರ್ಥಿಕ ನೀತಿಗಳ ಜಾರಿ ಬಗ್ಗೆ ಬ್ಲಾಕ್ ಮೇಲ್ ಮಾಡುತ್ತಿತ್ತು. ಬಡ ಮತ್ತು ಮಧ್ಯಮ ವರ್ಗಗಳಿಗೆ ಪರಿಹಾರ ನೀಡುವ ಮತ್ತು ಆರ್ಥಿಕಕ್ಕೆ ಅಗತ್ಯ ಸೇವೆ ನೀಡುವ ಹಲವು ಕಾರ್ಯಕ್ರಮಗಳ ಕಡಿತ ಅವರ ಒತ್ತಾಯ ಆಗಿತ್ತು. ಕಡಿತದ ಒಟ್ಟು ಮೊತ್ತ 61 ಶತಕೋಟಿ ಡಾಲರು ಆಗಿತ್ತು.

ಪುಟ 15 ಕ್ಕೆ

## ಇದು ನಿಮಗೆ ಗೊತ್ತೆ?

ಸೋವಿಯೆಟ್ ಒಕ್ಕೂಟ ಬಾಹ್ಯಾಕಾಶ ತಂತ್ರಜ್ಞಾನವನ್ನು ಆರಂಭಿಸಿದ್ದು ಮಾತ್ರವಲ್ಲ, ಅದರಲ್ಲಿ ಸತತವಾಗಿ ಅದು ಅಸ್ತಿತ್ವದಲ್ಲಿ ಇರುವ ವರೆಗೆ ಮುನ್ನಡೆ ಸಾಧಿಸಿತ್ತು. ಅಮೆರಿಕಕ್ಕಿಂತ ಮುಂದಿತ್ತು. ಬಾಹ್ಯಾಕಾಶ ತಂತ್ರಜ್ಞಾನದ 32 ಪ್ರಥಮಗಳನ್ನು ಪಡೆದ ಹೆಗ್ಗಳಿಕೆ ಸೋವಿಯೆಟ್ ಒಕ್ಕೂಟದ್ದಾಗಿತ್ತು. ಬಾಹ್ಯಾಹಾಶದಲ್ಲಿ ಮೊದಲ - ಪ್ರಾಣಿ, ಮಾನವ, ಮಹಿಳೆ, ಗ್ರಹ ಸ್ಪರ್ಶ (ಚಂದ್ರ, ಮಂಗಳ, ಶುಕ್ರ), ನಡಿಗೆ, ಸ್ಪೇಸ್ ಸ್ಟೇಶನ್, ಅತಿ ದೀರ್ಘ ಸಮಯ ಕಳೆದದ್ದು -ಇತ್ಯಾದಿ ಆ ಪ್ರಥಮಗಳ ಉದಾಹರಣೆಗಳು. ಅಮೆರಿಕ ಕೆಲವೇ ಪ್ರಥಮಗಳನ್ನು - ಚಂದ್ರನಲ್ಲಿ ಮಾನವ ಇಳಿದದ್ದು, ಮೊದಲ ಬಾಹ್ಯಾಕಾಶ ಟೆಲಿಸ್ಕೋಪು ಇತ್ಯಾದಿ - ಮಾತ್ರ ಪಡೆಯಿತು.

# ಬಾಹ್ಯಾಕಾಶದಲ್ಲಿ ಮಾನವ - ಸುವರ್ಣ ಉತ್ಸವ

ಬಾಹ್ಯಾಕಾಶಕ್ಕೆ ಮಾನವನ ಮೊದಲ ಪ್ರವೇಶದ ಸುವರ್ಣ ಉತ್ಸವವನ್ನು ರಶ್ಯಾದಲ್ಲಿ ಉತ್ಸಾಹದಿಂದ ಆಚರಿಸಲಾಯಿತು. 1961 ರಲ್ಲಿ ಯೂರಿ ಗಗಾರಿನ್ ವೊಸ್ಟೋಕ್ 1 ಗಗನನೌಕೆ ಬಳಸಿ ಬಾಹ್ಯಾಕಾಶ ಪ್ರವೇಶಿಸಿದ ಮೊದಲ ಮಾನವನಾದ ವಿಕ್ರಮ ಸ್ಥಾಪಿಸಿದ್ದ. ಒಬ್ಬ ಬಡಗಿಯ ಮಗನಾಗಿದ್ದ 27 ವರ್ಷದ ಗಗಾರಿನ್ ಈ ವಿಕ್ರಮ ಸ್ಥಾಪಿಸಿ, ಸೋವಿಯೆತ್ ಒಕ್ಕೂಟದಲ್ಲಿ ಮಾತ್ರವಲ್ಲ ವಿಶ್ವ ವಿಖ್ಯಾತ ಹೀರೋ ಆದ. ಇದು ಆಗಿನ ಸೋವಿಯೆಟ್ ಒಕ್ಕೂಟ ಬಾಹ್ಯಾಹಾಶ ತಂತ್ರಜ್ಞಾನದ ಹರಿಕಾರರಾದ ಅದ್ಭುತ ಗಾಥೆಯ ಒಂದು ಸುವರ್ಣ ಅಧ್ಯಾಯ. ಅದಕ್ಕಿಂತ ಮೊದಲು ಹಲವು ಬಾಹ್ಯಾಹಾಶ ತಂತ್ರಜ್ಞಾನದ ಪ್ರಥಮಗಳನ್ನು ಗೆದ್ದಿತ್ತು. ಆ ಮೇಲೂ (ಚಂದ್ರನ ಮೇಲೆ ಮಾನವ ಹೆಜ್ಜೆ ಇಟ್ಟದ್ದು ಬಿಟ್ಟರೆ) ಬಹು ಪಾಲು ಎಲ್ಲಾ ಬಾಹ್ಯಾಹಾಶದ ವಿಸ್ಮಯಗಳಲ್ಲಿ ಸೋವಿಯೆಟ್ ಒಕ್ಕೂಟ ಪ್ರಥಮ ಸಾಧಿಸಿತ್ತು.

ಮೊದಲ ಉಪಗ್ರಹ ಸ್ಪುಟ್ನಿಕ್ (1957), ಅಂತರ-ಖಂಡ ಕ್ಷಿಪಣಿ (1957), ದೂರ ನಿಯಂತ್ರಣ (1957), ಚಂದ್ರನನ್ನು ದಾಟಿ ಸೂರ್ಯನ ಸುತ್ತ ಪಥ ಪ್ರವೇಶಿಸಿದ್ದು (ಲೂನಾ 1-1957), ಚಂದ್ರನ ಕತ್ತಲ ಭಾಗದ ಚಿತ್ರ ತೆಗೆದದ್ದು (ಲೂನಾ 3-1957), ಚಂದ್ರನ ಮೇಲ್ಮೆ ಮುಟ್ಟಿದ್ದು (ಲೂನಾ 3 -1959), ಎರಡು ನಾಯಿಗಳು ಬಾಹ್ಯಾಕಾಶದಲ್ಲಿ (ಸ್ಪುಟ್ನಿಕ್ 5 -1960),



ಮಂಗಳ ಮೇಲ್ಮೆ ಮುಟ್ಟಿದ್ದು (ಮಾರ್ಸನಿಕ್ -1960), ಶುಕ್ರ ಮೇಲ್ಮೆ ಮುಟ್ಟಿದ್ದು (ವೆನೆರಾ -1961) - ಮುಂತಾದ ಹಲವು ಪ್ರಥಮಗಳ ನಂತರ ಬಂದ ಗಗಾರಿನ್ ಯಶಸ್ಸು ಜಗತ್ತನ್ನು ರೋಮಾಂಚನಗೊಳಿಸಿತ್ತು.

ರಶ್ಯಾದಲ್ಲಿ ಈ ಸುವರ್ಣ ಉತ್ಸವ ಉತ್ಸಾಹ ಮಾತ್ರವಲ್ಲ, ನಾಗರಿಕರಲ್ಲಿ ಸೋವಿಯೆಟ್ ಒಕ್ಕೂಟದ ಗತ ವೈಭವದ ಬಗ್ಗೆ ಸವಿ ನೆನಪು ಮತ್ತು ಈಗಿನ ಸ್ಥಿತಿ ಬಗ್ಗೆ ನಿಟ್ಟುಸಿರು ಸಹ ಮೂಡಿಸಿತು ಎಂದು ವರದಿಯಾಗಿದೆ. ಇಂತಹ ಪ್ರಮುಖ ಸುವರ್ಣ ಉತ್ಸವಕ್ಕೆ ಭಾರತ ಸೇರಿದಂತೆ ಜಗತ್ತಿನಾದ್ಯಂತ ಕಂಡು ಬಂದ ಅತೀವ ನಿರ್ಲಕ್ಷ, ಜಗತ್ತಿನಾದ್ಯಂತ ಜನ ಮಾನಸದ ಮತ್ತು ಮಾಧ್ಯಮಗಳ ಮೇಲೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಹಿಡಿತವನ್ನು ತೋರಿಸುವಂತಿತ್ತು. 2009 ರಲ್ಲಿ ಚಂದ್ರನ ಮೇಲೆ ಮಾನವ ಇಳಿದ (1969) ಘಟನೆಯ 40 ನೇ ವಾರ್ಷಿಕೋತ್ಸವದಲ್ಲಿ ಕಂಡು ಬಂದ ಅಬ್ಬರದ ಒಂದು ಸಣ್ಣ ಪಾಲು ಸಹ ಗಗಾರಿನ್ ಸಾಧನೆಗೆ ಇರಲಿಲ್ಲ.

# ಪ್ರಧಾನ ಮಂತ್ರಿಗಳು...

ಪುಟ 12 ರಿಂದ

ನೀಡಲಾಗಿದೆ. ಇನ್ನೂ ಹಲವರಿಗೆ ಈ ರೀತಿ ಸಮನ್ಸ್ ಹೋಗಬಹುದು ಎನ್ನಲಾಗಿದೆ.

ಈ ನಡುವೆ, ಹಗರಣದಲ್ಲಿ ಪ್ರಮುಖವಾಗಿ ಕೇಳಬರುತ್ತಿರುವ ಇನ್ನೊಂದು ಕಂಪನಿ ಡಿಬಿ ರಿಯಲ್ಟಿಯಲ್ಲಿ ಯುಪಿಎ-2 ಕೃಷಿ ಮಂತ್ರಿ ಶರದ್ ಪವಾರ್ ಪಾಲಿದೆ, ಅವರು ಈ ಬಗ್ಗೆ ಮಾಜಿ ದೂರಸಂಪರ್ಕ ಂತ್ರಿಯೊಂದಿಗೆ ಲಾಬ್ಬಿ(ವಶೀಲಿ) ಮಾಡಿರಬಹುದು ಎಂದು ವರದಿಯಾಗಿದೆ. ಸಿಬಿಐ ತನಿಖೆಯ ವೇಳೆಗೆ ವಶೀಲಿಬಾಜಿ ಟೇಪುಗಳ 'ಖ್ಯಾತಿ'ಯ ನಿರಾ ರಾಡಿಯ ಹೇಳಿದ್ದಾರಂತೆ. ಮುಂಬೈಯಲ್ಲಿ ಮತ್ತು ಹೊರಗೂ, ಪವಾರ್ ಮತ್ತು ಅವರ ಕುಟುಂಬದ ಸದಸ್ಯರು ಡಿಬಿ ರಿಯಲ್ಟಿ ನೇರವಾಗಿಯೋ, ಪರೋಕ್ಷವಾಗಿಯೋ ಹತೋಟಿ ಪಡೆದಿದ್ದಾರೆ ಎಂಬ ಭಾವನೆ ಇದೆ ಎಂದು ಅವರು ಸಿಬಿಐ ಗೆ ಹೇಳಿದರಂತೆ.

ಕಾರ್ಪೊರೇಟ್ ವಲಯದ ವಶೀಲಿಬಾಜಿಯೇ ವೃತ್ತಿಯಾಗಿರುವ ರಾಡಿಯಾ ಟೆಲಿಫೋನ್ ಸಂಭಾಷಣೆಗಳ ಟೇಪುಗಳು ಸಾರ್ವಜನಿಕಗೊಂಡದ್ದು ಹೇಗೆ ಎಂಬ ಬಗ್ಗೆ ಯುಪಿಎ-2 ಹಣಕಾಸು ಇಲಾಖೆ ತನಿಖೆ ನಡೆಸುವಂತೆ ದೂರಸಂಪರ್ಕ ಇಲಾಖೆಗೆ ಹೇಳಿದೆಯಂತೆ. ಗಮನಿಸಿ- ಸರಕಾರದ ನೀತಿ ನಿರ್ಧಾರದಲ್ಲಿ ಹೊರಗಿನವರು ಪಾತ್ರ ವಹಿಸಲು ಹೇಗೆ ಸಾಧ್ಯವಾಯಿತು ಎಂಬ ಬಗ್ಗೆ ತನಿಖೆಯಲ್ಲ- ಏಕೆಂದರೆ ಅದು ಅವರಿಗೆ ಗೊತ್ತೇ ಇರಬೇಕು.

### ಗಡಿ ರಸ್ತೆ ನಿರ್ಮಾಣದಲ್ಲೂ ಅವ್ಯವಹಾರ

ಕೇಂದ್ರೀಯ ಜಾಗೃತಾ ಆಯೋಗ(ಸಿವಿಸಿ) ನಡೆಸಿದ ಒಂದು ತನಿಖೆಯಲ್ಲಿ ಈ ಅಂಶ ಬೆಳಕಿಗೆ ಬಂದಿದೆ. ಗಡಿ ರಸ್ತೆಗಳ ಸಂಘಟನೆ( ಬಿಆರ್‌ಒ)ದ ಪ್ರಾಜೆಕ್ಟ್ ದೀಪಕ್ ಕುರಿತಂತೆ ಸಿವಿಸಿ ಆದೇಶದಂತೆ ನಡೆಸಿದ ತನಿಖೆಯಿಂದ ಬೇರೆಡೆಗಳಂತೆ, ರಕ್ಷಣಾ ಇಲಾಖೆಯ ಅಡಿಯಲ್ಲಿರುವ ಈ ಸಂಸ್ಥೆಯಲ್ಲೂ ಟೆಂಡರುಗಳಲ್ಲಿ ಕೈಚಳಕ, ಕಾಂಟ್ರಾಕ್ಟರುಗಳ ಕೂಟಗಳು, ಗುಣಮಟ್ಟ ನಿಯಂತ್ರಣದ ಅಭಾವ ಮತ್ತು ಕಳಪೆ ಸಾಮಗ್ರಿಗಳ ಬಳಕೆ ಗಮನಾರ್ಹ ಪ್ರಮಾಣದಲ್ಲಿ ಆಗುತ್ತಿರುವುದು ಬೆಳಕಿಗೆ ಬಂದಿದೆಯಂತೆ. ಸುಮಾರು 100 ಕೋಟಿ ರೂ.ಗಳ ಅವ್ಯವಹಾರ ಗಮನಕ್ಕೆ ಬಂದಿದೆ, ವಾಸ್ತವ ಅವ್ಯವಹಾರಗಳ ಪ್ರಮಾಣ ಇನ್ನೂ ಅನೇಕ ಪಟ್ಟು ಇರಬಹುದು ಎಂದು ಹೇಳಲಾಗಿದೆ.

ಯಥಾ ಪ್ರಕಾರ, ಯುಪಿಎ-2 ಸರಕಾರ ರಕ್ಷಣಾ ರಾಜ್ಯ ಮಂತ್ರಿಗಳು ಇಂತದ್ದೇನೂ ತನ್ನ ಗಮನಕ್ಕೆ ಬಂದಿಲ್ಲ ಎಂದಿದ್ದಾರೆ. ಈತ ಗಡಿ ರಸ್ತೆ ಅಭಿವೃದ್ಧಿ ಮಂಡಳಿ(ಬಿಆರ್‌ಡಿಬಿ) ಅಧ್ಯಕ್ಷ ಕೂಡ. ಮತ್ತೆ, ಯಥಾ ಪ್ರಕಾರ, ಬಿಆರ್‌ಒಗೆ ಸ್ವಂತ ನಿರ್ಮಾಣ ಸಾಮರ್ಥ್ಯ ಇದ್ದರೂ ಅದರ ಪೂರ್ಣ ಉಪಯೋಗವಾಗುತ್ತಿಲ್ಲ, ದುರುಪಯೋಗ ಆಗುತ್ತಿದೆ; ಈಗ ಬಹಳಷ್ಟು ಕೆಲಸಗಳನ್ನು ಖಾಸಗಿ ಕಾಂಟ್ರಾಕ್ಟರುಗಳಿಗೆ ಹೊರ ಗುತ್ತಿಗೆ ನೀಡಲಾಗುತ್ತಿದೆ, ಇದರಲ್ಲಿಯೂ ತಮಗೆ ಬೇಕಾದವರಿಗೇ ಅನುಕೂಲ ಕಲ್ಪಿಸಲು ಸಿವಿಸಿಯ ಮಾರ್ಗದರ್ಶಕ ನಿಯಮಗಳನ್ನು ಉಲ್ಲಂಘಿಸಲಾಗುತ್ತಿದೆ ಎಂದು ಈ ತನಿಖೆಯಿಂದ ತಿಳಿದು ಬಂದಿದೆ.

# ಕಡಲ ತಡಿ

ಪುಟ 6 ರಿಂದ

ಪ್ರದರ್ಶನವನ್ನು ಕುಂಡಲ ಮತ್ತು ಪಿಲಾರು ಡಿವೈಎಫ್‌ಐ ಘಟಕಗಳು ಸಂಘಟಿಸಿದ್ದವು. ಕೊಲ್ಯ ನಾರಾಯಣಗುರು ಮಂದಿರದಿಂದ 200 ಮಂದಿ ಮೆರವಣಿಗೆಯಲ್ಲಿ ಸಾಗಿ ಸೋಮೇಶ್ವರ ಗ್ರಾಮ ಪಂಚಾಯಿತಿ ಎದುರು ಪ್ರದರ್ಶನ ನಡೆಸಲಾಯಿತು. ಡಿವೈಎಫ್‌ಐ ನಾಯಕರಾದ ಮುನೀರ್ ಕಾಟಪಳ್ಳಿ, ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಉಪಾಧ್ಯಕ್ಷರಾದ ಕೃಷ್ಣಪ್ಪ ಸಾಲ್ಯಾನಾ, ಉಳ್ಳಾಲ ವಲಯಾಧ್ಯಕ್ಷರಾದ ಸಂಜೀವ ಪಿಲಾರ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಡಿವೈಎಫ್‌ಐ ಉಳ್ಳಾಲ ವಲಯ ಅಧ್ಯಕ್ಷರಾದ ಮಹಾಬಲ ದೆಪ್ಪೆಲಿಮಾರ್, ಕಾರ್ಯದರ್ಶಿ ಅಶೋಕಶೆಟ್ಟಿ ಅಲ್ಲದೆ ನವೀನ್ ಕುಂಡಲ, ಸಂದೇಶ್ ಪಿಲಾರು, ಶಿವಶಂಕರ್ ಪಿಲಾರಾ, ಲೋಕೇಶ್ ಪಿಲಾರ್, ಸೌಮ್ಯ ಪಿಲಾರ್ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಸೂರಿಂಜೆ ಗ್ರಾಮ ಪಂಚಾಯಿತಿ ಮುಂಭಾಗದಲ್ಲಿ ಏಪ್ರಿಲ್ 8 ರಂದು ಡಿವೈಎಫ್‌ಐ ಮಂಗಳೂರು ನಗರ ಸಮಿತಿ ಸ್ಥಳೀಯ ಟಿಪ್ಪು ಯೂತ್ ಫೆಡರೇಷನ್ ಸಹಯೋಗದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಿತು. ಡಿವೈಎಫ್‌ಐ ನಾಯಕರಾದ ಮುನೀರ್ ಕಾಟಿಪಳ್ಳ, ಇಮ್ತಿಯಾಜ್ ಬಿ.ಕೆ. ಶ್ರೀನಾಥ್ ಕಾಟಿಪಳ್ಳ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. 125 ರಷ್ಟು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಸಂತೋಷ ಕುಳಾಯಿ, ಸಲೀಮ್ ಶ್ಯಾಡೋ, ಟಿಪ್ಪು ಯೂತ್ ಫೆಡರೇಷೆನ್ ಮುಖಂಡರಾದ ರಿಯಾಜ್ ಸೂರಿಂಜೆ, ಹಬೀಬ್ ಸೂರಿಂಜೆ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ವಾಮಂಜೂರು ವಾರ್ಡು ಮಟ್ಟದ ಸಮಾವೇಶವನ್ನು ಏಪ್ರಿಲ್ 10 ರಂದು ಹಮ್ಮಿಕ್ಕೊಳ್ಳಲಾಗಿತ್ತು. 100 ಜನ ಭಾಗವಹಿಸಿದ್ದರು. ಡಿವೈಎಫ್‌ಐ ವಾಮಂಜೂರು ಘಟಕ ಸಮಾವೇಶ ಸಂಘಟಿಸಿತ್ತು. ಡಿವೈಎಫ್‌ಐ ನಾಯಕರಾದ ಬಿ.ಕೆ.ಇಮ್ತಿಯಾಜ್, ಮನೋಜ್ ವಾಮಂಜೂರು ಅಲ್ಲದೆ ರೈತ ಮುಖಂಡರಾದ ಗಂಗಯ್ಯ ಅಮೀನ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ದಿನೇಶ್ ವಾಮಂಜೂರು, ಹೈದರ್ ವಾಮಂಜೂರು ಮತ್ತಿತರರು ಸಮಾವೇಶ ಸಂಘಟಿಸುವ ನೇತೃತ್ವ ವಹಿಸಿದ್ದರು.

ಕೊಂಚಾಡಿ ಡಿವೈಎಫ್‌ಐ ಘಟಕವು ಏಪ್ರಿಲ್ 10 ರಂದು ಏರ್ಪಡಿಸಿದ್ದ ಸಮಾವೇಶದಲ್ಲಿ 200 ರಷ್ಟು ಮಂದಿ ಭಾಗವಹಿಸಿದ್ದರು. ಸ್ಥಳೀಯ ರಾಮಾಶ್ರಯ ಶಾಲೆ ಬಳಿ ಸಭೆ ಸೇರಿಸಲಾಗಿತ್ತು. ಡಿವೈಎಫ್‌ಐ ನಾಯಕರಾದ ಮುನೀರ್ ಕಾಟಿಪಳ್ಳಿ, ಸಿಪಿಎಂ ಜಿಲ್ಲಾ ಸಮಿತಿ ಸದಸ್ಯ ಕೃಷ್ಣಪ್ಪ ಕೊಂಚಾಡಿ ಮಾತನಾಡಿದರು. ಡಿವೈಎಫ್‌ಐನ ನವೀನ ಕೊಂಚಾಡಿ ಮಾತನಾಡಿದರು. ಡಿವೈಎಫ್‌ಐನ ನವೀನ ಕೊಂಚಾಡಿ, ಸುನಂದ ಕೊಂಚಾಡಿ, ಕ್ರಿಸ್ಟೋಫರ್, ಅಶೋಕ ಕುಂಡಳಿಕೆ, ದಯಾನಂದ ಶೆಟ್ಟಿಗಾರ್, ರವಿಚಂದ್ರ ಕೆ. ಮತ್ತಿತರರು ಸಮಾವೇಶದ ನೇತೃತ್ವ ವಹಿಸಿದ್ದರು. ಇದೇ ಸಂದರ್ಭ ನಿವೇಶನರಹಿತರ ಸ್ಥಳೀಯ ಹೋರಾಟ ಸಮಿತಿಯನ್ನು ರಚಿಸಲಾಯಿತು.

ಏಪ್ರಿಲ್ 10 ರಂದು ಉರ್ವ ಸ್ಟೋರ್ಸ್ ಘಟಕ ಸುಂಕದ ಕಟ್ಟೆಯಲ್ಲಿ ನಿವೇಶನರಹಿತರ ಸಮಾವೇಶವನ್ನು ಏರ್ಪಡಿಸಿತ್ತು. 200 ಮಂದಿ ಸುಮಾರು ಸೇರಿದ್ದ ಜನರನ್ನುದ್ದೇಶಿಸಿ ಡಿವೈಎಫ್‌ಐ ನಾಯಕರಾದ ಮುನೀರ್ ಕಾಟಪಳ್ಳಿ, ಇಮ್ತಿಯಾಜ್ ಬಿ.ಕೆ. ಸಂತೋಷಕುಮಾರ್ ಬಜಾಲ್ ಮಾತನಾಡಿದರು. ಡಿವೈಎಫ್‌ಐ ಘಟಕದ ಪ್ರಶಾಂತ ಆಚಾರ್, ಪ್ರಶಾಂತ್ ಎಂ.ಬಿ. ಪ್ರದೀಪ್ ಉರ್ವಸ್ಟೋರ್ಸ್, ನಿತ್ಯಾನಂದ, ಸನತ್ ಉರ್ವಸ್ಟೋರ್ಸ್ ಮತ್ತಿತರರು ಸಮಾವೇಶವನ್ನು ಸಂಘಟಿಸಿದ್ದರು.

ವಾಮಂಜೂರು ವಾಡುಣ ತಿರುವೈಲು ಎಂಬಲ್ಲಿ ನಡೆದ ಸಮಾವೇಶವನ್ನು ಏಪ್ರಿಲ್ 10ರಂದು ವಾಮಂಜೂರು ಡಿವೈಎಫ್‌ಐ ಘಟಕ ಏರ್ಪಡಿಸಿತ್ತು. ಡಿವೈಎಫ್‌ಐನ ಮನೋಜ್ ವಾಮಂಜೂರು, ದಿನೇಶ್ ವಾಮಂಜೂರು, ರೈತ ಸಂಘದ ನಾಯಕರಾದ ಯಾದವಶೆಟ್ಟಿ, ಗಂಗಯ್ಯ ಅಮೀನ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ನೂರಕ್ಕೂ ಮೀರಿ ಜನ ಸಮಾವೇಶದಲ್ಲಿ ಭಾಗವಹಿಸಿದ್ದರು.

ಏಪ್ರಿಲ್ 11ರಂದು ಬಜಾಲ್ ಪಕ್ಕಲಕ್ಕ ಯುವಕ ಮಂಡಲದಲ್ಲಿ ಪಕ್ಕಲಕ್ಕ ಘಟಕವು ಸಮಾವೇಶವನ್ನು ಏರ್ಪಡಿಸಿತ್ತು. ಸುಮಾರು 100 ಜನ ಸಮಾವೇಶದಲ್ಲಿ ಭಾಗವಹಿಸಿದ್ದರು. ಡಿವೈಎಫ್‌ಐ ನಾಯಕರಾದ ಮುನೀರ್ ಕಾಟಪಳ್ಳಿ ಸಂತೋಷಕುಮಾರ್ ಬಜಾಲ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಡಿವೈಎಫ್‌ಐನ ಯಶಪಾತಾ, ದೀಪಕ್ ಬಜಾಲ್, ಯುವತಿಯರ ಘಟಕಾಧ್ಯಕ್ಷೆ ದೀಪಿಕಾ ಬಜಾಲ್. ಯುವಕ ಮಂಡಲದ ಕಮಲಾಕ್ಷ ಶೆಟ್ಟಿ ಮತ್ತಿತರರು ಸಮಾವೇಶವನ್ನು ಸಂಘಟಿಸಿದ್ದರು.

# ಅಮೆರಿಕ ಸರ್ಕಾರ 'ಬಂದ್' ಬೆದರಿಕೆ

ಪುಟ 14 ರಿಂದ

ಈ ರಿಪಬ್ಲಿಕನ್ ಬ್ಲಾಕ್ ಮೇಲಿಗೆ ಬಗ್ಗಿ ಅಧ್ಯಕ್ಷ ಒಬಾಮಾ ಮತ್ತು ಡೆಮೊಕ್ರಾಟಿಕ್ ಪಕ್ಷ ಒಂದು ರಾಜಿ ಒಪ್ಪಂದ ಮಾಡಿಕೊಂಡರು. ಅದು ತಾತ್ಕಾಲಿಕವಾಗಿ ಸರ್ಕಾರ ಪೂರ್ಣ ಬಂದಾಗುವುದನ್ನು ತಪ್ಪಿಸಿದೆ. ಆದರೆ ಹಲವು ಸರ್ಕಾರದ ಸೇವೆಗಳ ಭಾಗಶಃ ಶಾಶ್ವತವಾಗಿ ಬಂದು ಮಾಡುವುದಕ್ಕೆ ಅನುವು ಮಾಡಿಕೊಟ್ಟಿದೆ. ರಾಜಿ ಸೂತ್ರದ ಪ್ರಕಾರ 38 ಶತಕೋಟಿ ಡಾಲರುಗಳ ಕಡಿತ ಆಗಲಿದೆ. ಇದು ಒಬಾಮಾ ಬಜೆಟ್ ನಿಗದಿ ಮಾಡಿದ ಮಟ್ಟಕ್ಕಿಂತ 78 ಶತಕೋಟಿ ಡಾಲರು ಕಡಿಮೆ. ಸುಮಾರು 4 ಲಕ್ಷ ಉದ್ಯೋಗಗಳ (ಹೆಚ್ಚಾಗಿ ಖಾಸಗಿ ಕ್ಷೇತ್ರದಲ್ಲಿ) ಕಡಿತ ಗೊಳ್ಳಲಿದೆ. ಪರಿಸರ ರಕ್ಷಣಾ ಏಜೆನ್ಸಿ, ಕುಟುಂಬ ಯೋಜನೆ, ಸಾರ್ವಜನಿಕ ರೇಡಿಯೋ ಕಾರ್ಯಕ್ರಮಗಳನ್ನು ಪೂರ್ತಿಯಾಗಿ ನಿಲ್ಲಿಸುವುದು ಅಥವಾ ತೀವ್ರ ಕಡಿತ ಮಾಡುವುದು ಸಹ ಅದರಲ್ಲಿ ಸೇರಿವೆ.

ಕಳೆದ ರಿಪಬ್ಲಿಕನ್ನರು ಡಿಸೆಂಬರಿನಲ್ಲಿ ಇದೇ ರೀತಿಯ ಬ್ಲಾಕ್ ಮೇಲ್ ನಡೆಸಿ ಆಗ ಮುಗಿಯಬೇಕಾಗಿದ್ದ ಶೇ. 2 ಶ್ರೀಮಂತರಿಗೆ ಬುಶ್ ಕೊಟ್ಟಿದ್ದ ತೆರಿಗೆ ವಿನಾಯಿತಿಯನ್ನು ಎರಡು ವರ್ಷಕ್ಕೆ ವಿಸ್ತರಿಸಲಾಗಿತ್ತು. ಇಲ್ಲದಿದ್ದರೆ ಆರು ತಿಂಗಳಲ್ಲಿ ಮುಗಿಯಲಿದ್ದ ನಿರುದ್ಯೋಗದ ಇನ್ಶೂರೆನ್ಸ್ ಅವಧಿಯನ್ನು ವಿಸ್ತರಿಸಲು ಬಿಡುವುದಿಲ್ಲ ಎಂದು ಬೆದರಿಕೆ ಹಾಕಲಾಗಿತ್ತು. ರಾಜಿ ಸೂತ್ರದ ನಂತರ ನಿರುದ್ಯೋಗದ ಇನ್ಶೂರೆನ್ಸ್ ಅವಧಿಯನ್ನು ಒಂದು ವರ್ಷಕ್ಕೆ ಮಾತ್ರ ವಿಸ್ತರಿಸಲಾಗಿತ್ತು. ಇದೇ ರೀತಿಯ ಬ್ಲಾಕ್ ಮೇಲಿಗೆ ಮೇ ಮತ್ತು ಅಕ್ಟೋಬರಿನಲ್ಲಿ ಅವಕಾಶ ಇದೆ. ಮೇ ನಲ್ಲಿ ಸರ್ಕಾರದ ಸಾಲದ ಮಿತಿಯ ಏರಿಕೆ ಬಗ್ಗೆ ಸದನ ಮಂಜೂರು ಮಾಡಬೇಕು. ಶ್ರೀಮಂತರ ಪರ ರಿಪಬ್ಲಿಕನ್/ಟೀ ಪಾರ್ಟಿಯ ಇಂತಹ ಬ್ಲಾಕ್ ಮೇಲ್ ಬಳಸಿ ಒಬಾಮಾರ ಸೀಮಿತ ಜನಪರ ಆರ್ಥಿಕ ನೀತಿ-ಕಾರ್ಯಕ್ರಮಗಳಿಗೆ ಕಲ್ಲು ಹಾಕುವ ಪಿತೂರಿ ನಡೆಸುತ್ತಿದೆ. ಈಗಾಗಲೇ ಬರಿಯ ಮಾತಿನ ಮಲ್ಲ, ಕೆಲಸದಲ್ಲಿ ಸೊನ್ನೆ ಎಂಬ ಹೆಸರು ಗಳಿಸಿರುವ ಒಬಾಮಾರ ಜನಪ್ರಿಯತೆಯನ್ನು ಮಟ್ಟ ಹಾಕುವ ಪಿತೂರಿ ರಿಪಬ್ಲಿಕನ್/ಟೀ ಪಾರ್ಟಿಯುವರದು. ಒಬಾಮಾ ಈ ಉಭಯ-ಸಹಮತ ರಾಜಿಸೂತ್ರದ ಹಾದಿ ಬಿಟ್ಟು, ಈ ಬ್ಲಾಕ್ ಮೇಲ್ ನ್ನು ಮತ್ತು ಅವರ ಹಿಂದಿರುವ ಬೃಹತ್ ಕಾರ್ಪೋರೇಟುಗಳನ್ನು ಧೃಢವಾಗಿ ಎದುರಿಸದೆ ಅದರ ವಿರುದ್ಧ ಆಣಿ ನೆರೆಸಲು ಜನರ ಬಳಿ ಹೋಗುವ ಧೈರ್ಯ ತೋರದೆ, 2012 ರಲ್ಲಿ ನಡೆಯುವ ಅಧ್ಯಕ್ಷೀಯ ಚುನಾವಣೆಯಲ್ಲಿ ಬುಶ್ ಯುಗಕ್ಕಿಂತ ಭೀಕರ ರಾಜಕೀಯ ಭವಿಷ್ಯ ಜನತೆಗೆ ಕಾದಿದೆ.

# ಬಡವರ ಪ್ರಗತಿ...

ಪುಟ 11 ರಿಂದ

**ಮತ್ತು ಮೀನನ್ನು ಉತ್ಪಾದಿಸುವ ರಾಜ್ಯವೂ ಹೌದು!!**

ರಾಜ್ಯದಲ್ಲಿ ನೀರಾವರಿ ವ್ಯವಸ್ಥೆಯ ಅನುಕೂಲಗಳೂ ಹೆಚ್ಚಾಗಿವೆ. 1977 ರಲ್ಲಿ ಶೇ.39 ರಷ್ಟು ಭೂಮಿ ನೀರಾವರಿಗೆ ಒಳಪಟ್ಟಿತ್ತು. ಅದೀಗ ಶೇ 80ಕ್ಕೆ ತಲುಪಿದೆ. ಬೆಳೆಗಳ ಸಾಂದ್ರತೆ ಶೇ.182 ಕ್ಕೆ ಏರಿದೆ.

ರಾಜ್ಯದ ಕೃಷಿ ಕ್ಷೇತ್ರದಲ್ಲಿ ಮಾಡಬೇಕಾದ ಇನ್ನೂ ಹಲವು ಕಾರ್ಯಗಳಿವೆ. ಲಾಗುವಾಡುಗಳ ವೈಜ್ಞಾನಿಕ ನಿರ್ವಹಣೆ, ಬೆಳೆಗಳ ವಿವಿಧೀಕರಣ, ಕೃಷಿ ಸಂಬಂಧಿತ ಕ್ಷೇತ್ರಗಳ ವಿಸ್ತರಣೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕಿದೆ. ರಾಜ್ಯ ಸರ್ಕಾರವಲ್ಲದೆ ಪಂಚಾಯತು ಸಂಸ್ಥೆಗಳೂ ಈ ಕಾರ್ಯದಲ್ಲಿ ತೊಡಗಿವೆ.

ಕಳೆದ 34 ವರ್ಷಗಳಲ್ಲಿ ಎಡರಂಗ ಸರ್ಕಾರ ಹಲವು ಸಾಧನೆಗಳನ್ನು ಮಾಡಿದೆ. ಪರ್ಯಾಯ ಅಭಿವೃದ್ಧಿ ಮಾರ್ಗವನ್ನು ಅದು ಬಡಜನರ ಪ್ರಗತಿ ಸಾಧಿಸಲು ಅಳವಡಿಸಿಕೊಂಡಿದೆ. ಈ ಸಾಧನೆಗಳನ್ನು ಮುಂದಕ್ಕೆ ಕೊಂಡೊಯ್ಯಲು ರಾಜಕೀಯವಾಗಿ ಸೂಕ್ತ ವಾತಾವರಣ ಬೇಕಿದೆ. ಎಡಶಕ್ತಿಗಳ ವಿರುದ್ಧ ಒಗ್ಗಟ್ಟಾಗಿರುವ ಪ್ರತಿಗಾಮಿ ಶಕ್ತಿಗಳನ್ನು ಬಗ್ಗುಬಡಿಯಬೇಕಾಗಿದೆ.


JANASHAKTHI KANNADA VARA PATRIKE APRIL 24, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2010-12
Posted at MBC Bangalore GPO

# ಸೋವಿಯತ್ ಒಕ್ಕೂಟದ ಐತಿಹಾಸಿಕ ಗಗನಯಾನ : ಯೂರಿ ಗಗಾರಿನ್ ಗಗನಯಾನಕ್ಕೆ 50 ವರ್ಷಗಳ ಸಂಭ್ರಮಾಚರಣೆ



1961ರ ಏಪ್ರಿಲ್ 12 ರಂದು ಇಡೀ ವಿಶ್ವದ ಜನತೆಯನ್ನು ದಿಘ್ಮೂಢರನ್ನಾಗಿಸಿದಂತ ಘಟನೆಗೆ ಮನುಕುಲ ಸಾಕ್ಷಿಯಾಯಿತು. ಮರಗೆಲಸಗಾರನ ಮಗನಾಗಿದ್ದ ಗಗನಯಾನಿ ಯೂರಿ ಗಗಾರಿನ್ ರನ್ನು ಹೊತ್ತ ವೊಸ್ತಕ್ ಎಂಬ ಗಗನನೌಕೆಯು ಕಜಕ್‌ಸ್ತಾನದ ನಿಲ್ದಾಣದಿಂದ ರಾಕೆಟ್ ವೇಗದಲ್ಲಿ ಗಗನಕ್ಕೆ ಹಾರಿ ಭೂಮಿಯ ಸುತ್ತ 79 ನಿಮಿಷಗಳ ಕಾಲ ಪ್ರದಕ್ಷಿಣೆ ಹಾಕಿ ವಾಪಸಾಯಿತು. ಆದರೆ ವಾಪಸಾಗುವಾಗ ಕೆಲವು ತಾಂತ್ರಿಕ ತೊಂದರೆಗಳಿಂದ ಎಲ್ಲರೂ ಆತಂಕಗೊಂಡ ಕ್ಷಣವದು. ಅಂತಿಮವಾಗಿ ಗಗಾರಿನ್ ವೋಲ್ಗಾ ನದಿಯ ಬಳಿ ಪ್ಯಾರಾಚೂಟ್‌ನಿಂದ ಜಿಗಿದು





ಬಂದರು. ಅಷ್ಟರಲ್ಲಿಯೇ ಯೂರಿ ಗಗಾರಿನ್ ಸೋವಿಯತ್ ಒಕ್ಕೂಟದ ರಾಷ್ಟ್ರೀಯ ಹೀರೋ ಮಾತ್ರ ಆಗಿದ್ದಲ್ಲದೇ ಇಡೀ ವಿಶ್ವದ ಜನತೆಯ ನಾಲಗೆಯ ಮೇಲೆ ಅವರ ಹೆಸರು ಕುಣಿದಾಡಿತು.

ಮನುಕುಲದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಮನುಷ್ಯ ಗಗನಯಾನ ಮಾಡಿದ್ದು ವಿಶ್ವದ ತುಂಬೆಲ್ಲ ರೋಮಾಂಚನವುಂಟು ಮಾಡಿದರೆ ಸಮಾಜವಾದಿ ಸೋವಿಯತ್ ಒಕ್ಕೂಟದ ಕಡುವೈರಿಯಾಗಿದ್ದ ಸಾಮ್ರಾಜ್ಯಶಾಹಿ ಅಮೇರಿಕಾಗೆ ಒಳಗೊಳಗೆ ನಡುಕ ಉಂಟಾಗಿತ್ತು. ಏಕೆಂದರೆ ಗಗನಯಾನ ತಂತ್ರಜ್ಞಾನದಲ್ಲಿ ಈ ಘಟನೆ ಸೋವಿಯತ್ ರಷ್ಯಾ ಒಕ್ಕೂಟದ ಮೇಲುಗೈ ಹೊಂದಿರುವುದಕ್ಕೆ ಸಾಕ್ಷಿಯಾಗಿತ್ತು. ಇದಾದ ನಾಲ್ಕು ತಿಂಗಳಿಗೆ ಮತ್ತೆ ಘೆರ್ಮನ್ ಟೈಟವ್ ಎಂಬ ಗಗನಯಾನಿಯನ್ನು ಹೊತ್ತು ಮತ್ತೊಂದು ಗಗನನೌಕೆ ಭೂಮಿಯನ್ನು 25 ಘಂಟೆ ಕಾಲ 17 ಬಾರಿ ಪ್ರದಕ್ಷಿಣೆ ಹಾಕಿತು. ಸೋವಿಯತ್ ಒಕ್ಕೂಟದ ರಾಕೆಟ್ ತಂತ್ರಜ್ಞಾನದ ಜನಕ ಎಂದೇ ಹೆಸರಾಗಿರುವ ಸೆರ್ಗಿ ಕೊರೊಲ್ಯೊವ್ ರವರು ಈ ತಂತ್ರಜ್ಞಾನದ ಅಭಿವೃದ್ಧಿಗೆ ನೀಡಿರುವ ಕೊಡುಗೆ ಅಪಾರ. ಈ ಘಟನೆ 1917ರ ಅಕ್ಟೋಬರ್ ಕ್ರಾಂತಿಯಂತೆಯೇ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸೋವಿಯತ್ ಒಕ್ಕೂಟ ಹೊಂದಿರುವ ಕ್ರಾಂತಿಕಾರಿ ಬೆಳವಣಿಗೆಗೆ ಸಾಕ್ಷಿಯಾಗಿದೆ.




ಇದರಿಂದ ವಿಚಲಿತಗೊಂಡ ಅಮೇರಿಕಾ 1961ರ ಮೇ ತಿಂಗಳಲ್ಲಿ ಒಂದು ಗಗನನೌಕೆಯನ್ನು ಹಾರಿಬಿಟ್ಟಿತಾದರೂ ಅದು ಕೇವಲ 15 ನಿಮಿಷ ಮಾತ್ರವೇ ಹಾರಾಡಿತು. 1962ರಲ್ಲಿಯೂ ಮತ್ತೊಂದು ಅಮೇರಿಕಾದ ಗಗನನೌಕೆ ಕೇವಲ 3 ಪ್ರದಕ್ಷಿಣೆ ಹಾಕಿ ಹಿಂದಿರುಗಿತು. ಯೂರಿ ಗಗಾರಿನ್ ಗಗನಯಾನ ಮಾಡಿದ್ದು ಅಮೇರಿಕಾದ ಮೇಲೆ ಅದೆಷ್ಟು ಒತ್ತಡ ಉಂಟು ಮಾಡಿತೆಂದರೆ, ಗಗಾರಿನ್ ಯಾನದ ಒಂದು ತಿಂಗಳ ನಂತರ ಅಮೇರಿಕಾದ ಅಧ್ಯಕ್ಷ ಜಾನ್ ಎಫ್ ಕೆನಡಿಯವರು ಒಂದು ಅಧಿಕೃತ ಘೋಷಣೆ ಹೊರಡಿಸಿ ಆ ದಶಕದೊಳಗೆ ಅಮೇರಿಕಾ ಚಂದ್ರನ ಬಳಿಗೆ ಮಾನವನನ್ನು ಒತ್ತೊಯ್ಯಲಿದೆ ಎಂದರು. ಕೊನೆಗೆ ಅದು ನನಸಾಗಿದ್ದು 1969ರಲ್ಲಿ ನೀಲ್ ಆರ್ಮ್‌ಸ್ಟ್ರಾಂಗ್ ಮತ್ತು ಎಡ್ವಿನ್ ಚಂದ್ರ ಗ್ರಹದಲ್ಲಿ ಪಾದಾರ್ಪಣೆ ಮಾಡಿದಾಗಲೇ.



ಅಮೇರಿಕಾ ಕೊಲಂಬಿಯಾ, ಛಾಲೆಂಜರ್, ಡಿಸ್ಕವರಿ, ಅಟ್ಲಾಂಟಿಸ್ ಮತ್ತು ಎಂಡೇವರ್ ಎಂಬ ಗಗನನೌಕೆಗಳನ್ನು ಒಂದಾದ ನಂತರ ಮತ್ತೊಂದರಂತೆ ಕಳುಹಿಸಿತು. ಸೋವಿಯತ್ ಒಕ್ಕೂಟ ಛಿದ್ರಗೊಂಡ ನಂತರ ಅಮೇರಿಕಾ ಗಗನಯಾನ ತಂತ್ರಜ್ಞಾನದಲ್ಲಿ ಮೇಲುಗೈ ಸಾಧಿಸಿತು. ಇತ್ತೀಚೆಗೆ 16 ರಾಷ್ಟ್ರಗಳು ಒಗ್ಗೂಡಿ ಗಗನದಲ್ಲಿ ನಿರ್ಮಿಸಿರುವ ಅಂತರಾಷ್ಟ್ರೀಯ ಗಗನ ನಿಲ್ದಾಣ, ಅಮೇರಿಕಾ ಮತ್ತು ಯೂರೋಪಿಯನ್ ಒಕ್ಕೂಟದ ಹಬಲ್ ಗಗನ ದೂರದರ್ಶಕ ಮತ್ತು ಚೀನಾ ಮತ್ತು ಭಾರತ ದೇಶಗಳು ಚಂದ್ರಯಾನದಂಥಹ ಯೋಜನೆಗಳನ್ನು ಹಮ್ಮಿಕೊಂಡಿರುವುದು ಗಗನ ಶೋಧನೆಯ ಹೆಜ್ಜೆಗಳನ್ನು ತೀವ್ರಗೊಳಿಸಿವೆ.

ಸೋವಿಯತ್ ಒಕ್ಕೂಟದ ಪತನದ ನಂತರ ಹಿಂದಿನ ಅವಧಿಯಲ್ಲಿ ಆ ದೇಶ ಅಭಿವೃದ್ಧಿ ಪಡಿಸಿದ್ದ ಇಂತಹ ಹಲವಾರು ಅತ್ಯದ್ಭುತ ತಂತ್ರಜ್ಞಾನಗಳನ್ನು ಜೋಪಾನದಿಂದ ಕಾಪಾಡಿ ಮತ್ತಷ್ಟು ಅಭಿವೃದ್ಧಿಪಡಿಸಿ ಮುಂದೊಯ್ಯಲಾಗದೇ ಅಲ್ಲಿನ ಸರ್ಕಾರಗಳು ಅವನ್ನು ಹಾಳು ಮಾಡಿವೆಯೆಂದು ಹಲವಾರು ವಿಜ್ಞಾನಿಗಳು ಇಂದಿಗೂ ದೂರುತ್ತಾರೆ.

ಯೂರಿ ಗಗಾರಿನ್ ಆಕಾಶಯಾನ ಮಾಡಿದ ದಿನವೆಂದು ಪ್ರತಿ ವರ್ಷ ಏಪ್ರಿಲ್ 12ರಂದು ರಷ್ಯಾದಲ್ಲಿ 'ಕಾಸ್ಮೋನಾಟ್ ದಿನ' ಎಂದು ಆಚರಿಸುತ್ತಿದ್ದರು. ಈ ವರ್ಷದಿಂದ ವಿಶ್ವಸಂಸ್ಥೆಯು ಈ ಧಿನವನ್ನು 'ಅಂತರಾಷ್ಟ್ರೀಯ ಮಾನವ ಆಕಾಶಯಾನದ ದಿನ' ಎಂದು ಘೋಷಿಸಿದೆ. ○



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH